| ಅಕ್ಟೋಬರ್ 31 | ಯೇಸುವನ್ನು ಕರೆಯಿರಿ! | ಬೆಳಿಗ್ಗೆ : ಯೆರೆಮೀಯ 22,23<br>ಸಂಜೆ : ತೀತ 1 |
|---|---|---|

“ಯೇಸುವನ್ನೂ ಆತನ ಶಿಷ್ಯರನ್ನೂ ಮದುವೆಗೆ ಕರೆದರು” (ಯೋಹಾ. 2:2).

ಯೇಸುಕ್ರಿಸ್ತನನ್ನು ಘನಪಡಿಸಿ, ಆತನಿಗೆ ಮುಖ್ಯತ್ವವನ್ನು ನೀಡಿ, ಕಾನಾ ಊರಿನಲ್ಲಿ ಒಂದು ಮನೆಯವರು ಮದುವೆಯ ಸಮಾರಂಭಕ್ಕೆ ಆತನನ್ನು ಆಹ್ವಾನಿಸಿದರು. ಕರ್ತನು ತನ್ನ ತಾಯಿಯೊಂದಿಗೂ, ಶಿಷ್ಯರೊಂದಿಗೂ ಆ ಮದುವೆಯ ಕಾರ್ಯದಲ್ಲಿ ಭಾಗವಹಿಸಿದದು ಮಾತ್ರವಲ್ಲ, ತನ್ನ ಮೊದಲನೆಯ ಅದ್ಭುತ ಕಾರ್ಯವನ್ನೂ ಆ ಮದುವೆಯ ಮನೆಯಲ್ಲಿ ಮಾಡಿದನು.

ಯೇಸುಕ್ರಿಸ್ತನನ್ನು ನೀವು ಆಹ್ವಾನಿಸುವಾಗ ಆತನು ನಿಮ್ಮೊಂದಿಗೆ ಬರುವನು. ಅದು ಯಾವ ಸ್ಥಳವಾಗಿರಲಿ, ಯಾವ ವೇಳೆಯಾಗಿರಲಿ ಆತನು ಬರಲು ಸಿದ್ಧ. “ನನ್ನ ನಾಮವನ್ನು ಹೇಳಿಕೊಳ್ಳುವ ಎಲ್ಲಾ ಸ್ಥಳಗಳಲ್ಲಿ ನಾನು ಬಂದು ಆಶೀರ್ವದಿಸುವೆನು” ಎಂದು ಆತನು ವಾಗ್ದಾನ ಮಾಡಿರುವನಲ್ಲವೇ! ಆದ್ದರಿಂದ ಕ್ರಿಸ್ತನನ್ನು ಕರೆದು ಘನಪಡಿಸಿರಿ. ಮೊದಲು ದೇವರ ರಾಜ್ಯಕ್ಕಾಗಿಯೂ, ಆತನ ನೀತಿಗಾಗಿಯೂ ತವಕ ಪಡಿರಿ. ಇವುಗಳು ಕೂಡ ಅವೆಲ್ಲವೂ ನಿಮಗೆ ದೊರಕುವವು (ಮತ್ತಾ. 6:33) ಎಂದು ಕರ್ತನು ಹೇಳುತ್ತಾನೆ. ಅನೇಕರು ಜೀವಿತದಲ್ಲಿ ಕಷ್ಟ ಸಂಕಟಗಳು ತಮ್ಮನ್ನು ತಾಕುವವರೆಗೂ ದೇವರನ್ನು ನೆನೆಯುವದೇ ಇಲ್ಲ. ತಮ್ಮ ವಿದ್ಯೆ, ಬುದ್ಧಿ, ಸಂಪತ್ತುಗಳಿಂದ ಎಲ್ಲವನ್ನೂ ಜಯಿಸಲು ಸಾಧ್ಯವೆಂದು ಭಾವಿಸಿರುತ್ತಾರೆ. ಅವೆಲ್ಲದರ ಮೂಲ ಕರ್ತನೇ ಎಂಬುದು ಮರೆತುಹೋಗಿರುತ್ತಾರೆ. ಅತಿಯಾದ ವೇದನೆಗಳು ಎಲ್ಲಾ ಕಡೆಗಳಿಂದಲೂ ಬಂದು ಮುತ್ತುವಾಗ ಕರ್ತನನ್ನು ಹುಡುಕುತ್ತಾರೆ. ಅಂಥವರಿಗೂ ದೇವರು ಸಹಾಯ ಮಾಡುತ್ತಾನೆ. ಯಾಕೆಂದರೆ ಆತನು ಪ್ರೀತಿಸ್ವರೂಪನೂ, ಕರುಣಾಮಯನೂ, ದಯಾಪೂರಿತನೂ ಆಗಿರುವನು. ಕಾನಾ ಊರಿನ ಮದುವೆಗೆ ಯೇಸುವನ್ನು ಮಾತ್ರವಲ್ಲ, ಆತನ ಶಿಷ್ಯರನ್ನೂ ಆಹ್ವಾನಿಸಲಾಗಿತ್ತು. ಅವರು ಆತನ ಶಿಷ್ಯರೆಂದು ಅವರನ್ನು ಗೌರವಿಸಲಾಯಿತು. ಕರ್ತನೊಂದಿಗೂ ಆತನ ಸೇವಕರೊಂದಿಗೂ ನೀವು ಅನ್ಯೋನ್ಯತೆಯಿಂದಿರುವದು ಎಷ್ಟೋ ಭಾಗ್ಯಕರವಾದದ್ದು.

ದೇವಮಕ್ಕಳೇ, ನಿಮ್ಮ ಜೀವಿತದ ಎಲ್ಲಾ ಕಾರ್ಯಗಳಲ್ಲಿ ಎಲ್ಲಾ ಸಂದರ್ಭಗಳಲ್ಲಿ ಕರ್ತನನ್ನು ಮೊದಲ ಸ್ಥಾನದಲ್ಲಿಟ್ಟು ಘನಪಡಿಸಿರಿ. ಆಗ ನಿಮ್ಮ ಕಾರ್ಯಗಳು ಸಫಲವಾಗುವವು. ಹಾಗೆಯೇ ದೇವಸೇವಕರೊಂದಿಗೆ ಅನ್ಯೋನ್ಯತೆಯುಳ್ಳವರಾಗಿರ್ರಿ, ಅವರನ್ನು ಗೌರವಿಸಿರಿ.

*ನೆನಪಿಗೆ : ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನೂ ನಿಮ್ಮೊಂದಿಗಿರುವನು. ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು; ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟುಬಿಡುವನು (2 ಪೂ.ವೃ. 15:2).*



# ಅನುದಿನದ ಆಹಾರ

ANVDHINADA AHARA - October 2014

ಅಕ್ಟೋಬರ್ – 2014

ಮರ 15 ಹಣ್ಣು 10 Tree 15 Fruit 10

## ನಿಮ್ಮ ಅಧಿಕಾರಗಳು!

“ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿಬಿಯಲ್ಲಾ, ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೆ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ. ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶ ಪಕ್ಷಿಗಳು, ಸಮುದ್ರದ ಮೀನುಗಳು ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು, ಇವೆಲ್ಲವನ್ನೂ ಅವನಿಗೆ ಅಧೀನಮಾಡಿದ್ದೀಯಲ್ಲವೇ” (ಕೀರ್ತನೆ. 8:5–8).

ಮನುಷ್ಯನನ್ನು ಸೃಷ್ಟಿಸಿದ ಕೂಡಲೇ ಕರ್ತನು ಮಾಡಿದ ಮೊದಲ ಕಾರ್ಯ ಅವನನ್ನು ಮನಸಾರೆ ಆಶೀರ್ವದಿಸಿದ್ದು. ಆಳ್ವಿಕೆಯನ್ನೂ, ಅಧಿಕಾರವನ್ನೂ ಅವನಿಗೆ ನೀಡಿದ್ದು. ನಂತರ ಅವನನ್ನು ನೋಡಿ, “ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ” ಎಂದು ಹೇಳಿದನು (ಆದಿ. 1:28).

ಎಲ್ಲ ಸೃಷ್ಟಿಯಲ್ಲೂ, ಶ್ರೇಷ್ಠವಾದ ಸೃಷ್ಟಿ, ಮನುಷ್ಯನ ಸೃಷ್ಟಿಯೇ. ಮನುಷ್ಯನೊಳಗೆ ಮಾತ್ರವೇ ತನ್ನ ಮೂಗಿನ ಶ್ವಾಸವನ್ನು ಊದಿ, ಅವನನ್ನು ಜೀವಾತ್ಮನನ್ನಾಗಿಸಿದನು. ಸಂಜೆಯ ತಂಗಾಳಿಯ ವೇಳೆಯಲ್ಲಿ ಅವನೊಂದಿಗೆ ಸಂಚರಿಸಿದನು. ಯಾವ ದೇವದೂತನೊಂದಿಗಾಗಲಿ, ಯಾವ ಮೃಗಜೀವಿಯೊಂದಿಗಾಗಲಿ ಆತನು ಸಂಚರಿಸಲಿಲ್ಲ. ಅರಸನಾದ ದಾವೀದನು ಒಂದು ದಿನ ಕರ್ತನು ಮನುಷ್ಯನಿಗೆ ತೋರಿಸುವ ಪ್ರೀತಿಯನ್ನೂ, ಕೃಪೆಯನ್ನೂ, ದಯೆಯನ್ನೂ ನೆನಸಿ ನೋಡಿದನು. ಕರ್ತನ ಸೃಷ್ಟಿಕಾರ್ಯ ಮಹತ್ತರವಾದದ್ದಾದರೂ, ಮನುಷ್ಯನ ಮೇಲೆ ಇಟ್ಟ ಪ್ರೀತಿ ಅದಕ್ಕಿಂತ ದೊಡ್ಡದಾಗಿರುವದನ್ನು ಕಂಡನು. “ನಿನ್ನ ಕೈಕೆಲಸವಾಗಿರುವ ಆಕಾಶ ಮಂಡಲವನ್ನು ನೀನು ಉಂಟು ಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ–ಮನುಷ್ಯನು ಎಷ್ಟು ಮಾತ್ರದವನು ಅವನನ್ನು ನೀನು ಏಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? (ಕೀರ್ತ. 8:3–4) ಎಂದು ಹೇಳುತ್ತಾನೆ.

ಕರ್ತನು ಮನುಷ್ಯನನ್ನು ತನ್ನ ಸಾರೂಪ್ಯದಲ್ಲಿ ಸೃಷ್ಟಿಸಿದ್ದು ಮಾತ್ರವಲ್ಲ, ತಾನು ಸೃಷ್ಟಿಸಿದ ಎಲ್ಲ ಜೀವರಾಶಿಗಳನ್ನು ಆಳುವ ಅಧಿಕಾರವನ್ನು ನೀಡಿದನು. ದೇವರ ಮಕ್ಕಳಾದ ನೀವು ನಿಮಗೆ ಕೊಟ್ಟಿರುವ ಅಧಿಕಾರಗಳನ್ನು ಅರಿತುಕೊಳ್ಳಬೇಕು. ನೀವು ಆಳ್ವಿಕೆ ನಡೆಸಲು ಹುಟ್ಟಿದವರು. ಅಧಿಕಾರವನ್ನು ಮಾತ್ರವಲ್ಲ, ಅದನ್ನು ಉಪಯೋಗಿಸುವ ಶಕ್ತಿಯನ್ನೂ ನೀಡಿರುವನು. ಆದ್ದರಿಂದಲೇ ನಿಮ್ಮನ್ನು ಮೇಲಿನಿಂದ ಬರುವ ಉನ್ನತ ಬಲದಿಂದ ತುಂಬುವನು. ನಾನು ಮೂರುವರುಷದ ಮಗುವಾಗಿದ್ದಾಗ ಟೈಫಾಯಿಡ್ ಜ್ವರ ಬಂದು ನನ್ನ ಒಂದು ಕಾಲು ಪೋಲಿಯೋದಿಂದ ಊನವಾಯಿತು. ಶಾಲೆಗೆ ಹೋದಾಗ ಇತರರು ನನ್ನನ್ನು ಕುಂಟ, ಕುಂಟ ಎಂದು ಗೇಲಿ ಮಾಡುತ್ತಿದ್ದದರಿಂದ ನನ್ನ ಮನಸ್ಸು ನೊಂದುಹೋಯಿತು. ಕೀಳರಿಮೆ ಕಾಡಲಾರಂಭಿಸಿತು. ಆದರೆ ಒಂದು ದಿನ ಬಂದಿತು. ಯೇಸುಕ್ರಿಸ್ತನ ಕಲ್ವಾರಿಯ ಪ್ರೀತಿಯನ್ನು ಅರಿತೆನು. ನನ್ನನ್ನು ತುಂಬುಹೃದಯದಿಂದ ಪ್ರೀತಿಸುವಾತನೊಬ್ಬನಿರುವನೆಂಬುದನ್ನು ಅರಿತೆನು. ಆತನು ನನಗಾಗಿ ಕಲ್ವಾರಿ ಶಿಲುಬೆಯಲ್ಲಿ ಮಾಡಿದ ತ್ಯಾಗವು ನನ್ನ ಹೃದಯವನ್ನು ಕರಗಿಸಿತು. ಯೇಸುಕ್ರಿಸ್ತನ ರಕ್ತವು ನನ್ನನ್ನು ತೊಳೆದು, ಅಮೂಲ್ಯವಾದವನನ್ನಾಗಿ ಮಾರ್ಪಡಿಸಿಬಿಟ್ಟಿತು. ನಾನು ರಾಜಾಧಿರಾಜನ ಮಗನೆಂಬ ಭಾವನೆ ನನ್ನಲ್ಲಿ ಉಂಟಾಯಿತು. ಒಂದು ದಿನ ಪವಿತ್ರಾತ್ಮನ ಅಭಿಷೇಕ ನನ್ನನ್ನು ತುಂಬಿದಾಗ, ಅದುವರೆಗೆ ಇದ್ದ ಕೀಳರಿಮೆ ಎಲ್ಲಿ ಹೋಯಿತೋ ನನಗೆ ತಿಳಿಯದು. ಅಪರಿಮಿತವಾದ ಸಂತೋಷದಿಂದ ಕರ್ತನು ನನ್ನನ್ನು ತುಂಬಿಸಿದನು. ಆನಂತರ ಯಾವದನ್ನೂ ಕುರಿತು ನಾನು ಚಿಂತಿಸಲಿಲ್ಲ. ಸತ್ಯವೇದವನ್ನು ಓದುತ್ತಾ, ಓದುತ್ತಾ ಕರ್ತನು ತನ್ನ ಮಕ್ಕಳಾಗಿ ನಮ್ಮನ್ನು ಎಷ್ಟು ಘನಪಡಿಸುತ್ತಾನೆ, ಎಷ್ಟು ಅಧಿಕಾರವನ್ನು, ಬಲವನ್ನು ನೀಡುವನು ಎಂಬುದನ್ನು ಅರಿಯುವಾಗ, ನನ್ನ ಹೃದಯ ಆನಂದಪರವಶಗೊಂಡಿತು.

ಪ್ರತಿಯೊಬ್ಬ ವಿಶ್ವಾಸಿಯೂ ತಾನು ಯಾರು? ತನಗೆ ಕರ್ತನು ಕೊಟ್ಟಿರುವ ಅಧಿಕಾರ ಏನು? ಬಲವೇನು? ಆಳ್ವಿಕೆ ಏನು? ಎಂಬುದನ್ನು ಅರಿತುಕೊಳ್ಳಬೇಕು. ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ತಮ್ಮ ಅಧಿಕಾರವೇನು? ಎಂಬುದು ತಿಳಿಯದೇ ಹೋದರೆ, ಸರ್ಕಾರ ತಮಗೆ ಕೊಟ್ಟ ಅಧಿಕಾರವನ್ನು ಉಪಯೋಗಿಸಲು ಸಾಧ್ಯವಿಲ್ಲ. ಇಂದು ಅನೇಕ ವಿಶ್ವಾಸಿಗಳು ಕರ್ತನು ತಮಗೆ ಕೊಟ್ಟ ಅಧಿಕಾರವನ್ನು ತಿಳಿಯದೇ ಇರುವದರಿಂದ ಕತ್ತಲೆಯಲ್ಲಿ, ದಾಸತ್ವದಲ್ಲಿ ಬದುಕುತ್ತಿರುವರು. ಬಿಡುಗಡೆ ಹೊಂದುವ ಮಾರ್ಗ ತಿಳಿಯದಾಗಿರುವರು. ಅಧಿಕಾರದಿಂದ ಬಲ ಬರುವದು. ವಿದ್ಯುತಚ್ಛಕ್ತಿಯಿಂದ ಬಲ್ಬುಗಳು ಉರಿಯುವದು. ಹಾಗೆಯೇ ಕ್ರಿಸ್ತನ ಮೂಲಕವಾಗಿಯೂ ಅಧಿಕಾರ ಬರುವದು, ಆಳ್ವಿಕೆ ಬರುವದು, ಶಕ್ತಿ ಬರುವದು.

ಹಳೆಯ ಒಡಂಬಡಿಕೆಯಲ್ಲಿ, ಆದಾಮನು ತನ್ನ ಪಾಪದಿಂದಲೂ, ಅವಿಧೇಯತೆಯಿಂದಲೂ ಯಾವುದೆಲ್ಲವನ್ನೂ ಕಳೆದುಕೊಂಡನೋ ಅವೆಲ್ಲವುಗಳನ್ನು ಮನುಷ್ಯನು ಹಿಂದಕ್ಕೆ ಪಡೆಯುವಂತೆ ಯೇಸುಕ್ರಿಸ್ತನು ಈ ಭೂಮಿಗೆ ಬಂದನು. ಕಳೆದು ಹೋದದ್ದನ್ನು ಹುಡುಕಲು, ರಕ್ಷಿಸಲೆಂದೇ ಮನುಷ್ಯ ಕುಮಾರನು ಬಂದಿರುವನು (ಲೂಕ. 19:10). ಒಬ್ಬ ಮನುಷ್ಯನಾದ ಆದಾಮನ



ಅವಿಧೇಯತೆಯಿಂದ ಪಾಪವು ಲೋಕದಲ್ಲಿ ಜನಿಸಿತು. ಕ್ರಿಸ್ತನ ವಿಧೇಯತೆಯ ಮೂಲಕ ನಾವು ಕಳೆದುಕೊಂಡದ್ದನ್ನು ಪಡೆಯುವೆವು. ಕಲ್ವಾರಿ ಯುದ್ಧದಲ್ಲಿ ಕ್ರಿಸ್ತನು ಸೈತಾನನನ್ನು ಜಯಿಸಿದನು. ತನ್ನ ಹಿಮ್ಮಡಿಯಿಂದ ಸೈತಾನನ ತಲೆಯನ್ನು ಜಜ್ಜಿದನು. ಕರ್ತನು ಸೈತಾನನ ಮೇಲೂ, ದೆವ್ವಗಳ ಮೇಲೂ, ದುಷ್ಟ ಶಕ್ತಿಗಳ ಮೇಲೂ ನಿಮಗೆ ಅಧಿಕಾರವನ್ನು ಕೊಟ್ಟಿರುವನು. "ನೋಡಿರಿ, ಹಾವುಗಳನ್ನೂ, ಚೇಳುಗಳನ್ನೂ, ವೈರಿಯ ಸಮಸ್ತ ಬಲವನ್ನೂ ತುಳಿದುಹಾಕುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡು ಮಾಡುವದೇ ಇಲ್ಲ" (ಲೂಕ. 10:19). ಎಂಬುದು ಕರ್ತನ ವಾಗ್ದಾನವಾಗಿದೆ.

ದೇವಮಕ್ಕಳೇ, ಕರ್ತನು ನಿಮಗೆ ಕೊಟ್ಟಿರುವ ಅಧಿಕಾರವನ್ನು ಪಡೆದುಕೊಳ್ಳಿರಿ. "ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ಪ್ರತ್ಯಕ್ಷನಾದ ದೇವ ಕುಮಾರನು" (1 ಯೋಹಾ.3:8) ನಿಮ್ಮ ರಕ್ಷಕನಾಗಿರುವನು.


## ತಿಮೋಥೆ ಸತ್ಯವೇದ ತರಬೇತಿ

### TIMOTHY BIBLE COLLEGE

ಕರ್ತನಿಗಾಗಿ ಸೇವೆಸಲ್ಲಿಸಲು ದಾಹವುಳ್ಳವರಿಗೆ ಸತ್ಯವೇದದ ಆಳವಾದ ರಹಸ್ಯಗಳನ್ನು, ಕ್ರಮಬದ್ಧ ಅಧ್ಯಯನವನ್ನು ಕಲಿಸಿಕೊಡುವದರ ಸಲುವಾಗಿ ಸತ್ಯವೇದ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಯು 3 ತಿಂಗಳ ಅವಧಿಯದ್ದಾಗಿದ್ದು, 2015ನೇ ಜನವರಿ 15ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ.

ಇದರಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು 8ನೇ ತರಗತಿ ತೇರ್ಗಡೆಯಾಗಿರಬೇಕು. ಅರ್ಜಿಸಲ್ಲಿಸಲು ಇಚ್ಛಿಸುವವರು ನಿಮ್ಮ ವಿವರಗಳಾದ ಹೆಸರು, ವಯಸ್ಸು, ವಿದ್ಯಾರ್ಹತೆ, ಸಭೆ, ಉದ್ಯೋಗ ಹಾಗೂ ನಿಮ್ಮನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಯನ್ನು ಒಳಗೊಂಡ ಅರ್ಜಿಯನ್ನು ಅನುದಿನದ ಆಹಾರ ಕಛೇರಿಗೆ ಕಳುಹಿಸಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ
ದೂರವಾಣಿ ಸಂಖ್ಯೆ : 080–25712448, ಮೊಬೈಲ್ : 9341968008


### ವಾಗ್ದಾನ ವಚನ – ಯೆಶಾಯ 60:15

**"ನಿತ್ಯ ಶ್ರೇಷ್ಠತೆಯನ್ನು ದಯಪಾಲಿಸಿ ನಿನ್ನನ್ನು ತಲಾಂತರಗಳವರೆಗೆ ಉಲ್ಲಾಸಕರವಾಗುವಂತೆ ಮಾಡುವೆನು"**

## ನನ್ನ ಕಣ್ಣಿನಲ್ಲಿ ತೊಲೆಯಾ?

ಒಮ್ಮೆ ಡಿ.ಎಲ್. ಮೂಡಿಯವರು, ಒಂದು ಸುವಾರ್ತಾ ಕೂಟದಲ್ಲಿ ಪ್ರಸಂಗಿಸುತ್ತಿದ್ದರು. ಆ ಪ್ರಸಂಗವನ್ನು ಕೇಳುತ್ತಿದ್ದ ಒಬ್ಬ ವಿದ್ಯಾವಂತನಿಗೆ ಸಹಿಸಲಾಗಲಿಲ್ಲ. ಕಾರಣ, ಮೂಡಿಯವರ ಆಂಗ್ಲಭಾಷೆ, ವ್ಯಾಕರಣಬದ್ಧವಾಗಿರಲಿಲ್ಲ. ಸುವಾರ್ತಾಕೂಟ ಮುಗಿದ ಮೇಲೆ ಆ ವಿದ್ಯಾವಂತನು ಮೂಡಿಯವರ ಬಳಿಗೆ ಹೋಗಿ "ನೀವು ಮಾಡಿದ ಪ್ರಸಂಗದಲ್ಲಿ ಒಂದು ವಾಕ್ಯವಾದರೂ ವ್ಯಾಕರಣಬದ್ಧವಾಗಿರಲಿಲ್ಲ. ಒಂದು ವಾಕ್ಯವನ್ನಾದರೂ ಸರಿಯಾಗಿ ಪೂರ್ಣಗೊಳಿಸಿದ್ದಿಲ್ಲ. ಸರಿಯಾಗಿ ಮಾತನಾಡಬಾರದೇ? ಎಂದು ಹೇಳಿದರು.

ಮೂಡಿಯವರು, ಅವರು ಹೇಳಿದ್ದನ್ನೆಲ್ಲಾ ಶಾಂತಭಾವದಿಂದ ಕೇಳಿ "ಅಯ್ಯಾ, ನಾನು ಅಷ್ಟೊಂದು ಓದಿದವನಲ್ಲ, ಪ್ರಸಂಗಿಯೂ ಅಲ್ಲ, ನನಗಾಗಿ ಪ್ರಾಣವನ್ನೇ ಕೊಟ್ಟ ಯೇಸುಕ್ರಿಸ್ತನ ತ್ಯಾಗದ ಕುರಿತು ಮಾತನಾಡಬೇಕೆಂದು ನೆನಸಿ ಕಲ್ವಾರಿ ಪ್ರೀತಿಯಿಂದ ಪ್ರೇರಿಸಲ್ಪಟ್ಟವನಾಗಿ ಪ್ರಸಂಗಿಸಿದೆ. ಸರಿ, ನೀವು ವ್ಯಾಕರಣವನ್ನು ಕಲಿತವರಾಗಿದ್ದೀರಿ. ಜ್ಞಾನವಂತರಾಗಿದ್ದೀರಿ. ನಿಮಗೆ ಜ್ಞಾನವನ್ನು ಕೊಟ್ಟ ಕ್ರಿಸ್ತನಿಗಾಗಿ ನೀವು ಯಾವ ರೀತಿಯಲ್ಲಿ ಸೇವೆ ಮಾಡುವಿರಿ? ಎಂದು ಕೇಳಿದರು. ಆಗ, ಆ ವಿದ್ಯಾವಂತನು ತನ್ನ ಕಣ್ಣಿನಲ್ಲಿರುವ ತೊಲೆಯನ್ನು ಅರಿತುಕೊಂಡನು.

## ಸಂತೈಸುವ ದೇವರು

ಚಾರ್ಲ್ಸ್‌ಪೀರ್ ಸೇವಕರು ತನ್ನ ಮಡದಿಯೊಂದಿಗೆ ಮಿಷನರಿಯಾಗಿ ಭಾರತಕ್ಕೆ ಬಂದರು. ಭಾರತದಲ್ಲಿ ಅವರು ಕರ್ತನಿಗಾಗಿ ಪೂರ್ಣ ಹೃದಯದಿಂದ ಶ್ರಮಿಸಿದರು. ಆದರೆ ಫಕ್ಕನೆ ವ್ಯಾಧಿಪೀಡಿತರಾಗಿ ಮರಣಕ್ಕೆ ಸಮೀಪವಾದರು. ಅವರ ಮಡದಿಯು ಕಣ್ಣೀರಿನಿಂದ ಹಾಸಿಗೆಯ ಬಳಿ ಕುಳಿತು ಸ್ವಲ್ಪ ಸ್ವಲ್ಪವಾಗಿ ನಿತ್ಯಕ್ಕೆ ದಾಟಿಹೋಗುತ್ತಿರುವ ಅವರನ್ನು ನೋಡುತ್ತಾ ಮನೋವ್ಯಾಕುಲಗೊಂಡಿದ್ದಳು.

ಎಂಥಾ ಧೀರನಾಗಿ ಭಾರತಕ್ಕೆ ಬಂದರು. ರಾತ್ರಿ ಹಗಲೂ ಅಲೆದಲೆದು ಸೇವೆ ಮಾಡಿದರು. ಸೇವೆಯ ಹಾದಿಯಲ್ಲಿ ಅಮೋಘವಾಗಿ ಪ್ರಕಾಶಿಸಿದ ಬೆಳಕು ಈಗ ನಂದಿಹೋಗುತ್ತಿದೆಯಲ್ಲಾ ಕೊನೇ ಉಸಿರು ನಿಂತಿತು. "ರಾಜಾಧಿರಾಜನ ಸನ್ನಿಧಾನಕ್ಕೆ ಹೋಗುತ್ತಿದ್ದಾನೆ" ಎಂದು ಅಲ್ಲಿ ಇದ್ದಂತಹ ವಿಶ್ವಾಸಿಯ ಮೆಲು ದನಿ ನುಡಿಯಿತು. ಆ ಮಾತುಗಳು ವಿದ್ಯುತ್ ಪ್ರಹಾರದಂತೆ ಆತನ ಮಡದಿಯ ಹೃದಯವನ್ನು ಹಾದುಹೋಗಿ ಆಕೆಯನ್ನು ಸಂತೈಸಿತು. ಆತನು ಸಂತೈಸುವ ದೇವರು. ಕನಿಕರವುಳ್ಳಾತನೂ ಆಗಿದ್ದಾನೆ. ತನ್ನ ಪ್ರೀತಿಯ ಹಸ್ತದಿಂದ ಕಣ್ಣೀರನ್ನೊರೆಸುವಾತನು. ಸಂಕಟದಲ್ಲಿ ನಾವು ಮುಳುಗಿಹೋಗುವಂತೆ ಬಿಟ್ಟು ಬಿಡುವಾತನಲ್ಲ.

"ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ" (2 ಕೊರಿಂ.1:3–4).



## ಕರ್ತನು ಅನುಗ್ರಹಿಸಿದ್ದನ್ನು ವ್ಯರ್ಥಮಾಡಬಾರದು

ಒಬ್ಬ ಬೇಡನು ಕಾಡಿನ ಮಾರ್ಗದಲ್ಲಿ ನಡೆದು ಹೋದನು. ನದಿಯ ದಡದಲ್ಲಿ ಅಂದವಾದ ಅನೇಕ ಕಲ್ಲುಗಳು ಬಿದ್ದಿರುವದನ್ನು ಕಂಡು ಎಲ್ಲವನ್ನೂ ಆಯ್ದುಕೊಂಡನು. ಆ ಕಲ್ಲುಗಳನ್ನು ತನ್ನಲ್ಲಿದ್ದ ಕವಣೆಯಲ್ಲಿಟ್ಟು ಹಕ್ಕಿಗಳಿಗೆ ಗುರಿಯಿಟ್ಟು ಬೀಳಿಸಲು ಉಪಯೋಗಿಸಿದನು. ಅವನು ಬೀಸಿದ ಪ್ರತಿಯೊಂದು ಕಲ್ಲು ನೀರಿನಲ್ಲಿ ಬಿದ್ದು ಮುಳುಗಿದವು. ಕೊನೆಯಲ್ಲಿ ಒಂದೇ ಒಂದು ಕಲ್ಲು ಉಳಿಯಿತು. ಅವನು ಬೇಟೆಯನ್ನು ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ, ಆ ಒಂದು ಕಲ್ಲನ್ನು ಮಾತ್ರವೇ ಇಟ್ಟುಕೊಂಡಿದ್ದನು.

ಆ ಪಟ್ಟಣದಲ್ಲಿದ್ದ ರತ್ನಗಳ ವ್ಯಾಪಾರಿ ಆ ಕಲ್ಲನ್ನು ಆಕಸ್ಮಿಕವಾಗಿ ನೋಡಿದನು. ಇದು ಬಹಳ ಅಮೂಲ್ಯವಾದ ಬೆಲೆ ಕಟ್ಟಲಾರದಂಥ ಮಾಣಿಕ್ಯ ಕಲ್ಲು ಎಂದು ಹೇಳಿದನು. ಅದನ್ನು ಕೇಳಿದ ಬೇಟೆಗಾರ ಆಘಾತವಾದವನಂತೆ ಬೊಬ್ಬೆ ಹಾಕಿದನು. ಹಕ್ಕಿಗಳನ್ನು ಬೇಟೆಯಾಡಲು ಇದನ್ನು ಉಪಯೋಗಿಸಿದಾಗ ನದಿಯೊಳಗೆ ಬಿದ್ದ ಕಲ್ಲುಗಳೊಂದೊಂದನ್ನೂ ನೆನಸಿ ಮನ ಮುದುಡಿಹೋದನು. ಇನ್ನೂ ದುಃಖಪಟ್ಟು ಪ್ರಯೋಜನವಿಲ್ಲ ಎಂದು ತನ್ನನ್ನು ತಾನು ಸಮಾಧಾನ ಪಡಿಸಿಕೊಂಡು, ಆ ಕಲ್ಲಿನ ಬೆಲೆಯನ್ನು ತೆಗೆದುಕೊಂಡು, ಸಿಕ್ಕಿದ್ದೇ ಲಾಭವೆಂದು ತಿಳಿದು ಸಂತೋಷದಿಂದ ಹಿಂದಿರುಗಿದನು.

ಪ್ರತಿದಿನವೂ ಕರ್ತನು ನಮಗೆ ಮಾಣಿಕ್ಯಗಳನ್ನು ಉಚಿತವಾಗಿ ಕೊಡುವ ಕೃಪಾಳುವಾಗಿದ್ದಾನೆ. ಅವುಗಳನ್ನು ನಮ್ಮಲ್ಲಿ ಕೆಲವರು ಲೌಕೀಕ ಸಂತೋಷಕ್ಕಾಗಿಯೂ, ಲೌಕೀಕ ಸಂಗತಿಗಳಿಗಾಗಿಯೂ ವ್ಯರ್ಥ ಮಾಡಿಬಿಡುವರು. ಮಹತ್ತಾದ ದೇವರ ವರಗಳನ್ನು ವ್ಯರ್ಥ ಮಾಡಿಬಿಡುವರು. ಕಳೆದುಹೋದ ಕಾಲಗಳನ್ನು ಕುರಿತು ಚಿಂತೆಯಲ್ಲಿಯೇ ಮುಳುಗಿಹೋಗದೆ, ನಮ್ಮ ಮುಂದಿರುವ ಪ್ರತಿಯೊಂದು ನಿಮಿಷವನ್ನೂ ಉಪಯೋಗಿಸಿಕೊಳ್ಳುವದರಲ್ಲಿ ತೀವ್ರಗೊಂಡು ದೇವರ ಅನುಗ್ರಹವನ್ನು ಪಡೆಯೋಣ.

## ಸ್ವಾರ್ಥ ಜೀವಿತದ ಲಕ್ಷಣಗಳು

- ತಾಳ್ಮೆ ತಪ್ಪುವದು – ಇಬ್ರಿ. 10:36
- ಕರುಣೆಸದಿರುವದು – ಮತ್ತಾ. 18:33
- ಮತ್ಸರಗೊಳ್ಳುವದು – ಪರಮ. 8:6
- ಗರ್ವಪಡುವದು – ರೋಮಾ. 11:21
- ಅಪಕಾರ ಮಾಡುವದು – ರೋಮಾ. 12:17
- ಕೃತಜ್ಞತೆಯಿಲ್ಲದಿರುವದು – ಕೊಲೊ. 3:15
- ಪಕ್ಷಪಾತ ಮಾಡುವದು – ಯಾಕೋ. 2:1

## ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು

19ನೇ ಶತಮಾನದಲ್ಲಿ ನ್ಯೂಜಿಲ್ಯಾಂಡಿನ ಮಾವ್ರೋರಿ ಜನರಿಗೂ ಬ್ರಿಟಿಷ್ ಸೈನ್ಯದವರಿಗೂ ಪದೇ ಪದೇ ಯುದ್ಧವಾಗುತ್ತಿತ್ತು. ಒಂದು ದಿನ ಬ್ರಿಟಿಷ್ ಸೈನ್ಯದವರು ವೈಕಾಟೋ ನದಿಯ ಬಳಿ ದಣಿದು, ಹಸಿವೆಯಿಂದ ಬಳಲಿ ವಿಶ್ರಮಿಸಿಕೊಳ್ಳುತ್ತಿದ್ದರು. ಆಗ ಮಾವ್ರೋರಿ ಜನರು ದೋಣಿಗಳಲ್ಲಿ ಬರಲಾರಂಭಿಸಿದರು. ಬ್ರಿಟಿಷರು ಅವರ ದಾಳಿಗೆ ಸಿದ್ಧರಾಗುತ್ತಿರುವಾಗಲೇ ಒಂದು ಆಶ್ಚರ್ಯವು ಕಾದಿತ್ತು. ದೋಣಿಗಳಲ್ಲಿ ಆಯುಧಗಳಿಗೆ ಬದಲಾಗಿ ಹಾಲು, ಬಟಾಟೆ ಮುಂತಾದ ಆಹಾರ ಪದಾರ್ಥಗಳು ತುಂಬಿದ್ದವು. ಮಾವ್ರೋರಿ ಜನರು ಬ್ರಿಟಿಷರ ಕಡೆ ನೋಡಿ, "ನೀವು ಹಸಿವೆಯಿಂದ ಇದ್ದೀರೆಂದು ನಮಗೆ ತಿಳಿಯಿತು. ನಿಮ್ಮ ಮಿಷನರಿಗಳು ನಮಗೆ ಕೊಟ್ಟ ಪುಸ್ತಕದಲ್ಲಿ ನಿನ್ನ ವೈರಿ ಹಸಿದಿದ್ದರೆ ಊಟಕ್ಕೆ ಬಡಿಸು" ಎಂದು ಹೇಳುತ್ತದೆ. ಆದಕಾರಣ ಊಟ ತಂದಿದ್ದೇವೆ ಅಷ್ಟೇ ಎಂದು ಪದಾರ್ಥಗಳನ್ನು ಇಳಿಸಿಬಿಟ್ಟು ಹೊರಟುಹೋದರು.

## ತ್ಯಾಗಪೂರಿತವಾದ ಪ್ರೀತಿ

ಒಂದು ಸಾರಿ ದಕ್ಷಿಣ ಧೃವ ಪ್ರದೇಶದಲ್ಲಿ ಯುವ ವಿಜ್ಞಾನಿಗಳು ಪರೀಕ್ಷಿಸುತ್ತಿರುವಾಗ ಅಲ್ಲಿ ಭಯಂಕರವಾದ ಇಬ್ಬನಿಯಲ್ಲಿ ಸಿಕ್ಕಿಕೊಂಡರು. ಅವರು ಎದುರುನೋಡುತ್ತಿದ್ದ ಹಾಗೆ ಅವರು ತಮ್ಮ ಸ್ಥಳಕ್ಕೆ ಹಿಂತಿರುಗುವದು ಅಸಂಭವವಾಗಿತ್ತು. ಅವರ ಬಳಿ ಇದ್ದ ಆಹಾರವೂ ಮುಗಿದುಹೋಗಿತ್ತು. ಸ್ವಲ್ಪ ರೊಟ್ಟಿ ಮಾತ್ರವೇ ಅವರ ಬಳಿಯಲ್ಲಿತ್ತು. ಹಸಿವಿನಿಂದಲೂ ಚಳಿಯಿಂದಲೂ ಸತ್ತುಹೋಗುತ್ತೇವೆಂಬ ಭಯವು ಆವರಿಸಿಕೊಂಡಿತು. ಅಂದು ರಾತ್ರಿ ಆ ಗುಂಪಿನ ಮುಖಂಡರು ದಿಢೀರೆಂದು ಒಂದು ಶಬ್ದವನ್ನು ಕೇಳಿ ಎಚ್ಚರಗೊಂಡರು. ಮೆಲ್ಲಗೆ ಕಣ್ಣುಗಳನ್ನು ತೆರೆದು ಗಮನಿಸಿದರು. ಅಲ್ಲಿ ಒಬ್ಬ ಯವವನಸ್ಥನು ಆ ಗುಂಪಿನವರಲ್ಲಿ ಒಬ್ಬನ ಚೀಲದಲ್ಲಿ ಮೆಲ್ಲಗೆ ತನ್ನ ಕೈಗಳನ್ನು ಬಿಡುವದನ್ನು ನೋಡಿದರು. ಅವರು ನೋಡಿದ ದೃಶ್ಯ ಅವರಿಗೆ ಗಾಬರಿಯನ್ನುಂಟುಮಾಡಿತು.

ಎಲ್ಲರೂ ಹಸಿವಿನಿಂದ ಬಳಲಿರುವದು ಸತ್ಯವೇ. ಅದಕ್ಕಾಗಿ ಹೀಗೆ ಕಳ್ಳತನ ಮಾಡುವದರಲ್ಲಿ ಈ ಯುವ ವಿಜ್ಞಾನಿ ತೊಡಗಿದನಲ್ಲಾ ಎಂದು ವೇದನೆಯಿಂದ ಪರಿತಪಿಸಿದರು. ಆದರೆ ಮರುಕ್ಷಣದಲ್ಲೇ ಅವರ ದುಃಖವು ಹೋಗಿ ಸಂತೋಷ ಆವರಿಸಿತು. ಯಾಕೆ ಗೊತ್ತೇ? ಆ ಯುವಕನು ತನ್ನಲ್ಲಿದ್ದ ರೊಟ್ಟಿ ತುಂಡನ್ನು ಇನ್ನೊಬ್ಬ ವಿಜ್ಞಾನಿಯ ಚೀಲದಲ್ಲಿ ಇಡುತ್ತಿದ್ದನು. ತಾನು ಸತ್ತರೂ ಪರವಾಗಿಲ್ಲ ತನ್ನ ಸ್ನೇಹಿತನು ಬದುಕಿಕೊಳ್ಳಬೇಕು. ಒಂದು ವೇಳೆ ನೇರವಾಗಿ ಕೊಟ್ಟರೆ ಅವನು ತೆಗೆದುಕೊಳ್ಳದೆ ಹೋಗಬಹುದು ಎಂದು ನಿದ್ರೆ ಮಾಡುತ್ತಿರುವಾಗ ಅವನ ಚೀಲದಲ್ಲಿ ರೊಟ್ಟಿಗಳನ್ನು ಇಟ್ಟನು. ಭಯಂಕರವಾದ ಚಳಿಯಲ್ಲಿ ತ್ಯಾಗಪೂರಿತವಾಗಿ ಅವನು ಮಾಡಿದ ಕಾರ್ಯ ಈ ಮುಖಂಡನ ಹೃದಯದಲ್ಲಿ ಅಗ್ನಿಜ್ವಾಲೆಯನ್ನೇ ಹೊತ್ತಿಸಿತು. ಇಂಥ ತ್ಯಾಗಪೂರಿತವಾದ ಪ್ರೀತಿಯಿಂದ ಮಾತ್ರವೇ ಅನೇಕರ ಕಷ್ಟಕರವಾದ ಸಂಗತಿಗಳನ್ನು ಕಂಡುಕೊಳ್ಳಲು ಸಾಧ್ಯವೆಂಬದನ್ನು ಅವರು ತಿಳಿದರು.



## ಕರ್ತನು ಬಲ್ಲನು!

ಒಬ್ಬ ಅರಸನು, ತನ್ನ ದೇಶದ ಪ್ರಜೆಗಳು ಎಂಥಾ ಜನರೆಂದು ಪರೀಕ್ಷಿಸಲಾರಂಭಿಸಿ, ಯಾರಿಗೂ ತಿಳಿಯದಂತೆ ಒಂದು ಮುಖ್ಯರಸ್ತೆಯಲ್ಲಿ ಒಂದು ದೊಡ್ಡ ಕಲ್ಲನ್ನು ಹೊರಳಿಸಿ ನಿಲ್ಲಿಸಿ ತಾನು ಮರೆಯಾಗಿದ್ದುಕೊಂಡು ನೋಡುತ್ತಿದ್ದನು. ಆ ಕಲ್ಲು ಆ ದಾರಿಯಲ್ಲಿ ಒಂದು ತಡೆಯಾಗಿತ್ತು. ಕೆಲವರು ಆ ಕಲ್ಲನ್ನು ನೋಡಿ ಯಾರು ಇದನ್ನು ಇಲ್ಲಿ ಹಾಕಿದರೋ ಎಂದು, ಹಾಕಿದವರನ್ನು ದೂಷಿಸಿ ಮುಂದೆ ಹೋದರು. ಕೆಲವರು ಸರ್ಕಾರ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ದೂರಿದರು. ಇನ್ನು ಕೆಲವರು ಅರಸನಿಗೆ ಸುಂಕ ಕೊಡುವುದು ದಂಡ, ಇದೂ ಕೂಡ ಸರಿಪಡಿಸಲಿಲ್ಲ ಎಂದು ಹಾಸ್ಯಮಾಡಿ ಹೋದರು. ಇವೆಲ್ಲವನ್ನೂ ಅರಸನು ಮರೆಯಲ್ಲಿ ನಿಂತು ಗಮನಿಸುತ್ತಲೇ ಇದ್ದನು.

ಕೊನೆಗೆ ಒಬ್ಬ ವ್ಯವಸಾಯಗಾರನು ಆ ಮಾರ್ಗವಾಗಿ ಬಂದನು. ಈ ಕಲ್ಲು ಎಷ್ಟು ಜನರಿಗೆ ಅಡ್ಡಿಯಾಗಿಯೂ ಆತಂಕಕಾರಿಯೂ ಇದೆಯಲ್ಲ ಎಂದು ಅಂದುಕೊಂಡು, ಬಹಳ ಶ್ರಮಪಟ್ಟು ಅದನ್ನು ದಾರಿಮಗ್ಗುಲಿಗೆ ಸರಿಸಿದನು. ಎಂಥಾ ಆಶ್ಚರ್ಯ, ಆ ಕಲ್ಲಿನ ಕೆಳಗೆ ರಾಜನು ಒಂದು ಹಣದ ಗಂಟನ್ನು ಇಟ್ಟು, "ಇದು ಕಲ್ಲನ್ನು ಹೊರಳಿಸುವವನಿಗೆ" ಎಂದು ಬರೆದಿದ್ದನು. ವ್ಯವಸಾಯಿಯ ಸಂತೋಷಕ್ಕೆ ಪಾರವೇ ಇಲ್ಲ!

ಹೌದು, ನಮಗೆ ಬರುವ ಪ್ರತಿಯೊಂದು ಕಷ್ಟಗಳ ಹಿಂದೆ ಮರೆಯಾಗಿರುವ ಒಂದು ಆಶೀರ್ವಾದ ಇದ್ದೇ ಇರುತ್ತದೆ! ಇದು ಕರ್ತನ ಅನುಗ್ರಹ. ನಮ್ಮ ಶಿಲುಬೆಯನ್ನು ನಾವು ತಳ್ಳಿಬಿಟ್ಟರೆ, ಆಶೀರ್ವಾದವನ್ನು ಕಳೆದುಕೊಳ್ಳುತ್ತೇವೆ. ಬರುವ ತಡೆಗಳನ್ನು ನೀನು ಹೇಗೆ ಎದುರಿಸುತ್ತೀ ಎಂದು ಕರ್ತನು ಗಮನಿಸುತ್ತಲೇ ಇರುವನು. "ಆದರೆ ನೀವು ಎಷ್ಟರ ಮಟ್ಟಿಗೆ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರಮಟ್ಟಿಗೆ ಸಂತೋಷವುಳ್ಳವರಾಗಿರಿ" (1 ಪೇತ್ರ. 4:13). "ಆತನಾದರೋ ನನ್ನ ದಾರಿಯಲ್ಲಿ ಬಲ್ಲನು; ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು" (ಯೋಬ. 23:10). "ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ. ಅದಕ್ಕೆ ಮಹಾಪ್ರತಿಫಲವುಂಟು" (ಇಬ್ರಿ. 10:35).

## ಅಧೀನತೆಯ ಶ್ರೇಷ್ಠತೆ

- ಯೋಗ್ಯವಾದದ್ದು – ಕೊಲೊ 3:18
- ಅಸ್ತಿವಾರವಾದದ್ದು – ಅ.ಕೃ. 22:10
- ಸನ್ಮಾರ್ಗಕ್ಕೆ ತರತಕ್ಕದ್ದು – 1 ಪೇತ್ರ. 3:1,2
- ಮೆಚ್ಚುವಂತದ್ದು – ಕೊಲೊ. 3:20
- ನಂಬಿಕೆಯುಂಟಾಗುವದು – ಮತ್ತಾ. 8:9
- ಆತ್ಮವನ್ನು ಕಾಯುವದು – ಇಬ್ರಿ. 13:17

# ನಮ್ಮ ದೇಶದ ಸುದ್ದಿಗಳು
## (INDIAN NEWS)

**1. ಭಾರತ-ಪಾಕ್ ಮಾತುಕತೆ ಸಲಹೆ :**

ದ್ವಿಪಕ್ಷೀಯ ಮಾತುಕತೆ ಮೂಲಕ ಭಾರತ ಮತ್ತು ಪಾಕಿಸ್ತಾನ ತಮ್ಮ ನಡುವಣ ಬಿಕ್ಕಟ್ಟನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವಂತೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್‌ಕಿ ಮೂನ್ ಸಲಹೆ ನೀಡಿದ್ದಾನೆ.

**2. 55 ಸಾವಿರ ಹಳ್ಳಿಗಳಿಗೆ ಮೊಬೈಲ್ ಸಂಪರ್ಕ :**

ಡಿಜಿಟಲ್ ಇಂಡಿಯಾ ಕಾರ್ಯಕ್ರಮದಡಿ ಮುಂದಿನ ಐದು ವರ್ಷಗಳಲ್ಲಿ 22000 ಕೋಟಿ ವೆಚ್ಚದಲ್ಲಿ 55 ಸಾವಿರ ಹಳ್ಳಿಗಳಿಗೆ ಮೊಬೈಲ್ ಸಂಪರ್ಕವನ್ನು ಒದಗಿಸಲಾಗುವದು ಎಂದು ದೂರಸಂಪರ್ಕ ಕಾರ್ಯದರ್ಶಿಯವರು ತಿಳಿಸಿದ್ದಾರೆ. ದೂರ ಸಂಪರ್ಕ ಇಲಾಖೆ ನಡೆಸಿರುವ ಸಮೀಕ್ಷೆಯಲ್ಲಿ ದೇಶದ 57,271 ಹಳ್ಳಿಗಳಲ್ಲಿ ಮೊಬೈಲ್ ಸಂಪರ್ಕ ಇಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

**3. ಮಂಗಳ ನೌಕೆಯ ದ್ರವ ಎಂಜಿನ್‌ಗೆ ಚಾಲನೆ :**

ಮಂಗಳ ನೌಕೆಯ ದ್ರವಚಾಲಿತ ಎಂಜಿನನ್ನು ಮರುಚಾಲನೆಗೊಳಿಸುವ ನಾಜೂಕಿನ ಹಾಗೂ ಸವಾಲಿನ ಕಾರ್ಯ ಕೈಗೊಳ್ಳಲು ಇಸ್ರೋ ವಿಜ್ಞಾನಿಗಳು ಸಜ್ಜಾಗುತ್ತಿದ್ದಾರೆ. ಕಳೆದ ನ.5 ರಂದು ನಭಕ್ಕೆ ಚಿಮ್ಮಿದ ಈ ನೌಕೆಗೆ ವಿಜ್ಞಾನಿಗಳು ದ್ರವಚಾಲಿತ ಎಂಜಿನ್‌ಗೆ ಚಾಲನೆ ನೀಡಲಿದ್ದಾರೆ. ಈ ಎಂಜಿನ್ ಸುಮಾರು 10 ತಿಂಗಳುಗಳಿಂದ ಸ್ತಬ್ದವಾಗಿದೆ.

**4. ರಕ್ತಹೀನತೆಗೆ ಚಿಕಿತ್ಸೆ : ವೈದ್ಯರ ಜತೆ ಪ್ರಧಾನಿ ಚರ್ಚೆ :**

ಭಾರತದ ಬುಡಕಟ್ಟು ಜನಾಂಗದವರನ್ನು ಹೆಚ್ಚಾಗಿ ಬಾಧಿಸುವ ರಕ್ತಹೀನತೆಗೆ ಪರಿಣಾಮಕಾರಿ ಚಿಕಿತ್ಸೆ ಕಂಡುಹಿಡಿಯುವ ದಿಸೆಯಲ್ಲಿ ಸಹಕಾರವನ್ನು ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ವೈದ್ಯಕೀಯ ನೋಬಲ್ ಪುರಸ್ಕೃತ ಹಾಗೂ ಕ್ಯೋಟೊ ವಿಶ್ವವಿದ್ಯಾಲಯದ ನಿರ್ದೇಶಕರಾದ ಎಸ್. ಯಮನಾಕ ರವರೊಂದಿಗೆ ಚರ್ಚಿಸಿದ್ದಾರೆ.

**5. ಅಪರೂಪದ "ಹನಿಬ್ಯಾಡ್ಜರ್" ರಾಜ್ಯದಲ್ಲಿ ಪತ್ತೆ :**

ಕರಡಿ ಜಾತಿಗೆ ಸೇರಿದ ಅತ್ಯಂತ ವಿರಳವಾದ ನಿಶಾಚರಿ ಮಾಂಸಹಾರಿ ಪ್ರಾಣಿಯೊಂದು (ಹನಿಬ್ಯಾಡ್ಜರ್-ರೇಟಲ್) ಕರ್ನಾಟಕದ ಅರಣ್ಯದಲ್ಲಿ ಇದೇ ಮೊದಲ ಬಾರಿಗೆ ಪತ್ತೆಯಾಗಿದೆ. ಕಾವೇರಿ ಅಭಯಾರಣ್ಯ ಪ್ರದೇಶದಲ್ಲಿ ಕ್ಯಾಮೆರಾಕಣ್ಣಿಗೆ ಸೆರೆಯಾಗಿವೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

**1. ಮರದ ಪುರಾತನ ಶೌಚಾಲಯ ಪತ್ತೆ :**

ಉತ್ತರ ಇಂಗ್ಲೆಂಡ್‌ನಲ್ಲಿನ ರೋಮನ್ ವಿನ್ಡೊಲ್ಯಾಂಡಾ ಕೋಟೆಯಲ್ಲಿ 2 ಸಾವಿರ ವರ್ಷ ಹಿಂದಿನ ಮರದ ಶೌಚಾಲಯ ಪತ್ತೆಯಾಗಿದೆ. ರೋಮ್ ಸಾಮ್ರಾಜ್ಯದ ಎಲ್ಲೆಡೆ ಕಲ್ಲು ಮತ್ತು ಮಾರ್ಬಲ್‌ನಿಂದ ಮಾಡಿದ ಅನೇಕ ಶೌಚಾಲಯ ದೊರೆತಿದೆ. ಆದರೆ ಮರದ ಶೌಚಾಲಯ ದೊರೆತಿರುವದು ಇದೇ ಮೊದಲು ಎಂದು ತಿಳಿದುಬಂದಿದೆ.

**2. ಸ್ವತಂತ್ರ ಪೂರ್ವ ಉಕ್ರೇನ್ : ಪುಟಿನ್ ಸಲಹೆ :**

ಹಿಂದಿನ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಪೂರ್ವ ಉಕ್ರೇನ್ ಪ್ರದೇಶವನ್ನು ಸ್ವತಂತ್ರ ದೇಶವಾಗಿ ಪರಿಗಣಿಸುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ರವರು ಸಲಹೆ ನೀಡಿದ್ದಾರೆ. ಈ ಭಾಗದಲ್ಲಿ ವಾಸಿಸುತ್ತಿರುವ ಜನರ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಈ ಕುರಿತು ದೃಢವಾದ ಮಾತುಕತೆ ನಡೆಯಬೇಕಿದೆ ಎಂದಿದ್ದಾರೆ.

**3. ಮಹಿಳೆಯರಿಂದಲೇ ಮೊಬೈಲ್ ಬಳಕೆ ಹೆಚ್ಚು :**

ಸಂಬಂಧಗಳನ್ನು ಗಟ್ಟಿಗೊಳಿಸಲು ಮತ್ತು ದೀರ್ಘ ಸಂಭಾಷಣೆಗೆ ಪುರುಷರಿಗಿಂತ ಮಹಿಳೆಯರೇ ಹೆಚ್ಚಾಗಿ ಮೊಬೈಲ್ ಬಳಸುತ್ತಾರೆ ಎಂದು ಹೊಸ ಸಂಶೋಧನೆಯೊಂದು ಹೇಳಿದೆ.

**4. ಶಕ್ತಿಶಾಲಿ ಭಾರತದಿಂದ ವಿಶ್ವಶಾಂತಿ : ಅಮೇರಿಕ :**

ಜಾಗತಿಕವಾಗಿ ಭಾರತ ಅತ್ಯಂತ ಪ್ರಮುಖ ರಾಷ್ಟ್ರವಾಗಲಿದ್ದು, ಅದು ಹೆಚ್ಚು ಪ್ರಬಲವಾದಷ್ಟೂ ವಿಶ್ವಶಾಂತಿಗೆ ಹೆಚ್ಚು ಲಾಭವಾಗಲಿದೆ ಎಂದು ಅಮೆರಿಕದ ರಾಜಕೀಯ ಸೇನಾ ವ್ಯವಹಾರಗಳ ಸಹಾಯಕ ಕಾರ್ಯದರ್ಶಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

**5. ಸ್ವಿಟ್ಜರ್‌ಲೆಂಡ್ ಆತ್ಮಹತ್ಯಾ ಪ್ರವಾಸೋದ್ಯಮ :**

ರಮಣೀಯ ಸ್ವಿಟ್ಜರ್‌ಲೆಂಡ್‌ಗೆ ಪ್ರಕೃತಿ ಸೌಂದರ್ಯ ಆಸ್ವಾದಿಸಲು ಪ್ರವಾಸ ಹೋಗುವವರ ಜೊತೆಗೆ ಆತ್ಮಹತ್ಯೆ ಮಾಡಿಕೊಳ್ಳಲು ಹೋಗುವವರ ಸಂಖ್ಯೆಯೂ ಸಹ ಗಣನೀಯವಾಗಿದೆ ಎಂದು ಅಧ್ಯಯನವೊಂದು ಹೇಳಿದೆ. ತಮ್ಮ ಬದುಕಿಗೆ ಇತಿಶ್ರೀ ಹಾಡಲು ಬಯಸುವವರಿಗೆ ನೆರವಾಗುವ ಆರು ಸಾಯುವ ಹಕ್ಕು ಸಂಸ್ಥೆಗಳು ಸ್ವಿಟ್ಜರ್‌ಲೆಂಡ್‌ನಲ್ಲಿವೆ.

ಅಕ್ಟೋಬರ್ 1

## ಎಡಬಿಡದೆ ಯಾವಾಗಲೂ!

ಬೆಳಿಗ್ಗೆ : ಯೆಶಾಯ 11,12,13
ಸಂಜೆ : ಎಫೆಸ 4

ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನುದ್ಧರಿಸಲಿ (ದಾನಿ. 6:16).

ನೀವು ಕರ್ತನನ್ನು ಆರಾಧಿಸುವಿರಾದರೆ, ನಿಶ್ಚಯವಾಗಿ ಇಂದು ನಿಮಗೆ ಇರುವ ಎಲ್ಲಾ ಸಮಸ್ಯೆಗಳಿಂದ ಎಲ್ಲಾ ಶತ್ರುಗಳಿಂದ ಕರ್ತನು ನಿಮ್ಮನ್ನು ತಪ್ಪಿಸುವನು. ಆತನು ತಪ್ಪಿಸುವವನು ಮಾತ್ರವಲ್ಲ, ಅಭಿವೃದ್ಧಿ ಪಡಿಸುವವನೂ ಆಗಿರುವನು. ಆದ್ದರಿಂದ ನಿಮಗೆ ವಿರೋಧವಾಗಿ ಯಾರು ಎಷ್ಟೇ ಕೇಡು ಮಾಡಿದರೂ, ಕಳವಳಗೊಳ್ಳದಿರಿ. ನಿಮಗೆ ವಿರೋಧವಾಗಿ ಕಲ್ಪಿಸಿದ ಯಾವ ಆಯುಧವೂ ಫಲಿಸುವದಿಲ್ಲ.

ದಾನಿಯೇಲ ಎಂಬ ಪದಕ್ಕೆ "ಕರ್ತನು ನೀತಿಯನ್ನು ನಡೆಸುವವನು" ಎಂದು ಅರ್ಥ. ಯೆರೂಸಲೇಮಿನಿಂದ ಸೆರೆಯಾಳಾಗಿ ಬ್ಯಾಬಿಲೋನಿಗೆ ತರಲ್ಪಟ್ಟ ದಾನಿಯೇಲನೊಂದಿಗೆ ಕರ್ತನು ಇದ್ದನು. ದಾನಿಯೇಲನೂ ಕರ್ತನಿಗಾಗಿ ವೈರಾಗ್ಯವುಳ್ಳವನಾಗಿದ್ದನು. ಅರಸನ ಭೋಜನದಿಂದಲೂ, ದ್ರಾಕ್ಷಾರಸದಿಂದಲೂ ತನ್ನನ್ನು ಅಶುದ್ಧಪಡಿಸಿಕೊಳ್ಳದಂತೆ, ತನ್ನನ್ನು ಕಾಪಾಡಿಕೊಂಡನು. ಇದರಿಂದ ಕರ್ತನು ಅವನಿಗೆ ಬ್ಯಾಬಿಲೋನಿನಲ್ಲಿರುವ ಎಲ್ಲಾ ಜ್ಞಾನಿಗಳಿಗಿಂತಲೂ ಹತ್ತುಪಟ್ಟು ಜ್ಞಾನವನ್ನು ಕೊಟ್ಟು ಆಶೀರ್ವದಿಸಿದನು. ದಾನಿಯೇಲನ ಮೇಲೆ ಹೊಟ್ಟೆಕಿಚ್ಚುಪಟ್ಟ ಬ್ಯಾಬಿಲೋನಿನ ಪ್ರಧಾನರು ಅವನಿಗೆ ವಿರೋಧವಾಗಿ ಸಂಚುಮಾಡಿದರು. ದಾನಿಯೇಲನು ದಿನವೂ ಮೂರುವೇಳೆ ಪ್ರಾರ್ಥಿಸುವದನ್ನು ಕುರಿತು, ಅರಸನ ಬಳಿ ದೂರು ಹೇಳಿ ಕೊನೆಯಲ್ಲಿ ಸಿಂಹಗಳ ಗವಿಯಲ್ಲಿ ಅವನನ್ನು ಹಾಕುವಂತೆ ಅಪ್ಪಣೆ ಪಡೆದರು. ಆಗ ಅರಸನು ದಾನಿಯೇಲನ ಬಳಿ "ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನುದ್ಧರಿಸಲಿ" ಅಂದನು. ಪ್ರಿಯರೇ, ನಿಮಗೆ ವಿರೋಧವಾಗಿ ಬರುವ ಸಿಂಹಗಳನ್ನು ಕುರಿತು ಭಯಪಡಬೇಡಿರಿ. ಅವುಗಳಿಂದ ನಿಮ್ಮನ್ನು ನಾಶಪಡಿಸಲು ಸಾಧ್ಯವಿಲ್ಲ. ದಾವೀದನ ಕುರಿಮರಿಯನ್ನು ಒಂದು ಸಿಂಹವು ಹಿಡಿದುಕೊಂಡು ಹೋದಾಗ, ದಾವೀದನು ತನ್ನ ಕೈಯಲ್ಲಿದ್ದ ಕೋಲಿನಿಂದ ಸಿಂಹವನ್ನು ಹೊಡೆದು ಕುರಿಮರಿಯನ್ನು ರಕ್ಷಿಸಿದನು. ಸಂಸೋನನು ಒಂದು ಪ್ರಾಯದ ಸಿಂಹವು ಎದುರಾಗಿ ಬಂದಾಗ ಅವನು ಅದರ ಬಾಯನ್ನು ಸೀಳಿಹಾಕಿದನು (ನ್ಯಾಯ. 14:6). ಕರ್ತನ ವಾಗ್ದಾನವೇನು? ಪ್ರಾಯದ ಸಿಂಹವನ್ನೂ, ಘಟಸರ್ಪವನ್ನೂ ತುಳಿದುಹಾಕುವಿ (ಕೀರ್ತ. 91:13) ಎಂಬುದೇ. ನೀವು ಎಡಬಿಡದೆ, ಯೂದ ಕುಲ ಸಿಂಹವಾದ ಕರ್ತಾಧಿಕರ್ತನನ್ನು ಆರಾಧಿಸುವಿರಾದರೆ ನಿಮ್ಮನ್ನು ಯಾವಾಗ ನುಂಗಲಿ ಎಂದು ಸಂಚುಮಾಡುವ (1 ಪೇತ್ರ. 5:8) ಈ ಲೋಕದ ಸಿಂಹಗಳ ಕುರಿತು ಭಯಪಡಬೇಕಾಗಿಲ್ಲ.

ದೇವಮಕ್ಕಳೇ, ನೀವು ನಿಮ್ಮ ಜೀವಿತದಲ್ಲಿ ಕರ್ತನನ್ನು ಆರಾಧಿಸುವಂತೆ, ಸ್ತುತಿಸುವಂತೆ, ಸ್ತೋತ್ರ ಮಾಡುವಂತೆ ಒಪ್ಪಿಸಿಕೊಡಿರಿ. ಆಗ ನಿಮ್ಮ ಕಾರ್ಯಗಳು ಜಯಪ್ರದವಾಗಿರುವವು. ಮಾತ್ರವಲ್ಲ, ನಿಮ್ಮ ಶತ್ರುಗಳು ನಿಮ್ಮನ್ನು ನೋಡಿ ಬೆನ್ನುತೋರಿಸಿ ಓಡುವರು.

*ನೆನಪಿಗೆ : "ನಮ್ಮ ಹನ್ನೆರಡು ಕುಲದವರು ಹಗಲಿರುಗಳು ಆಸಕ್ತಿಯಿಂದ ದೇವರನ್ನು ಸೇವಿಸುತ್ತಾ ಆ ವಾಗ್ದಾನದ ಫಲವನ್ನು ಹೊಂದುವದಕ್ಕೆ ನಿರೀಕ್ಷಿಸುತ್ತಾ ಇದ್ದಾರೆ" (ಅ.ಕೃ. 26:7).*



ಅಕ್ಟೋಬರ್ 2

## ಎಡಬಿಡದೆ ಪ್ರಾರ್ಥಿಸಿರಿ!

ಬೆಳಿಗ್ಗೆ : ಯೆಶಾಯ 14,15,16
ಸಂಜೆ : ಎಫೆಸ 5:1–16

"ಎಡಬಿಡದೆ ಪ್ರಾರ್ಥನೆ ಮಾಡಿರಿ, ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ" (1 ಥೆಸ. 5:17,18).

ಆದಿ ಸಭೆಯು ಬೆಳೆದಂತೆಲ್ಲಾ, ಪ್ರಾರ್ಥನೆಗೆ ತಡೆಯಾಗಿ ಹಲವು ವಾಗ್ವಾದಗಳು, ಸಮಸ್ಯೆಗಳು ಎದ್ದವು. ಗ್ರೀಕ್ ಭಾಷೆಯವರು, ಇಬ್ರಿಯ ಭಾಷೆಯವರ ಮೇಲೆ ದಿನದಿನದ ಉಪಚಾರಗಳಲ್ಲಿ, ತಮ್ಮ ವಿಧವೆಯರನ್ನು ಸರಿಯಾಗಿ ಪರಾಂಬರಿಸುತ್ತಿಲ್ಲವೆಂದು ಗುಣುಗುಟ್ಟಿದರು (ಅ.ಕೃ. 6:1). ನೀವು ಆಸಕ್ತಿಯಿಂದ ಪ್ರಾರ್ಥಿಸಬೇಕೆಂದಿರುವಾಗ, ಶತ್ರು ಹಲವು ರೀತಿಗಳಲ್ಲಿ ತಡೆ ಉಂಟುಮಾಡುವನು. ಅಗತ್ಯವಿಲ್ಲದ ಸಮಸ್ಯೆಗಳನ್ನು ತಂದೊಡ್ಡುವನು.

ಆದಿ ಅಪೊಸ್ತಲರು ತಮ್ಮ ಪ್ರಾರ್ಥನೆಗೆ ಸೇವೆಗೆ ತಡೆಯುಂಟಾದಾಗ "ನಾವು ದೇವರ ವಾಕ್ಯೋಪದೇಶವನ್ನು ಮಾಡುವದನ್ನು ಬಿಟ್ಟು ಜನರ ಉಪಚಾರವನ್ನು ಮಾಡುವದು ತಕ್ಕದ್ದಲ್ಲವಲ್ಲಾ, ಆದ್ದರಿಂದ ಸಹೋದರರೇ, ಸಂಭಾವಿತರೂ, ಪವಿತ್ರಾತ್ಮಭರಿತರೂ, ಜ್ಞಾನಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ. ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು" ಎಂದು ಹೇಳಿದರು (ಅ.ಕೃ. 6:2–4). ಪ್ರಾರ್ಥನೆಯನ್ನು ಬಿಟ್ಟು ದಿಕ್ಕುತಪ್ಪಿಸುವಂತೆ ಸೈತಾನನು ಮಾಡುವ ಪ್ರಯತ್ನಗಳನ್ನು ಮುರಿದುಹಾಕಿರಿ. ಅನಾವಶ್ಯಕವಾದ ಕಾರ್ಯಗಳಲ್ಲಿ ವ್ಯರ್ಥವಾದ ಸಮಸ್ಯೆಗಳಲ್ಲಿ ತಲೆ ಇಟ್ಟು ಸಮಾಧಾನವನ್ನು ಕೆಡಿಸಿಕೊಳ್ಳಬೇಡಿ. ಪ್ರಾರ್ಥನೆಗೆ ನಿರ್ದಿಷ್ಟ ವೇಳೆಯನ್ನು ಗೊತ್ತುಮಾಡಿ, ಆಸಕ್ತಿಯಿಂದ ಪ್ರಾರ್ಥಿಸಿರಿ. ಅಪೊ. ಪೌಲನು ಕೊಲಸ್ಸೆ ಸಭೆಯವರಿಗೆ ಬರೆಯುವಾಗ ನಾನು ನಿಮಗಾಗಿ ಎಡಬಿಡದೆ ಪ್ರಾರ್ಥಿಸುವದಾಗಿ ಹೇಳುತ್ತಾನೆ (ಕೊಲೊ.1:9,10). ತಿಮೋಥೆಯನಿಗೆ ಬರೆಯುವಾಗ ನಾನು ಹಗಲೂ, ಇರುಳೂ, ಎಡಬಿಡದೆ ನನ್ನ ಪ್ರಾರ್ಥನೆಗಳಲ್ಲಿ ನಿನಗಾಗಿ ಪ್ರಾರ್ಥಿಸುತ್ತೇನೆ ಎಂದು ಹೇಳುತ್ತಾನೆ (2 ತಿಮೊ. 1:3,4).

ದೇವಮಕ್ಕಳೇ, ಪ್ರಾರ್ಥನೆಯಲ್ಲಿ ಬಿರುಕು ಬಿಡದಂತೆ ತಡೆಯುಂಟಾಗದಂತೆ ನೋಡಿಕೊಳ್ಳಿರಿ. ಒಂದು ಗೋಡೆಯಲ್ಲಿ ಬಿರುಕುಂಟಾದರೆ ಅದರ ಮೂಲಕ ಸರ್ಪ, ಚೇಳು ಮುಂತಾದ ವಿಷ ಜಂತುಗಳು ನುಸುಳುವವು. ಪ್ರಾರ್ಥನೆಯೆಂಬ ಬೇಲಿಯಲ್ಲಿ ಸಂದು ಏರ್ಪಟ್ಟರೆ ಗುಳ್ಳೆನರಿಯಾದ ಸೈತಾನನು ನಿಮ್ಮ ಅಂತರ್ಯವೆಂಬ ತೋಟದೊಳಗೆ ಪ್ರವೇಶಿಸುವನು. ಆತ್ಮದಲ್ಲಿ ತಡೆಯುಂಟಾದರೆ ಅಂಧಕಾರ ಶಕ್ತಿಗಳು ಒಳಗೆ ಪ್ರವೇಶಿಸಿಬಿಡುವವು. ನೀವು ಎಡಬಿಡದೆ ಪ್ರಾರ್ಥಿಸಲು ಇರುವ ತಡೆಗಳನ್ನು ಗುರುತಿಸಿ ಆ ತಡೆಗಳನ್ನು ಹೊಡೆದೋಡಿಸಿ ಮಾರ್ಗವನ್ನು ಸರಾಗಪಡಿಸಿರಿ. ಎಡಬಿಡದೆ ಪ್ರಾರ್ಥಿಸಿರಿ.

*ನೆನಪಿಗೆ : ನಾವು ದೇವರ ಅಪೇಕ್ಷೆಯಂತೆ ಏನು ಬೇಡಿಕೊಳ್ಳಬೇಕೋ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ (ರೋಮಾ. 8:26).*

| ಅಕ್ಟೋಬರ್ 3 | ಯಾವಾಗಲೂ ಅಗ್ನಿ! | ಬೆಳಿಗ್ಗೆ : ಯೆಶಾಯ 17,18,19<br>ಸಂಜೆ : ಎಫೆಸ 5:17–33 |
|---|---|---|

ಬೆಂಕಿಯು ಯಜ್ಞವೇದಿಯ ಮೇಲೆ ಯಾವಾಗಲೂ ಉರಿಯುತ್ತಿರಬೇಕು, ಆರಿಹೋಗಬಾರದು" (ಯಾಜಕ. 6:13).

ಯಾವಾಗಲೂ ಪ್ರಾರ್ಥಿಸುತ್ತಲೇ ಇರುವ ಒಬ್ಬ ವಯೋವೃದ್ಧಳು, ತನ್ನ ಅನುಭವವನ್ನು ಹೀಗೆ ಹೇಳಿದಳು. "ಮನುಷ್ಯ ಪ್ರಯತ್ನದಿಂದ ಎಡಬಿಡದೆ ಪ್ರಾರ್ಥಿಸಲು ಸಾಧ್ಯವಿಲ್ಲ. ಆದರೆ ನನ್ನೊಳಗಿರುವ ದೇವರಾತ್ಮನು ನನ್ನನ್ನು ಆಲಯವಾಗಿಸಿ, ನನ್ನೊಳಗಿದ್ದುಬಿಡದೆ ಪ್ರಾರ್ಥಿಸುತ್ತಲೇ ಇರುವನು. ನಾನು ನನ್ನ ಶರೀರವನ್ನು ಕರ್ತನ ಪ್ರಾರ್ಥನಾಲಯವಾಗಿ ಪ್ರತಿಷ್ಠೆ ಮಾಡಿರುವೆನು. ನಾನು ಆಸಕ್ತಿಯಿಂದ ಪ್ರಾರ್ಥಿಸುವಂತೆ ಆತನು ನನ್ನೊಳಗೆ ಪ್ರಾರ್ಥನಾತ್ಮವನ್ನು ನೀಡುವನು. ಆದ್ದರಿಂದ ಎಡಬಿಡದೆ ಆಸಕ್ತಿಯಿಂದ ಪ್ರಾರ್ಥಿಸಲು ನನ್ನಿಂದ ಸಾಧ್ಯ ಅಂದಳು.

ನಮ್ಮ ದೇವರಾದ ಕರ್ತನು ಹಗಲಿನಲ್ಲೋ, ಸಂಜೆಯಲ್ಲೋ ನಡುರಾತ್ರಿಯಲ್ಲೋ ನೆನಸದ ಗಳಿಗೆಯಲ್ಲಿ ಬರುವನು. ಆತನು ಬರುವಾಗ, ನಿಮ್ಮ ದೀಪ ಉರಿಯುತ್ತಲೇ ಇರಬೇಕು. ನಿಮ್ಮ ಆಂತರ್ಯವೆಂಬ ಯಜ್ಞವೇದಿಯಲ್ಲಿ ಯಾವಾಗಲೂ ಪರಲೋಕದ ಅಗ್ನಿ, ಕಾಣಲ್ಪಡಬೇಕು. ಅದು ಎಂದಿಗೂ ಆರಿಹೋಗಬಾರದು. ಹಳೆಯ ಒಡಂಬಡಿಕೆಯಲ್ಲಿ, ಯಜ್ಞವೇದಿಯು ಭಕ್ತರು ದೇವರನ್ನು ದರ್ಶಿಸುವ ಸ್ಥಳವಗಿತ್ತು. ಆ ಯಜ್ಞವೇದಿಯಲ್ಲಿ ಅರ್ಪಿಸುವ ಯಜ್ಞವನ್ನು ಅಂಗೀಕರಿಸಿ ಕರ್ತನು ತನನ ಜನರನ್ನು ಆಶೀರ್ವದಿಸುತ್ತಿದ್ದನು. ಹೊಸ ಒಡಂಬಡಿಕೆಯಲ್ಲಿ ನೀವೇ ಕರ್ತನ ಯಜ್ಞವೇದಿಗಳಾಗಿರುವಿರಿ. "ಸಹೋದರರೇ, ನಿಮ್ಮ ನಿಮ್ಮ ಶರೀರಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" (ರೋಮಾ. 12:1) ಎಂದು ಅಪೊ. ಪೌಲನು ಹೇಳುತ್ತಾನೆ. ನಿಮ್ಮ ಆತ್ಮ, ಪ್ರಾಣ, ಶರೀರಗಳನ್ನು ದೇವರ ಕಲ್ವಾರಿ ಬಲಿ ಪೀಠದಲ್ಲಿ ಅರ್ಪಿಸುವಾಗ ಎಲೀಯನ ದೇವರು ನಿಮ್ಮ ಮೇಲೆ ಪವಿತ್ರಾತ್ಮನೆಂಬ ಬೆಂಕಿಯನ್ನು ಸುರಿಸುವನು. ನಿಮ್ಮ ದೀವಟಿಕೆಗಳು ಯಾವಾಗಲೂ ಉರಿಯುತ್ತಲೇ ಇರಬೇಕು. ಬುದ್ಧಿ ಇಲ್ಲದ ಆ ಐವರು ಕನ್ಯೆಯರು ಎಣ್ಣೆಯನ್ನು ತರದೇ ಇದ್ದದರಿಂದ ಅವರ ದೀಪಗಳು ಆರಿಹೋದವು. ಹಾಗೆಯೇ ಪವಿತ್ರಾತ್ಮನೆಂಬ ಅಭಿಷೇಕ ನಿಮ್ಮೊಳಗೆ ಇರದೇಹೋದರೆ ನಿಮ್ಮ ಆತ್ಮವೆಂಬ ದೀಪಗಳು ಆರಿಹೋಗುವವು.

ದೇವಮಕ್ಕಳೇ, ಪವಿತ್ರಾತ್ಮನೆಂಬ ಅಗ್ನಿ ನಿಮ್ಮ ಮೇಲೆ ಬಲವಾಗಿ ಇಳಿದುಬರುವಂತೆ ಪ್ರಾರ್ಥಿಸಿರಿ. ಇಳಿದುಬಂದ ಅಗ್ನಿಯು ಸದಾ ಉರಿಯುತ್ತಿರುವಂತೆ ನೋಡಿಕೊಳ್ಳಿರಿ ಮತ್ತು ಆ ಅಗ್ನಿ ಆರಿಹೋಗದಂತೆ ಪವಿತ್ರಾತ್ಮನೆಂಬ ಅಭಿಷೇಕ ತೈಲವನ್ನು ಹಾಕುತ್ತಲೇ ಇರಿ. ಕರ್ತನನ್ನು ಎಡಬಿಡದೆ ಸ್ತುತಿಸುತ್ತಾ ಆರಾಧಿಸುತ್ತಾ ಸ್ತೋತ್ರ ಮಾಡುತ್ತಾ ಇರಿ.

*ನೆನಪಿಗೆ : "ಯಜ್ಞವೇದಿಯ ಮೇಲಣ ಬೆಂಕಿ ಸರ್ವಾಂಗ ಹೋಮದ್ರವ್ಯದಿಂದ ಉರಿಯುತ್ತಲೇ ಇರಬೇಕು; ಅದು ಆರಿಹೋಗಬಾರದು" (ಯಾಜಕ. 6:12).*



| ಅಕ್ಟೋಬರ್ 4 | ಯಾವಾಗಲೂ ಸ್ತುತಿಸಿರಿ! | ಬೆಳಿಗ್ಗೆ : ಯೆಶಾಯ 20,21,22<br>ಸಂಜೆ : ಎಫೆಸ 6 |
|---|---|---|

"ಅವನಿಗೋಸ್ಕರ ಯಾವಾಗಲೂ ದೇವರಲ್ಲಿ ವಿಜ್ಞಾಪನೆಯು ನಡೆಯಲಿ; ದಿನ ದಿನವೂ ಅವನಿಗೆ ಆಶೀರ್ವಾದಗಳುಂಟಾಗಲಿ" (ಕೀರ್ತ. 72:15).

ಪರಲೋಕವು ಸ್ತುತಿಸ್ತೋತ್ರಗಳಿಂದ ತುಂಬಿದ ದೇಶ. ಅಲ್ಲಿ ಹಗಲೂ ಇರುಳೂ ಇಪ್ಪತ್ನಾಲ್ಕು ಗಂಟೆಗಳೂ ಸ್ತುತಿಸ್ತೋತ್ರ ಆರಾಧನೆಗಳು ನಡೆಯುತ್ತಲೇ ಇರುವದು. ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಪರಲೋಕದಲ್ಲಿ ನೆರವೇರುವದು ಏನಾಗಿದೆ? "ಅವುಗಳು (ನಾಲ್ಕು ಜೀವಿಗಳು). ಇದ್ದಾತನು, ಇರುವಾತನೂ, ಬರುವಾತನೂ, ಆಗಿರುವ ಸರ್ವಶಕ್ತನಾದ ದೇವರಾದ ಕರ್ತನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು ಎಂದು ಹಗಲಿರುಳು ವಿಶ್ರಮಿಸಿಕೊಳ್ಳದೆ ಹೇಳಿಕೊಂಡೇ ಇರುವವು (ಪ್ರಕ. 4:8).

ನೀವು ಒಂದು ದೇವಾಲಯವಾದರೆ, ನಿಮ್ಮೊಳಗೆ ಆರಾಧನೆ ನಡೆಯುತ್ತಲೇ ಇರಬೇಕು. ನೀವು ಒಬ್ಬ ಯಾಜಕನಾದರೆ, ನಿಮ್ಮೊಳಗೆ ಸೇವೆ ನಡೆಯುತ್ತಲೇ ಇರಬೇಕು. "ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾದ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳಿದುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ" (ಎಫೆ. 1:17) ಎಂದು ನೀವು ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ, ಅದರಲ್ಲಿ ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ (ಕೊಲೊ. 4:2). ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಯಾವಾಗಲೂ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ" (1 ಥೆಸ. 1:3) ಎಂದೂ ಅಪೊ. ಪೌಲನು ಹೇಳುತ್ತಾನೆ. ದೇವ ದರ್ಶನ ಗುಡಾರವನ್ನು ನೋಡಿರಿ. ಅಲ್ಲಿ ಪಾಪನಿವಾರಣೆಗೆಂದು ಯಜ್ಞವನ್ನರ್ಪಿಸುವ ಸ್ಥಳವಿರುವದು. ಹಾಗೆಯೇ ಧೂಪವನ್ನು ಹಾಕುವ ಧೂಪಪೀಠವೂ ಉಂಟು. ಆ ಧೂಪಪೀಠದಲ್ಲಿ ಯಾವಾಗಲೂ ಸುಗಂಧ ದ್ರವ್ಯಗಳು ಹಾಕಲ್ಪಟ್ಟು ಸುಗಂಧವಾಸನೆಯ ಹೊಗೆ ಮೇಲೆ ಏಳುತ್ತಲೇ ಇರುವದು. ಅದು ಕರ್ತನ ಆತ್ಮವನ್ನು ಸಂತೋಷಪಡಿಸುವದು. ನಿಮ್ಮ ಶರೀರ ದೇವಾಲಯವಾಗಿಯೂ, ನಿಮ್ಮ ಆಂತರ್ಯ ಸ್ತುತಿ ಮತ್ತು ಧೂಪ ಪೀಠವಾಗಿಯೂ ಇರಲಿ.

ದೇವಮಕ್ಕಳೇ, ಸ್ತುತಿಯು ಒಂದು ಕಡೆ ಕರ್ತನನ್ನು ಸಂತೋಷಪಡಿಸುವದು. ಮತ್ತೊಂದೆಡೆ ನಿಮಗೆ ವಿರೋಧವಾದ ಶತ್ರುಗಳನ್ನು ಬೀಳಿಸಿ ನಿಮಗೆ ಜಯನೀಡುವದು. ನೀವು ಎಂದು ರಕ್ಷಣೆ ಹೊಂದಿದಿರೋ ಅಂದೇ ಕರ್ತನು ನಿಮ್ಮೊಳಗೆ ಒಂದು ನಿತ್ಯ ಆರಾಧನೆಯನ್ನು ಏರ್ಪಡಿಸಿಬಿಟ್ಟನು. ಕರ್ತನು ಬರುವವರೆಗೆ ನೀವು ಆತನನ್ನು ಆರಾಧಿಸುತ್ತಲೇ ಇರಬೇಕು. ಸಮಯ ಸಿಕ್ಕಿದರೂ, ಸಿಗದೇ ಹೋದರೂ ಕರ್ತನನ್ನು ಸ್ತುತಿಸುತ್ತಲೇ ಇರಿ. ಆತನ ನಾಮವನ್ನು ಹಾಡಿ ಮಹಿಮೆ ಪಡಿಸಿರಿ.

*ನೆನಪಿಗೆ : ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ದೇವರಿಗೆ ಎಡಬಿಡದೆ ಕೃತಜ್ಞತಾಸ್ತುತಿ ಮಾಡುತ್ತೇವೆ. ಅದು ನಂಬುವವರಾದ ನಿಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ (1 ಥೆಸ.2:13).*

ಅಕ್ಟೋಬರ್ 5

## ಎಡಬಿಡದೆ ವಿಶ್ವಾಸಿಸಿರಿ!

ಬೆಳಿಗ್ಗೆ : ಯೆಶಾಯ 23,24,25
ಸಂಜೆ : ಫಿಲಿಪ್ಪಿ 1

"ನೀನೂ ನಿನ್ನ ದೇವರ ಸಹಾಯದಿಂದ ತಿರುಗಿಕೋ; ನೀತಿಪ್ರೀತಿಗಳನ್ನನುಸರಿಸಿ ನಿನ್ನ ದೇವರನ್ನು ಎಡಬಿಡದೆ ನಿರೀಕ್ಷಿಸು" (ಹೋಶೆಯ. 12:6).

ಕರ್ತನನ್ನು ನಂಬುವದು ಅಥವಾ ವಿಶ್ವಾಸಿಸುವದು ಅಂದರೆ ಏನು? ಪೂರ್ಣವಾಗಿ ಆತನನ್ನು ಆಶ್ರಯಿಸುವದು, ಆತನ ಮೇಲೆ ಎಲ್ಲಾ ಭಾರವನ್ನು ಹಾಕಿ "ಆತನು ನಿಶ್ಚಯವಾಗಿ ಆದರಿಸುವನು" ಎಂದು ವಿಶ್ವಾಸಿಸುವದೇ ಆಗಿದೆ. ಆತನು ನಿಮ್ಮನ್ನು ವಿಚಾರಿಸುವವನಾದರಿಂದ ಆತನನ್ನು ನಂಬಿ, ನಿಮ್ಮ ಚಿಂತೆಗಳನ್ನೆಲ್ಲಾ ಆತನ ಮೇಲೆ ಹಾಕುವದೇ ಎಡೆಬಿಡದ ವಿಶ್ವಾಸ.

ಅಪೊ. ಪೌಲನು, ಹೇಳುತ್ತಾನೆ, "ನಾವು ನಮ್ಮ ಮೇಲೆ ಭರವಸವಿಟ್ಟುಕೊಳ್ಳದೆ ಸತ್ತವರನ್ನು ಎಬ್ಬಿಸುವ ದೇವರಲ್ಲಿಯೇ ಭರವಸವಿಡುವವರಾಗಬೇಕೆಂದು ಹೀಗಾಯಿತು. ಆತನು ನಮ್ಮನ್ನು ಎಂಥ ಭಯಂಕರ ಮರಣದಿಂದ ತಪ್ಪಿಸಿದನು. ಇನ್ನು ಮೇಲೆಯೂ ತಪ್ಪಿಸುವನೆಂದು ಆತನಲ್ಲಿ ನಿರೀಕ್ಷೆ ಇಟ್ಟಿದ್ದೇವೆ (2 ಕೊರಿಂ. 1:10) ಎಂದು. ಭಕ್ತನಾದ ಯೋಬನು "ಆತನು ಕೊಂದುಹಾಕಿದರೂ ನಾನು ಆತನನ್ನು ನಂಬುವೆನು" (ಯೋಬ. 13:15). ನಾನಂತೂ ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು. ಆತನು ಕಡೆಗೆ ಧೂಳಿನ ಮೇಲೆ ಸಾಕ್ಷಿಯಾಗಿ ನಿಂತುಕೊಳ್ಳುವನು. ನಾನು ಕಣ್ಣಾರೆ ಕಾಣುವೆನು (ಯೋಬ. 19:25,27) ಎಂದು ಹೇಳುತ್ತಾನೆ. ದಾವೀದನು ಕಡೇವರೆಗೆ ಯಾವಾಗಲೂ ನಿನ್ನ ನಿಬಂಧನೆಗಳನ್ನು ಕೈಕೊಳ್ಳುವದಕ್ಕೆ ಮನಸ್ಸು ಮಾಡಿದ್ದೇನೆ (ಕೀರ್ತ. 119:112) ಎಂದು ಹೇಳುತ್ತಾನೆ. ನಂಬಿಕೆಯ ಇನ್ನೊಂದು ಅರ್ಥ, ಆಜ್ಞೆಗಳನ್ನು ಕೈಕೊಂಡು ನಡೆಯುವದು. ಒಂದು ಚಿಕ್ಕ ಮಗು ತನ್ನ ತಂದೆಯ ತಾಯಿಗಳ ಮಾತನ್ನು ನಂಬಿ ಅದರಂತೆ ನಡೆಯುವ ರೀತಿಯಲ್ಲಿ ನಾವೂ ದೇವರ ವಾಕ್ಯಗಳಂತೆ, ಕಟ್ಟಳೆಗಳಂತೆ ನಡೆಯುವಾಗ ಆತನ ಮೇಲಿನ ನಮ್ಮ ನಂಬಿಕೆ ಪೂರ್ಣತೆಯನ್ನು ಕಂಡುಕೊಳ್ಳುವದು. ನೀವು ಕೇಳಿದ ಸತ್ಯದಂತೆ ಕರ್ತನನ್ನು ಎಡಬಿಡದೆ ಹಿಂಬಾಲಿಸಲು ನಿಮ್ಮನ್ನು ಒಪ್ಪಿಸಿಕೊಡಿ. ಕರ್ತನನ್ನೇ ನಂಬಿ ಆತನನ್ನು ಆಶ್ರಯಿಸಿರಿ.

ದೇವಮಕ್ಕಳೇ, ನಂಬಿಕೆ ಇಲ್ಲದೆ ಕಾರ್ಯವಿಲ್ಲ. ಕಾರ್ಯವಿಲ್ಲದೆ ನಂಬಿಕೆ ಇಲ್ಲ. ಎರಡೂ ಒಂದೇ ನಾಣ್ಯದ ಎರಡು ಮುಖಗಳು. ನಂಬಿಕೆ ಇಲ್ಲದ ಕಾರ್ಯ ಸತ್ತದ್ದಾಗಿರುವಂತೆ ಕಾರ್ಯವಿಲ್ಲದ ನಂಬಿಕೆಯೂ ಸತ್ತದ್ದೇ. ನಿಮ್ಮ ವೃತ್ತಿಯಲ್ಲಾದರೂ ಸರಿ, ವ್ಯಾಪಾರದಲ್ಲಾದರೂ ಸರಿ, ವ್ಯಾಧಿಯ ಹಾಸಿಗೆಯಲ್ಲಾದರೂ ಸರಿ, ಮರಣದ ಕಣಿವೆಯಲ್ಲಿ ನಡೆಯುವ ಸಂದರ್ಭಗಳಾದರೂ ಸರಿ ಕರ್ತನನ್ನು ನಂಬಿ ಆಶ್ರಯಿಸಿರಿ. ಮರಣವೋ ಇಲ್ಲವೇ ಕರ್ತನ ಬರುವಿಕೆಯೋ ಯಾವದು ಮೊದಲು ಬಂದರೂ ಅಲ್ಲಿಯವರೆಗೆ ಕರ್ತನ ಕಟ್ಟಳೆಗಳಿಗೆ ವಿಧೇಯನಾಗಿರುವೆನೆಂದು ತೀರ್ಮಾನಿಸಿರಿ.

*ನೆನಪಿಗೆ : ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲ ಬಂತೆಂದು ತಿಳಿದುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು (ಯೋಹಾ. 13:1).*



ಅಕ್ಟೋಬರ್ 6

## ಆನಂದ ಭರಿತರಾಗಿರಿ!

ಬೆಳಿಗ್ಗೆ : ಯೆಶಾಯ 26,27
ಸಂಜೆ : ಫಿಲಿಪ್ಪಿ 2

ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ! ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದುಂಟಾಗುವ ಆನಂದವಾಗಿದೆ (ರೋಮಾ. 14:17).

ದೇವಮಕ್ಕಳಿಗೆ ಸಿಗುವಂಥ ಬಹುದೊಡ್ಡ ಆಶೀರ್ವಾದ, ಪವಿತ್ರಾತ್ಮನಿಂದ ಉಂಟಾಗುವ ಸಂತೋಷ. ಮೇಲುಪ್ಪರಿಗೆಯಲ್ಲಿ ಶಿಷ್ಯರನ್ನು ಆ ಸಂತೋಷ ಆನಂದ ತುಂಬಿದಾಗ, ಅವರು ಮಧುಪಾನದಿಂದ ತುಂಬಿದವರಂತೆ ಕಾಣಲ್ಪಟ್ಟರು (ಅ.ಕೃ. 2:13). "ಆದಕಾರಣ ನನ್ನ ಹೃದಯವು ಹರ್ಷಿಸುತ್ತದೆ; ನನ್ನ ಮನಸ್ಸು ಉಲ್ಲಾಸಗೊಳ್ಳುತ್ತದೆ; ನನ್ನ ಶರೀರವೂ ಸುರಕ್ಷಿತವಾಗಿರುವದು" (ಕೀರ್ತ. 16:9) ಎಂದು ಕೀರ್ತನೆಗಾರನು ಹೇಳುತ್ತಾನೆ.

ಈ ಸಂತೋಷವನ್ನು ನೀವು "ಆನಂದ ತೈಲ"ವೆಂದು ತಿಳಿಯಬಹುದು. ಯೇಸುಕ್ರಿಸ್ತನ ಮೇಲೆ ಆ ಆನಂದ ತೈಲ ಅಭಿಷೇಕಿಸಲ್ಪಟ್ಟಿತ್ತು. "ದೇವರು, ನಿನ್ನ ದೇವರು, ನಿನ್ನನ್ನು ನಿನ್ನ ಜೊತೆಗಾರರಿಗಿಂತಲೂ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ" ಎಂದು ಕೀರ್ತನೆಗಾರನು ಹೇಳುತ್ತಾನೆ. (ಕೀರ್ತ. 45:7). "ದುಃಖಪಡುವ ಆ ಸಂತೋಷವನ್ನು ಆನಂದ ಅಭಿಷೇಕವನ್ನು ಕೊಡುವದಕ್ಕಾಗಿ ಯೇಸುಕ್ರಿಸ್ತನು ಭೂಮಿಗೆ ಇಳಿದುಬಂದನು. ಶೋಕಿಸುವವರಿಗೆ ಬೂದಿಗೆ ಬದಲಾಗಿ ಶಿರೋಭೂಷಣ ದುಃಖವಿದ್ದಲ್ಲಿ ಆನಂದ ತೈಲ ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರ ಇವುಗಳನ್ನು ಒದಗಿಸಿಕೊಡುವದಕ್ಕಾಗಿ ಆತನು ನನ್ನನ್ನು ಕಳುಹಿಸಿದ್ದಾನೆ" (ಯೆಶಾ. 61:3) ಎಂದು ಪ್ರವಾದಿಯಾದ ಯೆಶಾಯನ ಮೂಲಕ ಕರ್ತನು ಹಿಂದೆಯೇ ಹೇಳಿರುವನು. ದೇವರ ಮಕ್ಕಳಿಗೆ ರಕ್ಷಣೆಯಲ್ಲಿ ಒಂದು ರೀತಿಯ ಸಂತೋಷವಿದೆ (1 ಸಮು.2:1,ಯೆಶಾ. 12:3). ದೀಕ್ಷಾಸ್ನಾನದಲ್ಲಿ ಒಂದು ರೀತಿಯ ಸಂತೋಷವಿದೆ (ಅ.ಕೃ.8:39). ಕರ್ತನ ನುಡಿಗಳಲ್ಲಿ ಒಂದು ರೀತಿಯ ಸಂತೋಷವಿದೆ (ಯೆರೆ.15:16). ದೇವಾಲಯಕ್ಕೆ ಹೋಗುವದರಲ್ಲಿ ಸಂತೋಷವಿದೆ (ಕೀರ್ತ.122:1). ಸಹೋದರರು ಒಂದಾಗಿರುವದರಲ್ಲಿ ಸಂತೋಷವಿದೆ (ಕೀರ್ತ. 133:1). ಆದರೆ ಆತ್ಮದಲ್ಲಿ ಸಂತೋಷ ತುಂಬುತ್ತಾ, ತುಂಬುತ್ತಾ ಆ ಸಂತೋಷವು ತುಂಬಿ ಹೊರಸೂಸುವದು. ಆತ್ಮ ಪ್ರಾಣ ಶರೀರದ ಮೇಲೆ ಇಳಿದು ಬರುವದು. ಸಂಭ್ರಮದ ಪ್ರವಾಹದಲ್ಲಿ ದಾಹತಣಿದು ಸಂತೃಪ್ತಿಯಾಗುವದು (ಕೀರ್ತ.36:8).

ದೇವಮಕ್ಕಳೇ, ಎಲ್ಲಾ ಸಂದರ್ಭಗಳಲ್ಲೂ ಆತ್ಮದಲ್ಲಿ ಸಂತೋಷವಾಗಿರಿ. ಸಂತೋಷ ಪಡುವದು ನಿಮ್ಮ ಜನ್ಮಸಿದ್ಧಹಕ್ಕು. ನಿಮ್ಮೊಳಗಿರುವ ದೈವೀಕ ಸಂತೋಷ ಇತರರನ್ನು ಸಂತೋಷ ಪಡಿಸಲಿ. ನೀವು ಸಂತೋಷದ ಚಿಲುಮೆಗಳಾಗಿರ್ರಿ. ಆಗ ನಿಮ್ಮ ಜೀವಿತದಲ್ಲೂ ಕ್ರಿಸ್ತನನ್ನು ಪ್ರಕಟಿಸುವವರಾಗಿ ಇರುವಿರಿ.

*ನೆನಪಿಗೆ : ನೀವು ಬಹಳ ಹಿಂಸೆಯನ್ನು ಅನುಭವಿಸಬೇಕಾಗಿದ್ದರೂ, ಪವಿತ್ರಾತ್ಮನಿಂದುಂಟಾದ ಆನಂದದೊಡನೆ ದೇವರ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ, ಕರ್ತನಾದ ಯೇಸುವನ್ನೂ ಅನುಸರಿಸುವವರಾದಿರಿ. (1ಥೆಸ. 1:6).*

ಅಕ್ಟೋಬರ್ 7

## ತುಂಬಿ ಹರಿಯುವದು!

ಬೆಳಿಗ್ಗೆ : ಯೆಶಾಯ 28,29
ಸಂಜೆ : ಫಿಲಿಪ್ಪಿ 3

ಜೀವಮಾರ್ಗಗಳನ್ನು ನನಗೆ ತಿಳಿಯಪಡಿಸಿದ್ದೀ; ನಿನ್ನ ಸಮ್ಮುಖದಲ್ಲಿ ನನ್ನನ್ನು ಆನಂದಭರಿತನಾಗ ಮಾಡುವಿ (ಅ.ಕೃ. 2:28).

ಕ್ರೈಸ್ತ ಮಾರ್ಗವೆಂಬದು, ದೈವೀಕ ಸಂತೋಷದಿಂದ ತುಂಬುವ ಒಂದು ಮಾರ್ಗವಾಗಿದೆ. ಈ ಸಂತೋಷವು ಹೇಳಲಾಗದ ಮಹಿಮೆಯಿಂದ ತುಂಬಿರುವಂಥದ್ದಾಗಿದೆ. ವಸ್ತುಗಳಿಂದಾಗಲಿ, ಬಂಗಾರದಿಂದಾಗಲಿ, ಹಣದಿಂದಾಗಲಿ ಸಿಗುವಂಥ ಸಂತೋಷವಲ್ಲ. ಇದು ಪರಲೋಕದಿಂದ ಇಳಿದುಬರುವ ನಿತ್ಯವಾದ ಸಂತೋಷ. ಯೇಸುಕ್ರಿಸ್ತನು ತಾನೇ ದಯಪಾಲಿಸಿರುವ ಸಂತೋಷ.

ಅಪೊ. ಪೇತ್ರನ ಮೊದಲ ಪ್ರಸಂಗದಲ್ಲಿಯೇ ತುಂಬಿ ಹೊರಸೂಸುವ ಸಂತೋಷದ ಕುರಿತು ಮಾತನಾಡುವನು. ಪ್ರಪ್ರಥಮವಾಗಿ ಮೇಲುಪ್ಪರಿಗೆಯಲ್ಲಿ ಅಭಿಷೇಕವು ಸುರಿಸಲ್ಪಟ್ಟಾಗ, ಅಲ್ಲಿದ್ದ ನೂರ ಇಪ್ಪತ್ತು ಜನರು ಪವಿತ್ರಾತ್ಮನಿಂದ ತುಂಬಲ್ಪಟ್ಟರು. ಆನಂದದಿಂದ ತುಂಬಲ್ಪಟ್ಟರು (ಅ.ಕೃ. 2:4). ಹೊಸ ಒಡಂಬಡಿಕೆ ಅನೇಕ ತುಂಬುವಿಕೆಗಳೊಂದಿಗೆ ಪ್ರಾರಂಭವಾಗುವದು. ಭಕ್ತನಾದ ಸ್ತೆಫನನು ಪವಿತ್ರಾತ್ಮನಿಂದ ತುಂಬಲ್ಪಟ್ಟಿದ್ದನು. ಜ್ಞಾನದಿಂದ ತುಂಬಿದವನಾಗಿದ್ದನು. ನಂಬಿಕೆಯಿಂದ ತುಂಬಿದವನಾಗಿದ್ದನು. ದೇವಕೃಪೆಯಿಂದಲೂ ಬಲದಿಂದಲೂ ತುಂಬಿದವನಾಗಿದ್ದನು (ಅ.ಕೃ.6:3,5,8). ಜನರಲ್ಲಿ ಮಹಾ ಅದ್ಭುತ ಕಾರ್ಯಗಳನ್ನೂ ಸೂಚಕ ಕಾರ್ಯಗಳನ್ನೂ ಮಾಡುತ್ತಾ ಇದ್ದನು. ಹಳೆಯ ಒಡಂಬಡಿಕೆಯಲ್ಲಿ ದಾವೀದನೂ ದೇವಕೃಪೆಯಿಂದಲೂ ದೇವರಾತ್ಮನಿಂದಲೂ, ಅಭಿಷೇಕದಿಂದಲೂ ತುಂಬಿದವನಾಗಿದ್ದನು. ಶತ್ರುಗಳನ್ನು ನೋಡುವಾಗೆಲ್ಲಾ ಅವನಲ್ಲಿ ಅಭಿಷೇಕ ಉಕ್ಕಿ ಹರಿದುಬರುತ್ತಿತ್ತು. ನನ್ನ ವೈರಿಗಳ ಮುಂದೆ ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ, ನನ್ನ ಪಾತ್ರೆಯು ತುಂಬಿಹೊರಸೂಸುವದು" (ಕೀರ್ತ. 23:5) ಎಂದು ಹೇಳುತ್ತಾನೆ. ಅನೇಕರು ಪವಿತ್ರಾತ್ಮವನ್ನು ಹೊಂದಿದ್ದರೂ ಅವರೊಳಗೆ ತುಂಬಿ ಹೊರಸೂಸುವ ಅನುಭವವಿಲ್ಲ. ಪ್ರಾರಂಭದಲ್ಲಿ ಎರಡು ಮೂರು ಅನ್ಯಭಾಷೆಗಳನ್ನು ಮಾತನಾಡಿದೆವು. ಇಂದು ಉಗುರು ಬೆಚ್ಚಗಿರುವೆವು ಎನ್ನುವರು. ನೀರಿನ ಪಂಪನ್ನು ಹೊಡೆಯುತ್ತಲೇ ಇದ್ದರೆ ನೀರು ಬರುತ್ತಲೇ ಇರುತ್ತದೆ. ಹಾಗೆಯೇ ಕಲ್ವಾರಿ ಪ್ರೀತಿಯನ್ನು ಪ್ರತಿದಿನ ಧ್ಯಾನ ಮಾಡಿ ಕರ್ತನನ್ನು ಸ್ತುತಿಸುವಾಗ ಅನ್ಯಭಾಷೆ ತಾನಾಗಿಯೇ ಹೊರಹೊಮ್ಮುವದು.

ದೇವಮಕ್ಕಳೇ, ನಿಮ್ಮ ಆಂತರ್ಯವನ್ನು ಪವಿತ್ರಾತ್ಮನು ತುಂಬುವಾಗ ಬಾಯಿ ಅನ್ಯಭಾಷೆಗಳನ್ನು ಮಾತನಾಡುವದು. ನೀವು ಕರ್ತನನ್ನು ಯಾವಾಗಲೂ ನಿಮ್ಮ ಮುಂದೆ ನಿಲ್ಲಿಸುವಾಗ ಆತನು ನಿಮ್ಮ ಆಂತರ್ಯವನ್ನು ತುಂಬಿ ಹೊರಸೂಸುವಂತೆ ಮಾಡುವನು.

*ನೆನಪಿಗೆ : ಶಿಷ್ಯರಾದವರು ಸಂತೋಷ ಪೂರ್ಣರೂ, ಪವಿತ್ರಾತ್ಮಭರಿತರೂ ಆದರು (ಅ.ಕೃ.13:52).*



ಅಕ್ಟೋಬರ್ 8

## ಸ್ತುತಿಯಿಂದ ತುಂಬಿರಿ!

ಬೆಳಿಗ್ಗೆ : ಯೆಶಾಯ 30,31
ಸಂಜೆ : ಫಿಲಿಪ್ಪಿ 4

ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದುಕೊಂಡರು (ಅ.ಕೃ.2:11).

ಶಿಷ್ಯರು ಮೇಲುಪ್ಪರಿಗೆಯಲ್ಲಿ ಮೇಲಣಿಂದ ಬರುವ ಬಲಕ್ಕಾಗಿ ಕಾದಿದ್ದು, ಪ್ರಾರ್ಥಿಸುತ್ತಿದ್ದಾಗ, ಅವರೆಲ್ಲರೂ ಪವಿತ್ರಾತ್ಮನಿಂದ ತುಂಬಲ್ಪಟ್ಟು, ದೇವರಾತ್ಮನು ತಮ ತಮಗೆ ಕರುಣಿಸಿದ ವರದಂತೆ ಬೇರೆ ಬೇರೆ ಭಾಷೆಗಳಿಂದ ಮಾತನಾಡಲಾರಂಭಿಸಿದರು (ಅ.ಕೃ. 2:4). ಹಲವು ದೇಶಗಳಿಂದ ಹಬ್ಬವನ್ನು ಆಚರಿಸಲು ಬಂದಿದ್ದಂಥ ಯೆಹೂದ್ಯರು ತಮ್ಮ ತಮ್ಮ ಭಾಷೆಗಳಲ್ಲಿ ದೇವರ ಮಹತ್ತುಗಳ ವಿಷಯವಾಗಿ ಮಾತನಾಡುವದನ್ನು ಕೇಳಿದರು.

ಇಂದು ಅನೇಕರು ಅನ್ಯಭಾಷೆ ತಮಗೆ ಗೊತ್ತಿಲ್ಲ, ಯಾಕೆ ಸುಮ್ಮನೆ ಅನ್ಯಭಾಷೆ ಮಾತನಾಡಬೇಕು? ಅದು ಸುಳ್ಳು ಎಂದೆಲ್ಲಾ ಹೇಳುವರು. ಸತ್ಯವೇದ ಹೇಳುತ್ತದೆ "ಪ್ರೇರಿತ ವಾಣಿಯನ್ನಾಡುವವನು ದೇವರ ಸಂಗಡ ಮಾತನಾಡುತ್ತಾನೆ, ಹೊರತು ಮನುಷ್ಯರ ಸಂಗಡ ಮಾತನಾಡುವದಿಲ್ಲ. ಅವನು ಆತ್ಮ ಪ್ರೇರಿತನಾಗಿ ರಹಸ್ಯಗಳನ್ನು ನುಡಿಯುತ್ತಿದ್ದರೂ ಯಾರೂ ತಿಳಿದುಕೊಳ್ಳುವದಿಲ್ಲ. ವಾಣಿಯನ್ನಾಡುವವನು ತನಗೆ ಮಾತ್ರ ಭಕ್ತಿ ವೃದ್ಧಿಯನ್ನು ಉಂಟುಮಾಡಿಕೊಳ್ಳುತ್ತಾನೆ (1 ಕೊರಿಂ. 14:2,4). ಹಲವು ದೇಶಗಳ ಭಾಷೆಗಳನ್ನಾಡುವವರು ಕೂಡಿಬರುವಾಗ ಅಂಥವರಿಗೆ ತಿಳಿಯುವಂತೆ ಕರ್ತನು ತಾನೇ ಹಲವು ಬೇರೆ ಭಾಷೆಗಳನ್ನು ಮಾತನಾಡುವ ಶಕ್ತಿಯನ್ನು ಅನುಗ್ರಹಿಸುವನು. ನೀವು ಪವಿತ್ರಾತ್ಮನಿಂದ ತುಂಬುವಾಗ, ಸರಿಯಾದ ರೀತಿಯಲ್ಲಿ ಕರ್ತನನ್ನು ಆರಾಧಿಸದೆ, ಆತನಲ್ಲಿ ಸಂತೋಷಿಸದೆ ಹೋದರೆ ನಿಮ್ಮ ಆತ್ಮವು ಬರಿದಾಗಿಯೇ ಕಾಣಲ್ಪಡುವದು. ಆದರೆ ಕರ್ತನು ಆತ್ಮದಿಂದಲೂ, ಸತ್ಯದಿಂದಲೂ ಆರಾಧಿಸುವಾಗ ನಿಮ್ಮ ಆಂತರ್ಯ ಸಂತೋಷದಿಂದ ತುಂಬಿಹೊರಸೂಸುವದು. ಆತನ ಮಹತ್ವಗಳನ್ನು ಹೇಳಿ ಹೇಳಿ ಆನಂದಿಸುವಿರಿ. ಅರಸನಾದ ದಾವೀದನು ಹೇಳುತ್ತಾನೆ. "ನಿನ್ನ ಹಾಡಿ ಹರಸುತ್ತಾ ನಿನ್ನ ಹೆಸರೆತ್ತಿ ಕೈ ಮುಗಿಯುವೆನು. ಮೃಷ್ಟಭೋಜನದಿಂದಲೋ ಎಂಬಂತೆ ನನ್ನ ಮನಸ್ಸು ಸಂತುಷ್ಟವಾಗಿರುವದು. ನನ್ನ ಬಾಯಿ ಉತ್ಸಾಹಧ್ವನಿ ಮಾಡುತ್ತಾ ನಿನ್ನನ್ನು ಕೊಂಡಾಡುವದು" ಎಂದು (ಕೀರ್ತ. 63:4,5). ಕರ್ತನನ್ನು ಸ್ತುತಿಸುವಾಗ ತಡೆಗಳು ಒಡೆಯಲ್ಪಡುವವು. ದುಷ್ಟ ಶಕ್ತಿಗಳು ಬೆಂಗೊಟ್ಟು ಓಡಿಹೋಗುವವು. ಕರ್ತನನ್ನು ಸ್ತುತಿಸುವಾಗ ಜಯವು ನಿಮ್ಮದಾಗುವದು.

ದೇವಮಕ್ಕಳೇ, ನೀವು ಯಾವಾಗಲೂ ಕರ್ತನನ್ನು ಸ್ತುತಿಸುವವರಾಗಿರ್ರಿ. ಆಗ ನೀವು ದೇವ ಪ್ರಸನ್ನತೆಯನ್ನು ಅನುಭವಿಸುವಿರಿ. ಸ್ತುತಿಸುವವರ ಮನೆಯ ಸುತ್ತಲೂ ದೇವ ಅಗ್ನಿ ಇಳಿದು ಬರುವದು.

*ನೆನಪಿಗೆ : ನಮ್ಮ ದೇವರನ್ನು ಸ್ತುತಿಸುವದು ಒಳ್ಳೆಯದೂ ಸಂತೋಷಕರವೂ ಆಗಿದೆ; ಆತನನ್ನು ಕೀರ್ತಿಸುವದು ಯುಕ್ತವಾಗಿದೆ (ಕೀರ್ತನೆ. 147:1).*

ಅಕ್ಟೋಬರ್ ೯

## ಕಣ್ಣೆತ್ತಿ ನೋಡಿರಿ!

ಬೆಳಿಗ್ಗೆ : ಯೆಶಾಯ 32,33
ಸಂಜೆ : ಕೊಲೊ. 1

"ಅವನು (ಸ್ತೆಫನನು) ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡನು" (ಅ.ಕೃ. 7:55).

ಒಬ್ಬನು ಪವಿತ್ರಾತ್ಮ ಭರಿತನಾಗುವಾಗ, ಅವನ ಕಣ್ಣುಗಳು ಆಕಾಶವನ್ನು ದೃಷ್ಟಿಸುತ್ತಿರುತ್ತವೆ. ನಿಮಗೆ ಆತ್ಮೀಕ ಕಣ್ಣುಗಳು ಅಗತ್ಯ. ಪರಲೋಕವನ್ನು ನೋಡುವ ಅಭಿಷೇಕದ ಕಣ್ಣುಗಳು ಅಗತ್ಯ. ಸ್ತೆಫನನು ಕಲ್ಲೆಸೆದು ಕೊಲ್ಲಲ್ಪಟ್ಟಾಗ, ಜನರು ಅವನ ಮೇಲೆ ಕೋಪೋದ್ರೇಕವುಳ್ಳವರಾಗಿದ್ದರು. ಆದರೆ ಸ್ತೆಫನನೋ, ಆಕಾಶವನ್ನು ದೃಷ್ಟಿಸಿ ನೋಡಿ ತಂದೆಯ ಬಲಪಾರ್ಶ್ವದಲ್ಲಿ ಎದ್ದು ನಿಂತಿದ್ದ ಯೇಸುಕ್ರಿಸ್ತನನ್ನು ನೋಡಿತು.

ದಾವೀದನು ಹೇಳುತ್ತಾನೆ, "ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ. ನನ್ನ ಸಹಾಯವು ಎಲ್ಲಿಂದ ಬರುವದು? ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ" (ಕೀರ್ತ. 121:1,2). ಯಜಮಾನನ ಕೈಯನ್ನು ದಾಸನ ಕಣ್ಣುಗಳೂ, ಯಜಮಾನಿಯ ಕೈಯನ್ನು ದಾನಿಯ ಕಣ್ಣುಗಳೂ ನೋಡುವ ಪ್ರಕಾರವೇ ನಮ್ಮ ಕಣ್ಣುಗಳು ನಮ್ಮ ಯೆಹೋವ ದೇವರನ್ನು ನೋಡುತ್ತಾ ಆತನ ಕಟಾಕ್ಷವನ್ನು ನಿರೀಕ್ಷಿಸಿಕೊಂಡಿವೆ ಎಂದು (ಕೀರ್ತ. 123:2). ನಿಮಗೆ ವಿರೋಧವಾಗಿ ಶತ್ರುಗಳು ಏಳುವಾಗ ಶತ್ರುವನ್ನಲ್ಲ, ಕರ್ತನು ನಿಮಗಾಗಿ ಇಟ್ಟಿರುವ ಪವಿತ್ರಾತ್ಮನನ್ನೂ ಅಭಿಷೇಕವನ್ನೂ ನೋಡಿರಿ. ನನ್ನ ವೈರಿಗಳ ಮುಂದೆ ನನಗಾಗಿ ಔತಣವನ್ನು ಸಿದ್ಧಪಡಿಸಿದ್ದೀ. ನನ್ನ ತಲೆಗೆ ತೈಲವನ್ನು ಹಚ್ಚಿದ್ದೀ. ನನ್ನ ಪಾತ್ರೆಯು ತುಂಬಿ ಹೊರಸೂಸುವದು (ಕೀರ್ತ. 23:5) ಎಂದು ದಾವೀದನು ಹೇಳುತ್ತಾನೆ. ಸ್ತೆಫನನು ಕಲ್ಲೆಸೆದು ಕೊಲ್ಲಲ್ಪಟ್ಟಾಗ ತಂದೆಯ ಬಲಗಡೆಯಲ್ಲಿ ಕುಳಿತಿದ್ದ ಕ್ರಿಸ್ತನು ಎದ್ದು ನಿಂತನು. ನಿಮಗೆ ಸಮಸ್ಯೆಗಳು ಬರುವಾಗ ಬಂಧು ಮಿತ್ರರು ಮನೆಯವರು ನಿಮ್ಮನ್ನು ಬಿಟ್ಟು ಹೋಗುವರು. ಆದರೆ ಕರ್ತನು ಮಾತ್ರವೇ ನಿಮಗಾಗಿ ಹೋರಾಡಿ ಯುದ್ಧಮಾಡುವನು. ಪೌಲನ ಅನುಭವವೂ ಇದೇ ಆಗಿತ್ತು.

ದೇವಮಕ್ಕಳೇ, ಯಾರ ಕಣ್ಣುಗಳು ಕರ್ತನ ಕಡೆಗೆ ಎತ್ತಲ್ಪಡುತ್ತದೋ, ಅಂಥವರಿಗೆ ಕರ್ತನು ನಿಶ್ಚಯವಾಗಿ ತನ್ನ ಸಹಾಯ ಹಸ್ತವನ್ನು ಚಾಚುವನು. ಆದಕಾರಣ, ಸದಾ ನಿಮ್ಮ ಕಣ್ಣುಗಳು ಕರ್ತನನ್ನೇ ದೃಷ್ಟಿಸಲಿ.

*ನೆನಪಿಗೆ : "ನಾನು ಯಾವಾಗಲೂ ಯೆಹೋವನನ್ನು ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ (ಕೀರ್ತ. 16:8).*



ಅಕ್ಟೋಬರ್ 10

## ಧೈರ್ಯದಿಂದ ತುಂಬಿರಿ!

ಬೆಳಿಗ್ಗೆ : ಯೆಶಾಯ 34,35,36
ಸಂಜೆ : ಕೊಲೊ. 2

"ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು. ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು" (ಅ.ಕೃ. 4:31).

ಪವಿತ್ರಾತ್ಮನಿಂದ ತುಂಬಲ್ಪಡುವ ಮೊದಲು, ಶಿಷ್ಯರೆಲ್ಲಾ ಹೇಡಿಗಳಾಗಿ ಇದ್ದರು. ಯೆಹೂದ್ಯ ಸೈನಿಕರು ಗೆತ್ಸೇಮನೆ ತೋಟದಲ್ಲಿ ಯೇಸುಕ್ರಿಸ್ತನನ್ನು ಬಂಧಿಸಿದಾಗ, ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು. ಪೇತ್ರನು ಭಯದಿಂದ ತನ್ನ ಗುರುವನ್ನು ಅಲ್ಲಗಳೆದನು. ಶಪಿಸಿ ಆಣೆ ಇಟ್ಟನು. ಶಿಷ್ಯರು ಭಯದಿಂದ ಮನೆ ಬಾಗಿಲನ್ನು ಮುಚ್ಚಿ ಒಳಗೆ ಅಡಗಿಕೊಂಡಿದ್ದರು. ಆದರೆ ಈಗ ನೋಡಿ! ಪವಿತ್ರಾತ್ಮಭರಿತರಾದಾಗ ಅವರು ಧೈರ್ಯವಾಗಿ ಬೀದಿಗಳಲ್ಲಿ ನಿಂತು ಪ್ರಸಂಗ ಮಾಡುತ್ತಿದ್ದರು.

ಪವಿತ್ರಾತ್ಮನು ನಿಮ್ಮೊಳಗೆ ಬರುವಾಗ, ನೀವು ಧೈರ್ಯವಂತರಾಗಿ ಮಾರ್ಪಡುವಿರಿ. ಪವಿತ್ರಾತ್ಮನು ನಿಮ್ಮೊಳಗೆ ಬರುವಾಗ ಬಲಹೊಂದುವಿರಿ (ಅ.ಕೃ. 1:8). ದಾವೀದನು ಪವಿತ್ರಾತ್ಮ ಭರಿತನಾಗಿದ್ದದರಿಂದ ಗೊಲ್ಯಾತನನ್ನು ನೋಡಿ ಭಯಪಡದೆ ಕಳವಳಗೊಳ್ಳದೆ ಧೈರ್ಯವಾಗಿ ಸೋಲಿಸಿದನು. ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು (ಜ್ಞಾನೋ. 28:1). ಧೈರ್ಯವು ಜಯವನ್ನು ತಂದುಕೊಡುವದು. ನೀವು ಕರ್ತನಿಗಾಗಿ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡುವಿರಿ. ಅಶುದ್ಧಾತ್ಮಗಳನ್ನು ಜಯಿಸುವಿರಿ. ಸೈತಾನನು ಮಾಡುವ ಕಾರ್ಯವೆಂದರೆ ಜನರನ್ನು ಭಯಪಡಿಸುವದು. ಭಯಪಡುವವರು ತಮ್ಮ ಜೀವಿತದಲ್ಲಿ ಆತ್ಮೀಕ ಬಲವನ್ನು ಕಳೆದುಕೊಳ್ಳುವರು. ಸಿಂಹವು ಬೇಟೆಯಾಡುವಾಗ ಮೊದಲು ಅದು ಭಯಂಕರವಾಗಿ ಗರ್ಜಿಸಿ ಭಯಪಡಿಸುವದು. ಅದರ ಶಬ್ದವನ್ನು ಕೇಳಿಯೇ ಪ್ರಾಣಿಗಳು ನಡುಗಲಾರಂಭಿಸುವವು. ಅಲ್ಲಿ ಇಲ್ಲಿ ಓಡಿ ಕಡೆಯಲ್ಲಿ ಸಿಂಹದ ಬಾಯಿಗೆ ಬಲಿಯಾಗಿಬಿಡುವವು. ಹಾಗೆಯೇ ಸೈತಾನನು ಜನರಲ್ಲಿ ಭಯವನ್ನು ಹುಟ್ಟಿಸಿ ಅಧೈರ್ಯಪಡಿಸಿ ಅವರನ್ನು ತನ್ನ ಬಲೆಗೆ ಬೀಳಿಸುವನು. ಇಕ್ಕಟ್ಟಿನ ದಿನದಲ್ಲಿ ನೀನು ಬಳಲಿಹೋದರೆ ನಿನ್ನ ಬಲವೂ ಇಕ್ಕಟ್ಟೇ (ಜ್ಞಾನೋ. 24:10).

ದೇವಮಕ್ಕಳೇ, ಅಂಧಕಾರದಲ್ಲಿರುವ ಜನರನ್ನು ಬಿಡುಗಡೆ ಮಾಡಿ ಅವರನ್ನು ದೇವರ ರಾಜ್ಯಕ್ಕೆ ಕರೆತರುವಂತೆ ಕರ್ತನು ನಿಮ್ಮನ್ನು ಕರೆದಿರುವನು. ನಿಮ್ಮ ಆಂತರ್ಯದಲ್ಲಿ ಉನ್ನತ ಬಲವೂ, ಆತ್ಮದಲ್ಲಿ ಧೈರ್ಯವೂ ಇರುವದಾದರೆ, ನೀವು ಕರ್ತನಿಗಾಗಿ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಲು ಸಾಧ್ಯವಾಗುವದು. ಆದ್ದರಿಂದ ಕ್ರಿಸ್ತನಲ್ಲಿ ಬಲಗೊಳ್ಳಿರಿ. ಧೈರ್ಯದಿಂದ ಸೈತಾನನನ್ನು ಎದುರಿಸಿ ನಿಲ್ಲಿರಿ. ಅವನು ಓಡಿಹೋಗುವನು.

*ನೆನಪಿಗೆ : ಪೇತ್ರ ಯೋಹಾನರು ಧೈರ್ಯದಿಂದ ಮಾತನಾಡುವದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು (ಅ.ಕೃ. 4:13).*

ಅಕ್ಟೋಬರ್ 11

## ಪವಿತ್ರಾತ್ಮನೂ, ಅಧಿಕಾರವೂ!

ಬೆಳಿಗ್ಗೆ : ಯೆಶಾಯ 37,38
ಸಂಜೆ : ಕೊಲೊ. 3

"ಆಗ ಪೌಲನೆನಿಸಿಕೊಳ್ಳುವ ಸೌಲನು ಪವಿತ್ರಾತ್ಮ ಭರಿತನಾಗಿ ಅವನನ್ನು ದೃಷ್ಟಿಸಿ ನೋಡಿ– ಎಲೋ ಎಲ್ಲಾ ಮೋಸದಿಂದಲೂ ಎಲ್ಲಾ ಕೆಟ್ಟತನದಿಂದಲೂ ತುಂಬಿರುವವನೇ ಸೈತಾನನ ಮಗನೇ, ಕರ್ತನು ನಿನ್ನ ಮೇಲೆ ಕೈ ಎತ್ತಿದ್ದಾನೆ" (ಅ.ಕೃ. 13:9,20).

ನಮ್ಮ ಕರ್ತನು ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಸಕಲ ಅಧಿಕಾರವನ್ನು ಹೊಂದಿರುವಾತನು (ಮತ್ತಾ. 28:18). ದೆವ್ವಗಳನ್ನು ಓಡಿಸುವ, ವ್ಯಾಧಿಗಳನ್ನು ಗುಣಪಡಿಸುವ ಶಾಪವನ್ನು ಆಶೀರ್ವಾದವಾಗಿ ಮಾರ್ಪಡಿಸುವ ಸತ್ತವರನ್ನು ಎಬ್ಬಿಸುವ ಅಧಿಕಾರವನ್ನು ನಿಮಗೆ ನೀಡಿರುವನು. ಆದ್ದರಿಂದ ದೇವರಾತ್ಮನಿಂದ ತುಂಬಿದವರಾಗಿ ನಿಮಗೆ ನೀಡಿರುವ ಅಧಿಕಾರವನ್ನು ಉಪಯೋಗಿಸಿರಿ.

ನಮ್ಮ ಕರ್ತನಿಗೆ ಪ್ರಕೃತಿಯ ಮೇಲೆ ಅಧಿಕಾರವಿರುವದು. ಆತನು ಸಮುದ್ರವನ್ನೂ ಬಿರುಗಾಳಿಯನ್ನೂ ಗದರಿಸಿದಾಗ, ಅವು ಶಾಂತವಾದವು. ಆತನು ಎಷ್ಟೋ ಹಗಲುಗಳಲ್ಲಿ ಮಳೆಗಾಳಿ ಎನ್ನದೆ ಪ್ರಯಾಣ ಮಾಡಿ ಸೇವೆ ಮಾಡಿದನು. ಇರುಳಿನಲ್ಲಿ ಬೆಟ್ಟವನ್ನೇರಿ ಪ್ರಾರ್ಥಿಸಿದನು. ಆದರೆ ಬಲಹೀನತೆಯಾಗಲಿ, ವ್ಯಾಧಿಯಾಗಲಿ ಆತನನ್ನು ತಾಕಲಿಲ್ಲ. ಅಧಿಕಾರವುಳ್ಳವನಾಗಿ ದೆವ್ವಗಳನ್ನು ಓಡಿಸಿದನು. ಆ ರಾಜಾಧಿರಾಜನ ಮಕ್ಕಳು ನೀವಾಗಿರುವಿರಿ. ಅಧಿಕಾರವುಳ್ಳವರಾಗಿ ಗಂಭೀರವಾಗಿ ನಡೆದುಕೊಳ್ಳಿರಿ. ಯೆಹೋಶುವನೂ ಹಾಗೆಯೇ. ಅಧಿಕಾರವನ್ನು ಉಪಯೋಗಿಸಿ ಸೂರ್ಯನನ್ನೂ, ಚಂದ್ರನನ್ನೂ ಆಕಾಶದಲ್ಲಿ ನಿಲ್ಲಿಸಿದನು (ಯೆಹೋ. 10:12). ಎಲೀಯನು ಮಳೆಬಾರದಂತೆ ಆಕಾಶಕ್ಕೆ ಆಜ್ಞಾಪಿಸಿದನು. ಮೂರುವರ್ಷ ಆರು ತಿಂಗಳು ಮಳೆ ಬರಲಿಲ್ಲ (1 ಅರ. 17:1, ಯಾಕೊ. 5:17). ಪುನಃ ಅವನು ಪ್ರಾರ್ಥಿಸಲು ಆಕಾಶವು ಮಳೆಗರೆಯಿತು. ಬಾಳನ ಪ್ರವಾದಿಗಳ ಮುಂದೆ, ಕರ್ತನನ್ನು ದೃಢನಂಬಿಕೆಯಿಂದ ಪ್ರಾರ್ಥಿಸಲು ಆಕಾಶದಿಂದ ಅಗ್ನಿ ಇಳಿದುಬಂತು. ಅವನೂ ನಮ್ಮಂತೆ ಸಾಧಾರಣ ಮನುಷ್ಯನೇ ಆಗಿದ್ದನು. ಆದರೆ ಕರ್ತನು ತನಗೆ ನೀಡಿದ ಬಲದಿಂದ ಮಹತ್ಕಾರ್ಯಗಳನ್ನು ಮಾಡಿದನು. ಅಪೊ. ಪೌಲನು ಎಲುಮನೆಂಬ ಮಂತ್ರವಾದಿಯನ್ನು ನೋಡಿ, "ನೀನು ಕುರುಡನಾಗಿ ಕೆಲವು ಕಾಲ ಸೂರ್ಯನನ್ನು ಕಾಣದೆ ಹೋಗುವಿ ಎಂದು ಹೇಳಲು ಅವನ ಕಣ್ಣು ಮೊಬ್ಬಾಗಿ ಕೈಹಿಡಿಯುವವರನ್ನು ಹುಡುಕಿದನು" (ಅ.ಕೃ. 13:11,12).

ದೇವಮಕ್ಕಳೇ, ಕರ್ತನು ನಿಮಗೆ ಅಧಿಕಾರವನ್ನು ಕೊಟ್ಟಿರುವನು. ಅಧಿಕಾರದಿಂದಲೇ ಶಕ್ತಿ ಬರುವದು. ಪವಿತ್ರಾತ್ಮನಿಂದ ತುಂಬಲ್ಪಡುವಾಗ ನಿಮಗೆ ಅಧಿಕಾರ ಬರುವದು. ಆಳ್ವಿಕೆ ಬರುವದು. ಬಲವುಂಟಾಗುವದು. ಅದನ್ನು ಉಪಯೋಗಿಸಿ ಜಯಭರಿತ ಜೀವಿತವನ್ನು ಬಾಳಿರಿ.

*ನೆನಪಿಗೆ : ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ ..... ಇವೆಲ್ಲವನ್ನೂ ಅವನಿಗೆ ಅಧೀನಮಾಡಿದ್ದೀಯಲ್ಲವೇ (ಕೀರ್ತ. 8:6–8).*



ಅಕ್ಟೋಬರ್ 12

## ನನ್ನ ಮನೆಯಲ್ಲಿ!

ಬೆಳಿಗ್ಗೆ : ಯೆಶಾಯ 39,40
ಸಂಜೆ : ಕೊಲೋ. 4

ಸನ್ಮಾರ್ಗವನ್ನು ಲಕ್ಷಿಸಿ ನಡೆಯುವೆನು ನನಗೆ ಯಾವಾಗ ದರ್ಶನಕೊಡುವಿ? ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು. (ಕೀರ್ತ. 101:2).

ಕರ್ತನು ತನ್ನ ಮನೆಗೆ ಖಂಡಿತವಾಗಿ ಬರಲೇಬೇಕೆಂದು ದಾವೀದನು ಪ್ರಾರ್ಥಿಸಿದನು. ಅದಕ್ಕಾಗಿ ತನ್ನನ್ನು ಸಿದ್ಧಪಡಿಸಿಕೊಂಡನು. ಹಲವು ತೀರ್ಮಾನಗಳನ್ನು ತೆಗೆದುಕೊಂಡನು. ಯಾವ ನೀಚಕಾರ್ಯವನ್ನೂ ದೃಷ್ಟಿಸುವದಿಲ್ಲ, ದುರಾಚಾರವನ್ನೂ ಹಗೆ ಮಾಡುತ್ತೇನೆ. ಮೋಸಗಾರನು ನನ್ನ ಮನೆಯಲ್ಲಿರಬಾರದು. ಸುಳ್ಳುಗಾರನು ನನ್ನ ಮುಂದೆ ನಿಲ್ಲಕೂಡದು, ಎಂದೆಲ್ಲಾ ತೀರ್ಮಾನಿಸಿದನು (ಕೀರ್ತ. 101:3,7).

ದಾವೀದನು ಅರಸನಾಗಿದ್ದದರಿಂದ ಮಂತ್ರಿಗಳು ಜ್ಞಾನಿಗಳು ಹೊರದೇಶದ ಪ್ರಮುಖರು ಅವನ ಅರಮನೆಗೆ ಬಂದಿರುತ್ತಾರೆ. ಆದರೆ ಎಲ್ಲರಿಗಿಂತಲೂ ದೇವರು ತನ್ನ ಬಳಿಗೆ ಬರಬೇಕೆಂಬ ಬಯಕೆ ಅವನೊಳಗೆ ಇತ್ತು. ಯಾಕೆಂದರೆ ತನ್ನನ್ನು ದೀನಸ್ಥಿತಿಯಿಂದ ಉನ್ನತ ಸ್ಥಿತಿಗೆ ತಂದ ಕರ್ತನಿಗೆ ಅವನು ಕೃತಜ್ಞನಾಗಿದ್ದನು. ಕುರಿಗಳನ್ನು ಮೇಯಿಸುತ್ತಿದ್ದ ಸ್ಥಿತಿಯನ್ನು ಮಾರ್ಪಡಿಸಿ, ಒಬ್ಬ ಅರಸನನ್ನಾಗಿಸಿದ ಕರ್ತನನ್ನು ತನ್ನ ಹೃದಯದ ಅರಸನನ್ನಾಗಿ ಆರಿಸಿಕೊಂಡಿದ್ದನು. ಕರ್ತನು ಪ್ರಪ್ರಥಮವಾಗಿ ಬಂದ ಮನೆ ಅಬ್ರಹಾಮನ ಮನೆ. ಅ ಮನೆ ದೊಡ್ಡ ಅರಮನೆಯಲ್ಲ. ಸಣ್ಣ ಗುಡಾರವಾಗಿತ್ತು. ತ್ರಯೇಕತ್ವ ದೇವರಾಗಿ ಮೂವರು ಪುರುಷರ ರೂಪದಲ್ಲಿ ಬಂದನು. ಅವರನ್ನು ಎದುರುಗೊಳ್ಳಲು ಅಬ್ರಹಾಮನು ಗುಡಾರದ ಬಾಗಿಲಿನಿಂದ ಓಡಿ ಹೋಗಿ ಬೊಗ್ಗಿ ನಮಸ್ಕರಿಸಿದನು. ಅವರಿಗೆ ಔತಣ ನೀಡಿ ಸತ್ಕರಿಸಿದನು. ಕರ್ತನು ಅವನಿಗೆ ಸಂತಾನ ಭಾಗ್ಯವನ್ನು ಅನುಗ್ರಹಿಸಿದನು (ಆದಿ.18:2–10). ಇಂದು ನಮ್ಮ ಕರ್ತನಾದ ಯೇಸುಕ್ರಿಸ್ತನು ನಿಮ್ಮ ಮನೆಗೆ ಬರುವಾಗ, ಆಶೀರ್ವಾದವು ತಾನಾಗೇ ಬರುವದು. ಡೊಂಕಾದವಗಳು ನೆಟ್ಟಗಾಗುವದು. ಕುಟುಂಬದಲ್ಲಿರುವ ಸಮಸ್ಯೆಗಳು ಹೋರಾಟಗಳು ನೀಗುವವು. ಆತನು ಸಮಾಧಾನದ ಪ್ರಭುವಲ್ಲವೇ? ಆದ್ದರಿಂದ ಕರ್ತನನ್ನು ನಿಮ್ಮ ಮನೆಯೊಳಗೆ ಪ್ರೀತಿಯಿಂದ ಆಹ್ವಾನಿಸಿರಿ. ನಿಮ್ಮ ಮನೆಯನ್ನು ಕ್ರಮಪಡಿಸಿರಿ. ಪವಿತ್ರಪಡಿಸಿರಿ.

ದೇವಮಕ್ಕಳೇ, ಕರ್ತನು ನಿಮ್ಮ ಮನೆಯೊಳಗೆ ನೆಲೆಸಲು ಬಯಸುವನು. ಆದ್ದರಿಂದ ಮನೆಯನ್ನು ಆತನ ಬರುವಿಕೆಗಾಗಿ ಸಿದ್ಧಪಡಿಸಿರಿ. ಆತನಿಗೆ ಬೇಡದ ಸಂಗತಿಗಳು ನಿಮ್ಮೊಳಗೆ ನಿಮ್ಮ ಮನೆಯೊಳಗೆ ಇರುವದಾದರೆ ಅವೆಲ್ಲವುಗಳನ್ನು ಹೊರಗೆ ಹಾಕಿ ಶುದ್ಧೀಕರಿಸಿರಿ. ಪರಿಶುದ್ಧತೆ ಇಲ್ಲದ ಕಡೆ ಕರ್ತನು ತಂಗುವಾತನಲ್ಲ.

*ನೆನಪಿಗೆ : ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನ ಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಿದ್ದನು (ಅ.ಕೃ. 10:2).*

## ಅಕ್ಟೋಬರ್ 13 — ಮನೆಯಲ್ಲಿ ತಂಗಬೇಕು!

ಬೆಳಿಗ್ಗೆ : ಯೆಶಾಯ 41,42
ಸಂಜೆ : 1 ಥೆಸ. 1

ಯೇಸು ಅಲ್ಲಿಗೆ ಬಂದು ಮೇಲಕ್ಕೆ ನೋಡಿ –ಜಕ್ಕಾಯನೇ, ತಟ್ಟನೆ ಇಳಿದು ಬಾ, ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು ಎಂದು ಹೇಳಿದನು. (ಲೂಕ. 19:5).

ನಿಮ್ಮ ಮನೆಗೆ ಒಬ್ಬ ಅತಿಥಿ ತಂಗಲು ಬರುತ್ತಾನೆಂದರೆ, ನೀವು ಏನು ಮಾಡುವಿರಿ? ಅವರ ು ಮಲಗುವ ಕೊಠಡಿಯನ್ನು ಸಿದ್ಧಪಡಿಸುವಿರಿ. ಅವರಿಗೆ ಇಷ್ಟವಾದ ಅಡಿಗೆ ಪದಾರ್ಥಗಳನ್ನು ತಯಾರಿಸುವಿರಿ. ಬಂದವರನ್ನು ಆದರಿಸಿ, ಅವರನ್ನು ಸಂತೋಷಪಡಿಸಬೇಕೆಂಬುದರಲ್ಲಿ ನಿಮ್ಮ ಆಂತರ್ಯ ಕಾತುರಗೊಳ್ಳುವದು.

ಜಕ್ಕಾಯನ ಮನೆಯಲ್ಲಿ ತಾನು ತಂಗಬೇಕೆಂದು ಯೇಸು ಬಯಸಿದಾಗ, ಜಕ್ಕಾಯನ ಆಂತರ್ಯ ಸಂತೋಷಗೊಂಡಿತು. ಆಲದ ಮರದಿಂದ ಅವನು ಕೂಡಲೆ ಇಳಿದು ಸಂತೋಷದಿಂದ ಯೇಸುವನ್ನು ತನ್ನ ಮನೆಗೆ ಕರೆದುಕೊಂಡು ಹೋದನು (ಲೂಕ. 19:6). ಆದರೆ ಕೆಲವರು ಇವನು ಪಾಪಿಯಾದ ಮನುಷ್ಯನ ಬಳಿ ತಂಗಲು ಹೋಗುವನೆಂದು ಗುಣುಗುಟ್ಟಿದರು. ಆತನು ತೆರಿಗೆ ವಸೂಲು ಮಾಡುವವರ, ಪಾಪಿಗಳ ಸ್ನೇಹಿತನೆಂದು ಜನರಿಂದ ತಪ್ಪು ಹೊರಿಸಲ್ಪಟ್ಟವನಾಗಿದ್ದನು. ಆದರೆ ಯೇಸು ಅದರ ಕುರಿತಾಗಿ ಚಿಂತಿಸಲಿಲ್ಲ. ಪಾಪಿಗಳನ್ನು ರಕ್ಷಿಸುವದಕ್ಕಾಗಿಯೇ ಯೇಸುಕ್ರಿಸ್ತನು ಈ ಭೂಮಿಗೆ ಬಂದನು. ಕಳೆದು ಹೋದದ್ದನ್ನು ಹುಡುಕಲು ರಕ್ಷಿಸಲು ಮನುಷ್ಯಕುಮಾರನು ಬಂದಿರುವನು (ಲೂಕ. 19:10). ಜಕ್ಕಾಯನು ತನ್ನ ಮನೆಯನ್ನು ಶುದ್ಧೀಕರಿಸುವದು ಮಾತ್ರವಲ್ಲ, ತನ್ನ ಜೀವಿತವನ್ನೂ ಶುದ್ಧೀಕರಿಸುವದು ಮುಖ್ಯವಾದದ್ದು ಎಂದು ಅರಿತುಕೊಂಡನು. ಆದ್ದರಿಂದಲೇ ಕರ್ತನನ್ನು ನೋಡಿ "ದೇವರೇ, ನನ್ನ ಆಸ್ತಿಯಲ್ಲಿ ಅರ್ಧಭಾಗವನ್ನು ಬಡವರಿಗೆ ಕೊಡುವೆನು. ನಾನು ಯಾರಿಂದಲಾದರೂ ಏನಾದರೂ ಅನ್ಯಾಯವಾಗಿ ತೆಗೆದುಕೊಂಡಿದ್ದರೆ, ನಾಲ್ಕರಷ್ಟು ಹಿಂದಕ್ಕೆ ಕೊಡುವೆನು ಅಂದನು.

ದೇವಮಕ್ಕಳೇ, ದೇವರ ಮುಂದೆಯೂ, ಜನರ ಮುಂದೆಯೂ ನೀವು ಕ್ರಮಪಡಿಸಿ ಕೊಳ್ಳಬೇಕಾದವುಗಳನ್ನು ಕ್ರಮಪಡಿಸಿಕೊಂಡು ಹಿಂದಿರುಗಿಸಬೇಕಾದದ್ದನ್ನು ಹಿಂದಿರುಗಿಸಿಕೊಡುವಾಗ ಕರ್ತನು ನಿಮ್ಮ ಮನೆಯಲ್ಲಿ ಸಂತಸದಿಂದ ತಂಗುವನು. ಅದುವೇ ಕರ್ತನು ನಿರೀಕ್ಷಿಸುವ ಉತ್ತಮವಾದ ಜೀವಿತವಾಗಿದೆ. ಯಾವ ರೀತಿಯ ತಪ್ಪು ಮನಸ್ಸಾಕ್ಷಿ ಇಲ್ಲದಂತೆ ನೋಡಿಕೊಳ್ಳಿರಿ. ಜಕ್ಕಾಯನಿಗೆ ಕ್ರಿಸ್ತನು ಹೇಳಿದಂತೆ "ಈ ಹೊತ್ತು ಈ ಮನೆಗೆ ಇಂದು ರಕ್ಷಣೆಯಾಯಿತು. ಇವನೂ ಅಬ್ರಹಾಮನ ವಂಶಿಕನಲ್ಲವೇ!" ಎಂದು ಹೇಳಿದಂತೆ ನಿಮ್ಮನ್ನು ನಿಮ್ಮ ಕುಟುಂಬದವರನ್ನು ನೋಡಿ ಹೇಳುವನು (ಲೂಕ.19:9). ನಿಮ್ಮ ಮನೆಯಲ್ಲಿ ಯೇಸುಕ್ರಿಸ್ತನು ತಂಗಿರುವನಾ? ನಿಮ್ಮ ಕುಟುಂಬದಲ್ಲಿ ರಕ್ಷಣೆಯ ಸಂತೋಷ ಇರುವದಾ? ಇಂದೇ ಪರೀಕ್ಷಿಸಿರಿ, ರಕ್ಷಣೆಯ ಆನಂದ ಪಡೆಯಿರಿ.

*ನೆನಪಿಗೆ : ಉತ್ಸಾಹ ಧ್ವನಿಯೂ, ಜಯಘೋಷವೂ ನೀತಿವಂತರ ಗುಡಾರಗಳಲ್ಲಿವೆ; ಯೆಹೋವನ ಬಲಗೈ, ಪರಾಕ್ರಮಗಳನ್ನು ನಡಿಸುತ್ತದೆ (ಕೀರ್ತ. 118:15).*



## ಅಕ್ಟೋಬರ್ 14 — ಮಾರ್ಥಳ ಮನೆ!

ಬೆಳಿಗ್ಗೆ : ಯೆಶಾಯ 43, 44
ಸಂಜೆ : 1 ಥೆಸ. 2

ಆತನು (ಯೇಸುಕ್ರಿಸ್ತನು) ಒಂದು ಹಳ್ಳಿಗೆ ಬಂದನು. ಅಲ್ಲಿ ಮಾರ್ಥಳೆಂಬ ಒಬ್ಬ ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಇಳಿಸಿಕೊಂಡಳು (ಲೂಕ. 10:38).

ನೀವು ಯೇಸುಕ್ರಿಸ್ತನನ್ನು ನಿಮ್ಮ ಜೀವಿತದಲ್ಲೂ, ಆಂತರ್ಯದಲ್ಲೂ, ಅಂಗೀಕರಿಸಿಕೊಳ್ಳಬೇಕು. ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ, ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು (ಪ್ರಕ. 3:20) ಅನ್ನುತ್ತಾನೆ.

ಯೇಸುಕ್ರಿಸ್ತನು ಬೆಥಾನ್ಯಕ್ಕೆ ಬಂದಾಗ ಮಾರ್ಥ, ಮರಿಯಳೆಂಬ ಸಹೋದರಿಯರು. ಆತನನ್ನು ಸಂತೋಷದಿಂದ ತಮ್ಮ ಮನೆಗೆ ಸ್ವಾಗತಿಸಿದರು. ಮಾರ್ಥಳ ಗುರಿಯೆಲ್ಲಾ, ಕರ್ತನನ್ನು ಉಪಚರಿಸಬೇಕು, ಊಟ ಸಿದ್ಧಪಡಿಸಬೇಕು ಎಂಬುದರಲ್ಲಿಯೇ ಇತ್ತು. ಆದರೆ ಮರಿಯಳ ಆಂತರ್ಯವೋ ಆತನ ಬೋಧನೆಗಳನ್ನು ಕೇಳಬೇಕೆಂಬುದರಲ್ಲಿಯೇ ಇತ್ತು. ಇಬ್ಬರ ಗುರಿಯೂ ವ್ಯತ್ಯಾಸವಾದದ್ದು. ಮರಿಯಳ ವರ್ತನೆಯನ್ನು ನೋಡಿ ಬೇಸರಗೊಂಡ ಮಾರ್ಥಳು, ಕ್ರಿಸ್ತನ ಬಳಿ ಬಂದು ಸ್ವಾಮಿ, ನನ್ನ ತಂಗಿಯು ಕೆಲಸದಲ್ಲಿ ನನ್ನೊಬ್ಬಳನ್ನೇ ಬಿಟ್ಟಿದ್ದಾಳೆ. ಇದಕ್ಕೆ ನಿನಗೆ ಚಿಂತೆ ಇಲ್ಲವೋ? ನನಗೆ ನೆರವಾಗಬೇಕೆಂದು ಹೇಳು ಅಂದಳು (ಲೂಕ. 10:40). ಆ ಮನೆ ಒಂದು ನ್ಯಾಯಾಲಯವಾಯಿತು. ಯೇಸು ಒಬ್ಬ ನ್ಯಾಯಾಧಿಪತಿಯಾಗಿ ಇರುವನು. ಆಗ ಯೇಸು ಮಾರ್ಥಳನ್ನು ನೋಡಿ, ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಕೆಲವು ಮಾತ್ರ ಬೇಕಾದದ್ದು ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ. ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ" ಅಂದನು (ಲೂಕ. 10:41–42). ಇಸಾಕನ ಜೇಷ್ಠಪುತ್ರನಾದ ಏಸಾವನು ಒಂದು ಮುಷ್ಠಿ ಕೂಳಿಗಾಗಿ ತನ್ನ ಜೇಷ್ಠಪುತ್ರ ಭಾಗ್ಯದ ಹಕ್ಕನ್ನೇ ತನ್ನ ತಮ್ಮನಾದ ಯಾಕೋಬನಿಗೆ ಕೊಟ್ಟುಬಿಟ್ಟನು. ಆದರೆ ಯಾಕೋಬನಾದರೋ, ತಂದೆಯ ಆಶೀರ್ವಾದಗಳ ಮೇಲೂ, ಕರ್ತನ ಆಶೀರ್ವಾದದ ಮೇಲೂ ದಾಹವುಳ್ಳವನಾಗಿದ್ದನು. ಅದನ್ನು ಪಡೆದುಕೊಂಡನು.

ದೇವಮಕ್ಕಳೇ, ಮನೆಯಲ್ಲಿ ಲೌಕೀಕ ಅಗತ್ಯತೆಗಳೂ ಇರುವದು. ಆತ್ಮೀಕ ಅಗತ್ಯತೆಗಳೂ ಇರುವದು. ಕುಟುಂಬಕ್ಕೆ ಮಾಡಬೇಕಾದ ಕರ್ತವ್ಯಗಳೂ ಉಂಟು. ಕರ್ತನಿಗೆ ಮಾಡಬೇಕಾದ ಕರ್ತವ್ಯಗಳೂ ಉಂಟು. ಲೋಕದ ಚಿಂತೆಗಳೂ, ಭಾರಗಳೂ, ಆತ್ಮೀಕ ದಾಹವನ್ನು ಕುಂಟಿತಗೊಳಿಸಬಾರದು. ಶರೀರವೋ ಮಣ್ಣಿಗೆ ಸೇರುವದು. ಆತ್ಮವೋ ನಿರಂತರವೂ ಇರುವಂಥದ್ದು. ಕರ್ತನು ನಿಮ್ಮ ಮನೆಗೆ ಬರುವಾಗ ನಿಮ್ಮ ಆಂತರ್ಯ ಆತ್ಮೀಕ ಕಾರ್ಯವನ್ನೂ ನಿತ್ಯವಾದ ಆಶೀರ್ವಾದವನ್ನೂ ಬಯಸುವದು.

*ನೆನಪಿಗೆ : ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ, ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಇವೆ; ದೇವರು ಇವೆಲ್ಲವುಗಳನ್ನು ಕೂಡ ತೆಗೆದು ಹಾಕುವನು (1 ಕೊರಿಂ. 6:13).*

| ಅಕ್ಟೋಬರ್ 15 | ಕರ್ತನನ್ನು ಸೇವಿಸುವ ಮನೆ! | ಬೆಳಿಗ್ಗೆ : ಯೆಶಾಯ 45,46<br>ಸಂಜೆ : 1 ಥೆಸ. 3 |
|---|---|---|

ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು" (ಯೆಹೋಶು.24:15).

ಯೆಹೋಶುವನು, ಇಸ್ರಾಯೇಲ್ಯರನ್ನು ನೋಡಿ ಯೆಹೋವನ ಸೇವೆ ಮಾಡುವದು ನಿಮಗೆ ಸರಿಕಾಣದಿದ್ದರೆ ಯಾರ ಸೇವೆ ಮಾಡಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ. ನಿಮ್ಮ ಪೂರ್ವಿಕರು ಯೂಫ್ರೇಟೀಸ್ ನದಿಯ ಆಚೆಯಲ್ಲಿ ಪೂಜಿಸುತ್ತಿದ್ದ ದೇವತೆಗಳೋ, ಈ ದೇಶದ ಮೂಲನಿವಾಸಿಗಳಾದ ಅಮೋರಿರಾಯರ ದೇವತೆಗಳೋ, ಹೇಳಿರಿ. "ನಾನೂ ನನ್ನ ಮನೆಯವರೂ ಯೆಹೋವನಿಗೆ ಸೇವೆ ಮಾಡುವೆವು" ಎಂದು ಹೇಳಿ ಅವರಿಗೆ ಸವಾಲನ್ನು ಒಡ್ಡಿದನು.

ನೀವು ಕರ್ತನನ್ನು ಸೇವಿಸುವಿರಾದರೆ ಕರ್ತನು ನಿಮ್ಮ ಮನೆಯ ಜವಾಬ್ದಾರಿಯನ್ನು ವಹಿಸುವನು. ಸಮಾಧಾನವನ್ನೂ, ಸಂತೋಷವನ್ನೂ ನೀಡಿ ಆಶೀರ್ವದಿಸುವನು. ಒಂದು ಮನೆಯ ಯಜಮಾನನು ನೀತಿವಂತನಾಗಿ ಕರ್ತನನ್ನು ಸೇವಿಸಿದರೆ ಸಾವಿರ ತಲೆಯವರೆಗೆ ಕರ್ತನು ಆ ಕುಟುಂಬವನ್ನು ಆಶಿರ್ವದಿಸುವನು. ಒಂದು ಮನೆಯ ಯಜಮಾನನು ದುರ್ಮಾರ್ಗಿಯಾಗಿದ್ದರೆ ನಾಲ್ಕು ತಲೆಯವರೆಗೆ ಶಾಪಗಳು ಆ ಮನೆಯನ್ನು ಹಿಂಬಾಲಿಸುವದು. ನಂಬಿಕೆಯಿಂದ ನೀವು ಅಬ್ರಹಾಮನ ಸಂತತಿಯಾಗಿಯೂ ಕ್ರಿಸ್ತನ ಮಕ್ಕಳಾಗಿಯೂ ಇರುವಿರಿ. ನಿಮ್ಮ ಮಕ್ಕಳು ವಾಗ್ದಾನದ ಮಕ್ಕಳಾಗಿರಬೇಕು. ಕರ್ತನಿಂದ ಬೋಧಿಸಲ್ಪಟ್ಟವರಾಗಿರಬೇಕು. ಪ್ರವಾದಿಯಾದ ಯೆಶಾಯನು ಒಂದು ತೀರ್ಮಾನಕ್ಕೆ ಬಂದು "ಆಹಾ, ನಾನೂ ನನಗೆ ಯೆಹೋವನು ದಯಪಾಲಿಸಿರುವ ಮಕ್ಕಳೂ ಚೀಯೋನ್ ಪರ್ವತದಲ್ಲಿ ವಾಸವಾಗಿರುವ ಸೇನಾಧೀಶ್ವರನಾದ ಯೆಹೋವನಿಂದುಂಟಾದ ಗುರುತುಗಳಾಗಿಯೂ ಅದ್ಭುತಗಳಾಗಿಯೂ ಇಸ್ರಾಯೇಲ್ಯರ ಮಧ್ಯದಲ್ಲಿದ್ದೇವೆ" (ಯೆಶಾ. 8:18) ಅಂದನು. ನಿಮ್ಮ ಮಕ್ಕಳ ಜವಾಬ್ದಾರಿ ನಿಮ್ಮ ಕೈಗಳಲ್ಲಿರುವದು. ಚಿಕ್ಕ ಪ್ರಾಯದಲ್ಲಿಯೇ ಕರ್ತನಿಗೆ ತಕ್ಕ ರೀತಿಯಲ್ಲಿ ಅವರನ್ನು ನಡೆಸಿ ಅವರನ್ನು ನೀತಿವಂತರನ್ನಾಗಿಯೂ, ಪರಿಶುದ್ಧರನ್ನಾಗಿಯೂ ಕರ್ತನ ಮುಂದೆ ನೀವು ನಿಲ್ಲಿಸಬೇಕು. "ಐದರಲ್ಲಿ ಬೆಳೆಯದ್ದು ಐವತ್ತರಲ್ಲಿ ಬೆಳೆಯದು" ಎಂಬುದು ಗಾದೆ ಮಾತು. ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು, ಮುಪ್ಪಿನಲ್ಲಿಯೂ ಓರೆಯಾಗನು (ಜ್ಞಾನೋ. 22:6). "ಬೆತ್ತ ಬೆದರಿಕೆಗಳಿಂದ ಜ್ಞಾನವುಂಟಾಗುವದು. ಶಿಕ್ಷಿಸದೆ ಬಿಟ್ಟ ಹುಡುಗನು ತಾಯಿಯ ಮಾನವನ್ನು ಕಳೆಯುವನು" (ಜ್ಞಾನೋ. 29:15).

ದೇವಮಕ್ಕಳೇ, ಶರೀರಕ್ಕೆ ಆಹಾರವೆಷ್ಟು ಮುಖ್ಯವೋ, ಆತ್ಮೀಕ ಜೀವಿತಕ್ಕೆ ದೇವರ ವಾಕ್ಯಗಳೂ ಅಷ್ಟೇ ಮುಖ್ಯ. ಮಕ್ಕಳು ಚಿಕ್ಕವರಿರುವಾಗಲೇ ಸತ್ಯವೇದ ವಾಕ್ಯಗಳನ್ನು ಬೋಧಿಸಿರಿ. ತಪ್ಪಿ ನಡೆಯುವಾಗ ಶಿಕ್ಷಿಸಿ ಕ್ರಮಪಡಿಸಿರಿ. ಮಕ್ಕಳನ್ನು ದೇವರ ಭಯಭಕ್ತಿಯಲ್ಲಿ ಬೆಳೆಸಿರಿ.

*ನೆನಪಿಗೆ : ನಿನ್ನ ಸಂಗಡ ಊಟದ ಮಣೆಯ ಸುತ್ತಲೂ ಕೂತುಕೊಳ್ಳುವ ನಿನ್ನ ಮಕ್ಕಳು ಎಣ್ಣೇ ಮರದ ಸಸಿಗಳಂತಿರುವರು (ಕೀರ್ತ. 128:3).*



| ಅಕ್ಟೋಬರ್ 16 | ಆರೋಗ್ಯವುಳ್ಳ ಮನೆ! | ಬೆಳಿಗ್ಗೆ : ಯೆಶಾಯ 47,48,49<br>ಸಂಜೆ : 1 ಥೆಸ. 4 |
|---|---|---|

ಯೇಸು ಪೇತ್ರನ ಮನೆಗೆ ಬಂದು ಅವನ ಅತ್ತೆ ಜ್ವರದಿಂದ ಬಿದ್ದಿರುವದನ್ನು ಕಂಡನು (ಮತ್ತಾ. 8:14).

ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದ ದಿನಗಳಲ್ಲಿ ಯಾವ ಯಾವ ಮನೆಗಳಿಗೆ ಆತನು ಹೋದನೋ ಅಲ್ಲೆಲ್ಲಾ ಬಲವಾದ ಅದ್ಭುತ ಕಾರ್ಯಗಳು ನಡೆದವು. ದೆವ್ವಗಳು ಬಿಟ್ಟು ಓಡಿದವು. ಸತ್ತವರು ಜೀವದಿಂದೆದ್ದರು. ವ್ಯಾಧಿಗಳು ಗುಣವಾಯಿತು. ಇಂದಿಗೂ ಕರ್ತನು ನಿಮ್ಮ ಮನೆಗೆ ಬಂದು ನಿಮ್ಮ ಎಲ್ಲಾ ಕೊರತೆಗಳನ್ನು ನೀಗಿಸಲು ಬಯಸುವನು. ಎಲ್ಲಾ ಶಾಪಗಳನ್ನು ನೀಗಿಸಿ ಆಶೀರ್ವದಿಸಲು ಬಯಸುವನು. ಬಾಗಿಲಲ್ಲಿ ನಿಂತು ತಟ್ಟುತ್ತಿರುವನು. ಯೇಸುಕ್ರಿಸ್ತನಿಗೆ ನಿಮ್ಮ ಅಂತರ್ಯದ ಬಾಗಿಲನ್ನು ತೆರೆಯಿರಿ. ಆತನು ನಿಮ್ಮ ಮನೆಯೊಳಗೆ ಪ್ರವೇಶಿಸಿ, ನಿಮ್ಮ ಜೀವಿತವನ್ನು ಕಟ್ಟಿ ಎಬ್ಬಿಸುವನು. "ಯೆಹೋವನು ಮನೇಕಟ್ಟದಿದ್ದರೆ, ಅದನ್ನು ಕಟ್ಟುವವರು ಕಷ್ಟ ಪಡುವದು ವ್ಯರ್ಥ" (ಕೀರ್ತ. 127:1).

ಒಂದು ದಿನ ಪೇತ್ರನ ಅತ್ತೆ ಜ್ವರದಿಂದ ಕಷ್ಟಪಡುತ್ತಿದ್ದಳು. ಕರ್ತನು ಈಗಾಗಲೇ ಪೇತ್ರನಿಗೆ ಗುಣಪಡಿಸುವ ವರವನ್ನು ನೀಡಿದ್ದನು (ಮತ್ತಾ 10:1). ಆದರೆ ಯಾಕೋ ಪೇತ್ರನು ತನ್ನ ಅತ್ತೆಗಾಗಿ, ಭಾರದಿಂದ ಪ್ರಾರ್ಥಿಸಿ ಗುಣಪಡಿಸಲಿಲ್ಲ. ಆದ್ದರಿಂದ ಯೇಸುಕ್ರಿಸ್ತನನ್ನು ತನ್ನ ಮನೆಗೆ ಕರೆದುಕೊಂಡು ಬಂದನು. ಕ್ರಿಸ್ತನು ಅವಳ ಕೈಯನ್ನು ಮುಟ್ಟಿದ ಕೂಡಲೇ ಜ್ವರ ಅವಳನ್ನು ಬಿಟ್ಟು ಹೋಯಿತು. ಅವಳು ಎದ್ದು ಅವರನ್ನು ಉಪಚರಿಸಿದಳು (ಮತ್ತಾ. 8:14,15). ಇಂದು ನಿಮಗೆ ಚಿಕ್ಕ ವ್ಯಾಧಿಯಾಗಿದ್ದರೂ, ದೊಡ್ಡ ವ್ಯಾಧಿಯಾಗಿದ್ದರೂ "ಕರ್ತನೇ ನನ್ನ ಪರಿಹಾರಿಯಾಗಿರುವನು" ಎಂದು ನಂಬಿಕೆಯಿಂದ ಆತನನ್ನು ಪ್ರೀತಿಯಿಂದ ಕರೆಯಿರಿ. ಕರ್ತನು ನಿಮಗೆ ಅಸೌಖ್ಯವನ್ನು ನೀಗಿಸಿ, ಆರೋಗ್ಯವನ್ನು ಉಂಟುಮಾಡುವನು. ನಿಮ್ಮ ಶರೀರ ಕರ್ತನು ವಾಸಿಸುವ ಆಲಯವಾಗಿರುವದು. ಆತನು ತಂಗುವ ಸ್ಥಳದಲ್ಲಿ ವ್ಯಾಧಿಗಳೇ ಇರಬಾರದು. ಯಾವ ಕೇಡೂ ನಿನಗೆ ಸಂಭವಿಸದು. ಯಾವ ಉಪದ್ರವವೂ ನಿನ್ನ ಗುಡಾರದ ಸಮೀಪಕ್ಕೆ ಬಾರದು" (ಕೀರ್ತ.91:10) ಎಂಬುದು ಕರ್ತನ ವಾಗ್ದಾನವಾಗಿದೆ.

ದೇವಮಕ್ಕಳೇ, ಒಂದು ಸತ್ಯವನ್ನು ನಿಮ್ಮ ಅಂತರ್ಯದಲ್ಲಿ ದೃಢಪಡಿಸಿಕೊಳ್ಳಿರಿ. ಮೊದಲನೆಯದಾಗಿ ನಿಮ್ಮ ಶರೀರವನ್ನು ಸೃಷ್ಟಿಸಿದಾತನು ಕರ್ತನು ಎರಡನೆಯದಾಗಿ, ಪಾಪದಿಂದ ವ್ಯಾಧಿ ಬಂದಾಗ, ಆ ವ್ಯಾಧಿಗೆ ಪರಿಹಾರವನ್ನು ತನ್ನ ಶರೀರದಲ್ಲಿ ಅಂಗೀಕರಿಸಿ, ನಿಮ್ಮ ವ್ಯಾಧಿಗಳನ್ನು ತಾನೇ ಹೊತ್ತುಕೊಂಡನು. ಕರ್ತನು ನಿಮ್ಮ ಅಕ್ರಮಗಳನ್ನೆಲ್ಲಾ ಮನ್ನಿಸುವಾಗ, ನಿಮ್ಮ ವ್ಯಾಧಿಗಳೆಲ್ಲಾ ಗುಣವಾಗುವದು. ಆಗ ನಿಮ್ಮ ಕುಟುಂಬಕ್ಕೆ ಮಾಡಬೇಕಾದ ಕರ್ತವ್ಯ, ಕರ್ತನಿಗೆ ಮಾಡಬೇಕಾದ ಕರ್ತವ್ಯ ಎಲ್ಲವನ್ನೂ ಮಾಡಲು ನಿಮ್ಮಿಂದ ಸಾಧ್ಯವಾಗುವದು.

*ನೆನಪಿಗೆ : ಯಾಕೋಬ್ಯರೇ ನಿಮ್ಮ ಡೇರೆಗಳು ಎಷ್ಟೋ ಚೆಲುವಾಗಿವೆ. ಇಸ್ರಾಯೇಲ್ಯರೇ ನಿಮ್ಮ ನಿವಾಸಗಳು ಎಷ್ಟೋ ರಮ್ಯವಾಗಿವೆ (ಅರಣ್ಯ. 24:5).*

ಅಕ್ಟೋಬರ್ 17

## ಆಶೀರ್ವಾದಕ್ಕೆ ಕರೆ!

ಬೆಳಿಗ್ಗೆ : ಯೆಶಾಯ 50,51,52
ಸಂಜೆ : 1 ಥೆಸ. 5

ಅಪಕಾರಕ್ಕೆ ಅಪಕಾರ ಮಾಡದೆ, ನಿಂದೆಗೆ ನಿಂದೆಯನ್ನು ಮಾಡದೆ ಆಶೀರ್ವದಿಸಿರಿ. ಇದಕ್ಕಾಗಿ ದೇವರು ನಿಮ್ಮನ್ನು ಕರೆದಿದ್ದಾನಲ್ಲಾ; (1 ಪೇತ್ರ. 3:9).

ಪ್ರಾಪಂಚಿಕ ರೀತಿಯ ಆಶೀರ್ವಾದಗಳೂ ಉಂಟು. ಆತ್ಮೀಕ ಆಶೀರ್ವಾದಗಳೂ ಉಂಟು. ನಿತ್ಯತ್ವದ ಆಶೀರ್ವಾದಗಳೂ ಉಂಟು. ಇವೆಲ್ಲವುಗಳನ್ನು ನೀವು ಹೊಂದಿಕೊಳ್ಳಬೇಕೆಂದು ಕರ್ತನು ಬಯುಸುವನು. ಎಲ್ಲಾ ಆಶೀರ್ವಾದಗಳನ್ನು ನಿಮಗೆ ನೀಡಿ, ನೀವು ಇತರರಿಗೆ ಆಶೀರ್ವಾದವಾಗಿರಬೇಕೆಂದು ಬಯಸುತ್ತಾನೆ.

ನೀವು ಆಶೀರ್ವಾದವನ್ನು ಪಡೆಯಲು ಸೋಮಾರಿಗಳಾಗಿರದೆ, ಆಲಸ್ಯ ಪಡದೆ ಅದಕ್ಕಾಗಿ ಪ್ರಯತ್ನಿಸಬೇಕು. ಯಾಕೋಬನನ್ನು ನೋಡಿರಿ! ಕರ್ತನ ಆಶೀರ್ವಾದವನ್ನು ಪಡೆಯಲು, ರಾತ್ರಿಯೆಲ್ಲಾ ಹೋರಾಡಿದನು. ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಹೋಗಗೊಡಿಸುವದಿಲ್ಲ ಎಂದು ಹೇಳಿದನು. ಇಡೀ ರಾತ್ರಿ ಹಾಗೆ ಹೋರಾಡಿದ್ದರಿಂದ ಅವನಿಗೆ ಆಶೀರ್ವಾದ ದೊರೆಯಿತು. ಹೊಸ ಹೆಸರು ಸಿಕ್ಕಿತು. ಯಾಕೋಬನು ಇಸ್ರಾಯೇಲನಾಗಿ ಮಾರ್ಪಟ್ಟನು. ಮಂತ್ರಕ್ಕೆ ಮಾವಿನ ಕಾಯಿ ಉದುರುವದಿಲ್ಲ. ನಾನು ಸುಮ್ಮನೆ ಮಲಗಿರುತ್ತೇನೆ, ಕೊಡುವ ದೇವರು ಹೇಗೋ ಕೊಡುತ್ತಾನೆ. ಅಂದರೆ ಸಿಗುವದಿಲ್ಲ. ನೀವು ಆಶೀರ್ವಾದಕ್ಕಾಗಿ ಪ್ರಯತ್ನಿಸಬೇಕು. ನಿಮಗೆ ಐಶ್ವರ್ಯವು ಬೇಕಾ ದಶಮಾಂಶವನ್ನು ಕರ್ತನಿಗೆ ನೀಡಿರಿ. ಸಂತೋಷ ಸಮಾಧಾನ ಬೇಕಾ ಕರ್ತನ ಕಟ್ಟಳೆಗಳನ್ನು ಕೈಗೊಂಡು ನಡೆಯಿರಿ. ಆತನಿಗೆ ವಿಧೇಯರಾಗಿ ಜೀವಿಸಿರಿ. ನಿಮ್ಮ ಆದಾಯದ ದಶಮ ಭಾಗವನ್ನು ಕರ್ತನಿಗೆಂದು ಕೊಡುವಾಗ ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಸಲಾಗದಷ್ಟು ಸುವರಗಳನ್ನು ಸುರಿಸುವನು (ಮಲಾಕಿ 3:10). ಕರ್ತನು ಮನುಷ್ಯನನ್ನು ಸೃಷ್ಟಿಸಿದಾಗ, ಮೊದಲು ಮಾಡಿದ ಕಾರ್ಯ ಅವರನ್ನು ಆಶೀರ್ವದಿಸಿದನು. ನೀವು ಹಬ್ಬಿ ಹೆಚ್ಚಿ ಭೂಮಿಯೆಲ್ಲಾ ತುಂಬಿ ಅದನ್ನು ಅಧೀನ ಪಡಿಸಿಕೊಂಡು ಸಮುದ್ರದ ಮೀನುಗಳನ್ನು ಆಕಾಶದ ಪಕ್ಷಿಗಳನ್ನು ಭೂಮಿಯ ಮೇಲೆ ನಡೆದಾಡುವ ಸಕಲ ಜೀವಿಗಳ ಮೇಲೆ ಆಳ್ವಿಕೆ ನಡೆಸಿರಿ ಎಂದು ಅವರನ್ನು ದೇವರು ಆಶೀರ್ವದಿಸಿದನು (ಆದಿ. 1:22,28). ಈ ಆಶೀರ್ವಾದವನ್ನು ಹೊಂದಿಕೊಳ್ಳುವಂತೆ ಎಲ್ಲವನ್ನೂ ಅಧೀನಪಡಿಸಿಕೊಂಡು ಆಳ್ವಿಕೆ ನಡೆಸಿರಿ. ಪಾಪವನ್ನೂ, ಶಾಪವನ್ನೂ ವ್ಯಾಧಿಯನ್ನೂ ಸೈತಾನನನ್ನೂ ಅಧೀನಪಡಿಸಿಕೊಂಡು ಅವುಗಳ ಮೇಲೆ ಆಳ್ವಿಕೆ ನಡಿಸಿರಿ.

ದೇವಮಕ್ಕಳೇ, ಕರ್ತನ ಬಳಿ ಆಶೀರ್ವಾದವನ್ನು ಕೇಳಿ ಪಡೆದುಕೊಳ್ಳಿರಿ. ಕೇಳಿರಿ ಕೊಡಲ್ಪಡುವದು. ಹುಡುಕಿರಿ ಸಿಕ್ಕುವದು, ತಟ್ಟಿರಿ ತೆರೆಯಲ್ಪಡುವದು (ಮತ್ತಾ. 7:7). ನಂಬಿಕೆಯಿಂದ ನಿರೀಕ್ಷೆಯಿಂದ ಕೇಳಿರಿ. ಕೇಳುವ ಪ್ರತಿಯೊಬ್ಬನೂ ಹೊಂದಿಕೊಳ್ಳುವನು.

*ನೆನಪಿಗೆ : ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ. ಬೇಡಿಕೊಳ್ಳಿರಿ ನಿಮಗೆ ಸಿಕ್ಕುವದು. ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು (ಯೋಹಾ.16:24).*



ಅಕ್ಟೋಬರ್ 18

## ಸಮಾಧಾನಕ್ಕೆ ಕರೆ!

ಬೆಳಿಗ್ಗೆ : ಯೆಶಾಯ 53,54,55
ಸಂಜೆ : 2 ಥೆಸ. 1

ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ (1 ಕೊರಿಂ. 7:15).

ಕರ್ತನು ನಿಮ್ಮನ್ನು ತನ್ನ ಮಹಿಮೆಗಾಗಿ ಕರೆದಿರುವನು, ಆಶೀರ್ವಾದಕ್ಕಾಗಿ ಕರೆದಿರುವನು. ಮಾತ್ರವಲ್ಲ ಸಮಾಧಾನಕ್ಕಾಗಿ ಕರೆದಿರುವನು. ಆದ್ದರಿಂದ ಯಾವಾಗಲೂ ನಿಮ್ಮ ಆಂತರ್ಯದಲ್ಲೂ, ಕುಟುಂಬದಲ್ಲೂ ಸಮಾಧಾನವನ್ನು ಕಾಪಾಡಿಕೊಳ್ಳಿರಿ. ಯೇಸುವೇ ಸಮಾಧಾನ ಪ್ರಭು. ಆತನು ನಿಮ್ಮ ಮನೆಯೊಳಗೆ ತಂಗಿರುವದಾದರೆ ಎಲ್ಲಾ ಬುದ್ಧಿಗೂ ಮೇಲಾದ ದೇವಸಮಾಧಾನ ನಿಮ್ಮ ಕುಟುಂಬವನ್ನು ಆವರಿಸುವದು.

ಸಮಾಧಾನ ರಹಿತವಾದ ಈ ಪ್ರಪಂಚದಲ್ಲಿ ಒಬ್ಬನೇ ಒಬ್ಬನು ಸಮಾಧಾನ ಕೊಡಲು ಸಾಧ್ಯ. ಆತನೇ ಯೇಸುಕ್ರಿಸ್ತನು. ಆತನು ಜನಿಸಿದಾಗ ಪರಲೋಕ ಸೈನ್ಯದವರ ಒಂದು ದೊಡ್ಡ ಗುಂಪು ಕಾಣಿಸಿಕೊಂಡು– "ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ. ದೇವರು ಅವರಿಗೆ ಒಲಿಯುತ್ತಾನೆ" ಎಂದು ಹೇಳಿ ದೇವರನ್ನು ಸ್ತುತಿಸಿದರು (ಲೂಕ. 2:14). ಇಂದೂ ಸಹ, ಯೇಸುಕ್ರಿಸ್ತನು ನಿಮಗೆ ಸಮಾಧಾನವನ್ನು ನೀಡುವನು. ಎಲ್ಲೈ ಕಷ್ಟಪಡುವವರೇ, ಹೊರೆ ಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾ. 11:28) ಎಂದು ಕೈಚಾಚಿ ಕರೆಯುತ್ತಿರುವನು. ಒಬ್ಬ ಮನುಷ್ಯನು ಸಮಾಧಾನವನ್ನು ಕಳೆದುಕೊಳ್ಳುವದಕ್ಕೆ ಸಾವಿರ ಕಾರಣಗಳುಂಟು. ಪಾಪ ಭೋಗಗಳಲ್ಲಿ ನಡೆದು ಸಮಾಧಾನವನ್ನು ಕಳೆದುಕೊಳ್ಳುವರು. ವ್ಯರ್ಥವಾದ ಜಗಳಗಳಿಂದ ಹೊಟ್ಟೆಕಿಚ್ಚು, ಮತ್ಸರಗಳಿಗೆ ಒಳಗಾಗಿ ಸಮಾಧಾನವನ್ನು ಕಳೆದುಕೊಳ್ಳುವರು. ಕುಟುಂಬದಲ್ಲಿ ವ್ಯಾಧಿಗಳು, ಸಮಸ್ಯೆಗಳು ತಾಕುವಾಗ ಸಮಾಧಾನವನ್ನು ಕಳೆದುಕೊಳ್ಳುವರು. ಅಂಥಹ ಸಮಯಗಳಲ್ಲಿ ಅನೇಕರು ಲೌಕೀಕವಾದ ಕ್ಷಣಿಕ ಸಮಾಧಾನವನ್ನು ಹುಡುಕಿಕೊಂಡು ಹೋಗಿ ಇನ್ನೂ ಅಧಿಕವಾದ ಸಮಸ್ಯೆಗಳಿಗೆ ಸಿಲುಕಿಕೊಳ್ಳುವರು. ಆದರೆ ನಿಜವಾದ ಸಮಾಧಾನವನ್ನು ಪಡೆಯಲು ಇರುವ ಒಂದೇ ಮಾರ್ಗ ಯೇಸುಕ್ರಿಸ್ತನೇ ಆಗಿರುವನು. ಆತನು ನೀಡುವ ಸಮಾಧಾನ ನಿತ್ಯನಿರಂತರವಾದ ಸಮಾಧಾನವಾಗಿದೆ.

ದೇವಮಕ್ಕಳೇ, ಸಮಾಧಾನ ಪ್ರಭುವಾದ ಕ್ರಿಸ್ತನನ್ನು ಇಂದೇ ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಿರಿ. ಆತನ ಬಳಿಗೆ ಬಂದ ನಂತರ ಪಾಪವು ನಿಮ್ಮನ್ನು ಮುಟ್ಟದಂತೆ ಕಾಯ್ದುಕೊಳ್ಳಿರಿ.

*ನೆನಪಿಗೆ : ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ (ಅರಣ್ಯ. 6:26).*

ಅಕ್ಟೋಬರ್ 19

## ಸಮಾಧಾನವನ್ನು ಕಾಯ್ದುಕೊಳ್ಳಿರಿ!

ಬೆಳಿಗ್ಗೆ : ಯೆಶಾಯ 56,57,58
ಸಂಜೆ : 2 ಥೆಸ. 2

"ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ" (1 ಕೊರಿಂ. 7:15).

ಕರ್ತನು ಆಶೀರ್ವದಿಸುವಾಗಲಾದರೂ ಸರಿ, ದೇವಸೇವಕರು ಆಶೀರ್ವದಿಸುವಾಗಲಾದರೂ ಸರಿ, ಸಮಾಧಾನವನ್ನು ಹೇಳಿಯೇ ಆಶೀರ್ವದಿಸುವದನ್ನು ನೋಡಬಹುದು. ಅಪೊ.ಪೌಲನು ತನ್ನ ಪತ್ರಿಕೆಗಳಲ್ಲಿ "ಸಮಾಧಾನದ ದೇವರು ತಾನೇ ನಿಮ್ಮೆಲ್ಲರೊಂದಿಗೆ ಇರಲಿ" ಎಂದೂ, "ನಿಮಗೆ ಕೃಪೆಯೂ, ಸಮಾಧಾನವೂ ಉಂಟಾಗಲಿ" ಎಂದೂ "ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ" ಎಂದೂ ವಂದಿಸಿ ಆಶೀರ್ವದಿಸುವದನ್ನು ನೋಡುತ್ತೇವೆ (ರೋಮಾ.15:33, 2ಕೊರಿಂ. 1:2, 1ಥೆಸ. 5:23).

ನಿಮ್ಮನ್ನು ಕರೆಯುವ ದೇವರು ಸಮಾಧಾನ ಕರ್ತನು. ಆತನು ಸಮಾಧಾನ ಪ್ರಭು. ನಿಮ್ಮನ್ನು ಕರೆಯುವಾಗ ನಿಮ್ಮ ಜೀವಿತದಲ್ಲಿ ಸಮಾಧಾನ ಕೊಡದೇ ಇರುವನಾ? ನಿಮ್ಮ ಜೀವಿತದಲ್ಲಿ ಬೀಸುವ ಬಿರುಗಾಳಿಯನ್ನು ಮೊರೆಯುವ ಅಲೆಗಳನ್ನು ಶಾಂತಗೊಳಿಸದೇ ಇರುವನಾ? ನಿಶ್ಚಯವಾಗಿ ಆತನು ಸಮಧಾನವನ್ನು ನೀಡುವನು.ಅನೇಕರ ಕುಟುಂಬಗಳಲ್ಲಿ ಸಮಾಧಾನವಿಲ್ಲ. ಗಂಡ ಹೆಂಡತಿ, ಅತ್ತೆ ಸೊಸೆ, ಹಾವು ಮುಂಗುಸಿಗಳಂತೆ ಇರುವರು. ಮನೆಯೊಳಗೆ ಹೊಕ್ಕರೆ ಕೋಪದ ಆತ್ಮ ಅವರನ್ನು ಹಿಡಿಯುವದು. ಒಬ್ಬರ ಮೇಲೊಬ್ಬರು ಸಂದೇಹಕ್ಕೆ ಒಳಗಾಗಿ ಕುಟುಂಬಗಳು ತತ್ತರಿಸುವದನ್ನು ನೋಡುತ್ತೇವೆ. ಇವೆಲ್ಲವುಗಳ ಮಧ್ಯದಲ್ಲಿ ಕರ್ತನು "ನಾನು ನಿಮ್ಮನ್ನು ಸಮಾಧಾನಕ್ಕಾಗಿಯೇ ಕರೆದಿದ್ದೇನೆ" ಎಂದು ನಿಮಗೆ ಹೇಳುತ್ತಾನೆ. ಕರ್ತನು ಕೊಡುವ ಸಮಾಧಾನ ತಿಳಿನೀರಿನಂತೆ ಶುದ್ಧವಾದದ್ದು. ಆ ದೇವಸಮಾಧಾನ ನಿಮ್ಮೊಳಗೆ ಬರುವಾಗ ಈ ಲೋಕದ ಯಾವ ಸಂಗತಿಗಳಾಗಲಿ ನಿಮ್ಮ ಆಂತರ್ಯವನ್ನು ಕಳವಳಕ್ಕೆ ಈಡು ಮಾಡದು. ಕರ್ತನು ಹೇಳುತ್ತಾನೆ, ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ. ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ. ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ, ಹೆದರದಿರಲಿ" ಎಂದು (ಯೋಹಾ. 14:27).

ದೇವಮಕ್ಕಳೇ, ನಿಮ್ಮ ಸಮಾಧಾನಕ್ಕೆ ವಿರೋಧವಾಗಿ ಶತ್ರುವು ಏಳುವಾಗ, ನಿಮ್ಮನ್ನು ಕರೆದ ಸಮಾಧಾನ ಪ್ರಭುವನ್ನು ಕೂಗಿ ಕರೆಯಿರಿ. ಆತನ ಬಳಿ ನಿಮ್ಮ ಸಮಸ್ಯೆಗಳನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಬುದ್ಧಿಗೂ ಮೇಲಾದ ದೇವಸಮಾಧಾನ ನಿಮ್ಮನ್ನು ಆವರಿಸುವದು. ನಿಮ್ಮನ್ನು ಕರೆದು, ಸಮಾಧಾನ ನೀಡುವೆನು ಎಂಬಾತನು ನಂಬಿಗಸ್ತನು (1 ಕೊರಿಂ. 1:9).

*ನೆನಪಿಗೆ : ನಿಮ್ಮನ್ನೂ, ನಮ್ಮನ್ನೂ, ಒಂದುಮಾಡಿದವನಾದ ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ (ಎಫೆ. 2:14).*



ಅಕ್ಟೋಬರ್ 20

## ಪ್ರಾರ್ಥನೆಗೆ ಕರೆ!

ಬೆಳಿಗ್ಗೆ : ಯೆಶಾಯ 59,60,61
ಸಂಜೆ : 2 ಥೆಸ. 3

ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ? (ಮತ್ತಾ. 26:40).

ಕರ್ತನು ನಿಮ್ಮನ್ನು ಯಾವದಕ್ಕಾಗಿ ಕರೆದಿರುವನು? ನೀವು ಪ್ರಾರ್ಥನಾ ವೀರರಾಗಿರುವಂತೆ ಕರೆದಿರುವನು. ಕ್ರಿಸ್ತನೊಂದಿಗೆ ಕೂಡಿ ಆಸಕ್ತಿಯಿಂದ ಪ್ರಾರ್ಥಿಸುವಂತೆ ಕರೆದಿರುವನು. ಆತನ ಹೃದಯದ ಭಾರವನ್ನು ಹಂಚಿಕೊಂಡು ಪ್ರಾರ್ಥಿಸುವಂತೆ ಕರೆದಿರುವನು. ನಿಮ್ಮನ್ನು ಒಪ್ಪಿಸಿಕೊಡುವಿರಾ?

ಗೆತ್ಸೇಮನೆ ತೋಟದಲ್ಲಿ ಕ್ರಿಸ್ತನಿಗೆ ಪ್ರಾರ್ಥನಾ ಸಹಾಯದ ಅವಶ್ಯಕತೆ ಇತ್ತು. ಅಲ್ಲಿಯವರೆಗೆ ಆತನೊಂದಿಗೆ ಇದ್ದ ಶಿಷ್ಯರು ಈಗ ಘನನಿದ್ರೆಯ ಆತ್ಮದಿಂದ ಹಿಡಿಯಲ್ಪಟ್ಟು ನಿದ್ರಿಸುತ್ತಿದ್ದರು. ಯೇಸುಕ್ರಿಸ್ತನು ಅಧಿಕವಾಗಿ ವ್ಯಾಕುಲಗೊಂಡು ಭಾರದಿಂದ ಪ್ರಾರ್ಥಿಸುತ್ತಿದ್ದನು. ಆತನು ಎಷ್ಟೇ ಪ್ರಾರ್ಥಿಸಿದರೂ, ಬಿಡುಗಡೆ ಸಿಗಲಿಲ್ಲ. ಈ ಪಾತ್ರೆಯು ನನ್ನನ್ನು ಬಿಟ್ಟುಹೋಗುವದಾದರೆ ಬಿಟ್ಟು ಹೋಗಲಿ ಎಂದು ಗೋಳಾಡಿದರೂ, ತಂದೆ ದೇವರಿಂದ ಉತ್ತರ ಬರಲಿಲ್ಲ. ಆತನು ಶಿಷ್ಯರ ಬಳಿಗೆ ಬಂದು "ನೀವು ಒಂದು ತಾಸಾದರೂ, ನನ್ನೊಂದಿಗೆ ಎಚ್ಚರವಿರಲಾರಿರಾ? ಎಂದು ಕೇಳಿದನು. ಒಂದು ದಿನಕ್ಕೆ ಇಪ್ಪತ್ನಾಲಕ್ಕು ಗಂಟೆ ಕೆಲಸ ಮಾಡಲು ಊಟ ಮಾಡಲು, ನಿದ್ರಿಸಲು ಹೇರಳವಾದ ಸಮಯ ಇದ್ದರೂ, ನೀವು ಒಂದು ಗಂಟೆಯಾದರೂ ಪ್ರಾರ್ಥಿಸಬೇಕೆಂದು ಆತನು ಬಯಸುತ್ತಾನೆ. ಅದಕ್ಕಾಗಿಯೇ ನಿಮ್ಮನ್ನು ಕರೆದಿರುವನು. ಸಮಯದಲ್ಲಿ ದಶಮಾಂಶ ಕೊಡಬೇಕೆಂದರೆ ಒಂದು ದಿನಕ್ಕೆ ಎರಡು ಗಂಟೆ ನಲವತ್ತು ನಿಮಿಷಗಳು ಪ್ರಾರ್ಥಿಸಬೇಕು. ಆದರೆ ಕರ್ತನು ಒಂದು ಗಂಟೆಯಾದರೂ? ಎಂದು ಕೇಳುತ್ತಾನೆ. ಮಾತ್ರವಲ್ಲ ನನ್ನೊಂದಿಗೆ ಎಂದು ಕೈಚಾಚುತ್ತಿರುವನು. ತನ್ನನ್ನು ನಿಮ್ಮ ಪ್ರಾರ್ಥನಾ ಸ್ನೇಹಿತನನ್ನಾಗಿಸಿಕೊಂಡು, ನನ್ನ ಕೈಗಳನ್ನು ಹಿಡಿದುಕೊಂಡು ಒಂದು ಗಂಟೆ ಪ್ರಾರ್ಥಿಸುವಂತೆ ಬಯಸುತ್ತಾನೆ. ಪರಿಶುದ್ಧತೆಗಾಗಿ ಕರೆದಿರುವಾತನು, ತನ್ನ ಮಹಿಮೆಗಾಗಿ ಆರಿಸಿಕೊಂಡಿರುವಾತನು, ಪ್ರಾರ್ಥನಾವೀರರಾಗುವಂತೆ ನಿಮ್ಮನ್ನು ಕರೆಯುವನು. ನೀವು ಕ್ರಿಸ್ತನೊಂದಿಗೆ ಕೂಡಿ ಪ್ರಾರ್ಥಿಸುವಾಗ ಮಾತ್ರ ತಂದೆಯ ಚಿತ್ತ ನೆರವೇರುವದು. ಸೈತಾನನ ಕೋಟೆಗಳು ಕೆಡವಲ್ಪಡುವದು. ದೇವರ ರಾಜ್ಯ ಕಟ್ಟಲ್ಪಡುವದು. ಸತ್ಯವೇದ ಹೇಳುತ್ತದೆ, ಎಲೀಯನು ನಮ್ಮಂತೆ ಸಾಮಾನ್ಯ ಮನುಷ್ಯನಾಗಿದ್ದರೂ, ಮಳೆಬರಬಾರದೆಂದು ಬಲವಾಗಿ ಪ್ರಾರ್ಥಿಸಿದ್ದರಿಂದ ಮೂರುವರೆ ವರ್ಷಗಳು ಮಳೆಬರಲಿಲ್ಲ. ಪುನಃ ಪ್ರಾರ್ಥಿಸಿದಾಗ ಮಳೆ ಬಂದಿತು (ಯಾಕೋ. 5:17,18).

ದೇವಮಕ್ಕಳೇ, ದಿನದಲ್ಲಿ ಒಂದು ಗಂಟೆಯಾದರೂ ಪ್ರಾರ್ಥಿಸಲು ನಿಮ್ಮನ್ನು ಒಪ್ಪಿಸಿಕೊಡಿರಿ. ಪ್ರಾರ್ಥನೆ ಎಲ್ಲವನ್ನೂ ಜಯಿಸುವ ಆಯುಧ.

*ನೆನಪಿಗೆ : ಇವನು ಇಂಥವನಾಗಿರುವದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು. ...ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿ.... ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪಿಸಿದನಲ್ಲಾ (ಯೆಶಾ. 53:12).*

| ಅಕ್ಟೋಬರ್ 21 | ಅನ್ಯೋನ್ಯತೆಗೆ ಕರೆ! | ಬೆಳಿಗ್ಗೆ : ಯೆಶಾಯ 62,63,64<br>ಸಂಜೆ : 1 ತಿಮೊ. 1 |
|---|---|---|

ದೇವರು ನಂಬಿಗಸ್ತನು; ನಮ್ಮ ಕರ್ತನಾದ ಯೇಸುಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದನು (1 ಕೊರಿಂ. 1:9).

ದೇವರು ನಮ್ಮನ್ನು ಕರೆದ ಉದ್ದೇಶಗಳಲ್ಲಿ ಒಂದು "ಕ್ರಿಸ್ತನೊಂದಿಗೆ ಅನ್ಯೋನ್ಯತೆಯಿಂದಿರುವದು." ಆತನು ನಂಬಿಗಸ್ತನು, ದೇವರು ಮನುಷ್ಯನನ್ನು ಸೃಷ್ಟಿಸಿದಾಗ ತಾನು ಅವನೊಂದಿಗೆ ಅನ್ಯೋನ್ಯತೆಯಿದಿರಬೇಕೆಂಬ ಉದ್ದೇಶ ಆತನಲ್ಲಿ ಇತ್ತು. ಆದ್ದರಿಂದಲೇ ತನ್ನ ಸಾರೂಪ್ಯದಲ್ಲಿ ರೂಪದಲ್ಲಿ ಮನುಷ್ಯನನ್ನು ಸೃಷ್ಟಿಸಿದನು. ಮನುಷ್ಯನು ದೇವರೊಂದಿಗೆ ಅನ್ಯೋನ್ಯತೆಯನ್ನು ಬಯಸಿದ್ದಕ್ಕಿಂತಲೂ, ದೇವರು ಮನುಷ್ಯನೊಂದಿಗೆ ಅನ್ಯೋನ್ಯತೆಯನ್ನು ಅಧಿಕವಾಗಿ ಬಯಸಿದನು.

ಮನುಷ್ಯನಲ್ಲಿ ಪಾಪವು ಹೊಕ್ಕದ್ದರ ನಿಮಿತ್ತ ದೇವರೊಂದಿಗಿನ ಅನ್ಯೋನ್ಯತೆಯು ತುಂಡರಿಸಿತು. ಪಾಪವು ಅಕ್ರಮವು ಮನುಷ್ಯನನ್ನು ದೇವರಿಂದ ಬೇರ್ಪಡಿಸಿತು. ಮನುಷ್ಯನು ದೇವರ ಪ್ರೀತಿಯನ್ನು ಅನ್ಯೋನ್ಯತೆಯನ್ನು ಬಿಟ್ಟು ದೂರ ಹೋದನು. ಆದರೆ ಕರ್ತನೋ, ಪುನಃ ಆ ಅನ್ಯೋನ್ಯತೆಯನ್ನು ಸೃಷ್ಟಿಸುವದಕ್ಕಾಗಿ ತನ್ನ ಒಬ್ಬನೇ ಮಗನನ್ನು ಭೂಮಿಗೆ ಕಳುಹಿಸಿದನು. ಕಳೆದು ಹೋದ ಕುರಿಯನ್ನು ಹುಡುಕುವಂತೆ ಅನ್ಯೋನ್ಯತೆಯಲ್ಲಿ ಬಿದ್ದುಹೋದ ಮನುಷ್ಯನನ್ನು ಆತನು ಪ್ರೀತಿಯಿಂದ ಹುಡುಕಿ ಬಂದನು. ಕೆಸರಿನಿಂದ ಮೇಲಕ್ಕೆ ಎತ್ತಿದನು. ತಡೆಯಾಗಿ ನಿಂತ ಪಾಪವನ್ನು ತನ್ನ ರಕ್ತದಿಂದ ಒಡೆದುಹಾಕಿದನು. ಕ್ರಿಸ್ತನ ಅನ್ಯೋನ್ಯತೆಗೆ ಕರೆದ ದೇವರು ನಂಬಿಗಸ್ತನು ಮಾತ್ರವಲ್ಲ ರೊಟ್ಟಿಯಾಗಿರುವ ಕ್ರಿಸ್ತನ ದೇಹವನ್ನು ತಿನ್ನುವಾಗ, ದ್ರಾಕ್ಷಾರಸವಾಗಿರುವ ಆತನ ರಕ್ತವನ್ನು ಸೇವಿಸುವಾಗ, ನಮ್ಮೊಂದಿಗೆ ಐಕ್ಯಗೊಳ್ಳುವನು. ಮಾತ್ರವಲ್ಲ ನೀವು ಸದಾಕಾಲಕ್ಕೂ ದೇವರೊಂದಿಗೆ ಅನ್ಯೋನ್ಯತೆ ಉಳ್ಳವರಾಗಿರುವಂತೆ ಆತನು ಪವಿತ್ರಾತ್ಮನನ್ನು ನೀಡಿರುವನು. ಆತನು ನಿಮ್ಮೊಳಗೆ ತಂಗಿ, ವಾಸವಾಗಿದ್ದು ದೇವರ ಅನ್ಯೋನ್ಯತೆಯನ್ನು ನೆಲೆಗೊಳಿಸುವನು. ನೀವು ಪ್ರತಿ ಬಾರಿ ಪವಿತ್ರ ಭೋಜನ ಸಂಸ್ಕಾರದಲ್ಲಿ ಭಾಗಿಯಾಗುವಾಗೆಲ್ಲಾ, ಪವಿತ್ರಾತ್ಮನ ಅನ್ಯೋನ್ಯತೆಯನ್ನು ಹೊಂದುವಿರಿ. ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆ ದೇವರ ಪ್ರೀತಿ, ಪವಿತ್ರಾತ್ಮನ ಅನ್ಯೋನ್ಯತೆ ನಮ್ಮೆಲ್ಲರೊಂದಿಗೆ ಸಹಾ ಸದಾಕಾಲವೂ ಇರಲೆಂದು ಆ ಆಶೀರ್ವಾದ ಹೇಳುತ್ತದೆ.

ದೇವಮಕ್ಕಳೇ, ಕ್ರಿಸ್ತನು "ನೀವು ನನ್ನಲ್ಲಿ ನೆಲೆಗೊಳ್ಳಿರಿ, ನಾನೂ ನಿಮ್ಮಲ್ಲಿ ನೆಲೆಗೊಳ್ಳುವೆನು" ಎಂದು ಹೇಳಿರುವನು (ಯೋಹಾ. 15:4). ಹೌದು, ಇದುವೇ ಅನ್ಯೋನ್ಯತೆಯ ಶ್ರೇಷ್ಠತೆಯಾಗಿದೆ. ಪ್ರಿಯರೇ ಸದಾ ಕಾಲವೂ ಕ್ರಿಸ್ತನಲ್ಲಿ ನೆಲೆಗೊಂಡಿರ್ರಿ. ಆ ಅನ್ಯೋನ್ಯತೆ ನೆಲೆಯಾದದ್ದಾಗಿಯೂ, ನಿರಂತರವಾದದ್ದಾಗಿಯೂ ಕಾಣಲ್ಪಡಲಿ.

*ನೆನಪಿಗೆ : ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ, ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸುಕ್ರಿಸ್ತನ ಸಂಗಡಲೂ ಇರುವಂಥದು (1 ಯೋಹಾ.1:3).*



| ಅಕ್ಟೋಬರ್ 22 | ಶ್ರಮೆ ಪಡಲು ಕರೆ! | ಬೆಳಿಗ್ಗೆ : ಯೆಶಾಯ 65,66<br>ಸಂಜೆ : 1 ತಿಮೊ. 2 |
|---|---|---|

ಒಳ್ಳೇದನ್ನು ಮಾಡಿ ಬಾಧೆ ಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ. ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ (1 ಪೇತ್ರ. 2:20,21).

ನಮ್ಮನ್ನು ಕರೆದಾತನು ನಂಬಿಗಸ್ತನು. ಆತನು ನಮ್ಮನ್ನು ಯಾತಕ್ಕಾಗಿ ಕರೆದನು? ಆತನು ಪರಿಶುದ್ಧತೆಗಾಗಿ, ಸಮಾಧಾನಕ್ಕಾಗಿ ನಿತ್ಯ ಮಹಿಮೆಗಾಗಿ ಕರೆದನು. ಮಾತ್ರವಲ್ಲ, ಕರ್ತನ ಹೆಸರಿನ ನಿಮಿತ್ತ ಬಾಧೆಯನ್ನು ಸಹಿಸಿಕೊಳ್ಳುವದಕ್ಕಾಗಿ, ಕರೆದಿರುವನು. ಯಾಕೆಂದರೆ, ಕ್ರಿಸ್ತನೂ ಶ್ರಮೆಯನ್ನು ಅನುಭವಿಸಿ, ಆತನ ಹೆಜ್ಜೆಯ ಜಾಡನ್ನು ಹಿಂಬಾಲಿಸುವಂತೆ, ನಮಗೆ ಮಾದರಿಯನ್ನು ತೋರಿಸಿ ಹೋಗಿದ್ದಾನೆ!

ಕ್ರಿಸ್ತನಿಗಾಗಿ ಶ್ರಮೆಯನ್ನು ಅನುಭವಿಸುವದು ನಮಗೆ ಭಾಗ್ಯಕರವಾದದ್ದು! ಆತನು ನಮಗಾಗಿ ಎಷ್ಟೊಂದು ಕಷ್ಟಗಳನ್ನು ಸಹಿಸಿದನು! ಮುಳ್ಳಿನ ಕಿರೀಟವನ್ನು ಧರಿಸಿದಾಗಲೂ ಕೈಗಳಲ್ಲಿ ಕಾಲುಗಳಲ್ಲಿ ಮೊಳೆಗಳನ್ನು ಜಡಿದಾಗಲೂ ಎಷ್ಟೊಂದು ನೋವನ್ನು ಅನುಭವಿಸಿರುವನು! ನಿಮ್ಮ ಮೇಲೆ ಇಟ್ಟ ಪ್ರೀತಿಗಾಗಿ ಅಲ್ಲವೇ, ಆತನು ಅಷ್ಟೊಂದು ಬಾಧೆಗಳನ್ನು ತಾಳ್ಮೆಯಿಂದ ಸಹಿಸಿದನು! ಅಂದು ಪೌಲನೂ ಸೀಲನೂ ಸೆರೆಮನೆಯಲ್ಲಿ ಹೊಡೆಯಲ್ಪಟ್ಟು ಬಂಧಿಸಲ್ಪಟ್ಟಾಗ ತಾವು ಶ್ರಮೆಯನ್ನು ಅನುಭವಿಸಲೆಂದೇ ಕರೆಯಲ್ಪಟ್ಟವರೆಂದು ತಿಳಿದರು. ಕರ್ತನಿಗಾಗಿ ಬಾಧೆಯನ್ನು ಅನುಭವಿಸುವದು ಭಾಗ್ಯಕರವಾಗಿ ಇತ್ತು. ಆದ್ದರಿಂದಲೇ ಶರೀರದ ಬಾಧೆಯನ್ನು ಲೆಕ್ಕಿಸದೆ, ರಾತ್ರಿಯಲ್ಲಿ ಕರ್ತನನ್ನು ಹಾಡಿ ಸ್ತುತಿಸಿ ಆರಾಧಿಸಿದರು. ಬಾಧೆಗಳ ಮಧ್ಯದಲ್ಲೂ ಹಾಡುಗಳನ್ನು ಹಾಡುವ ರಹಸ್ಯವೇನು? ತಾವು ಬಾಧೆಗಳನ್ನು ಅನುಭವಿಸಲು ಕರೆಯಲ್ಪಟ್ಟವರು ಎಂಬ ಅರಿವೇ ಆಗಿದೆ. ಪ್ರತಿಯೊಬ್ಬ ಅಪೊಸ್ತಲನ ಶಿಷ್ಯನ ಜೀವಿತದ ಅಂತ್ಯವನ್ನು ಓದಿ ನೋಡಿರಿ. ಪೇತ್ರನು ತಲೆಕೆಳಗಾಗಿ ಶಿಲುಬೆಗೆ ಹಾಕಿಸಿಕೊಂಡು ಸತ್ತನು. ಮಾರ್ಕನನ್ನು ರಥಕ್ಕೆ ಕಟ್ಟಿ ಎಳೆದು ರೋಮ್ ನಗರದಲ್ಲಿ ಕೊಂದರು. ಮತ್ತಾಯನು ಐಥಿಯೋಪ್ಯದಲ್ಲಿ ರಕ್ತ ಸಾಕ್ಷಿಯಾಗಿ ಸತ್ತನು. ತೋಮನು ಭಾರತ ದೇಶದಲ್ಲಿ ರಕ್ತಸಾಕ್ಷಿಯಗಿ ಸತ್ತನು. ಅವರೆಲ್ಲರೂ ಅವರ ಕರೆಯನ್ನು ಅರಿತಿದ್ದರು.

ದೇವಮಕ್ಕಳೇ, ಕಷ್ಟಸಂಕಟಗಳು ಬರುವಾಗ ಸೋತುಹೋಗಬೇಡಿರಿ. ಕ್ರಿಸ್ತನ ಪ್ರೀತಿಯನ್ನು ಬಿಟ್ಟು ಅಗಲಬೇಡಿರಿ. ಕಷ್ಟಗಳ ಸಮಯದಲ್ಲಿ ಕರ್ತನು ನಿಮಗೆ ಕೃಪೆ ನೀಡಿ ಮಾರ್ಗ ನಡೆಸುವನು.

*ನೆನಪಿಗೆ : ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು (ಅ.ಕೃ. 9:16).*

ಅಕ್ಟೋಬರ್ 23

## ಪ್ರವಾದಿಯಾಗಲು ಕರೆ!

ಬೆಳಿಗ್ಗೆ : ಯೆರೆಮೀಯ 1,2
ಸಂಜೆ : 1 ತಿಮೊ. 3

ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ, ನಿನ್ನನ್ನು ತಿಳಿದಿದ್ದೆನು; ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು. ಜನಾಂಗಗಳಿಗೆ ಪ್ರವಾದಿಯನ್ನಾಗಿ ನಿನ್ನನ್ನು ನೇಮಿಸಿದ್ದೇನೆ (ಯೆರೆ. 1:5).

ಪ್ರವಾದಿಯಾದ ಯೆರೆಮೀಯನನ್ನು ದೇವರು ಅವನು ತಾಯಿಯ ಗರ್ಭದಲ್ಲಿರುವಾಗಲೇ ಆರಿಸಿಕೊಂಡನು. ಚಿಕ್ಕ ಪ್ರಾಯದಲ್ಲೇ ಕರ್ತನಿಂದ ಅವನಿಗೆ ಕರೆ ಬಂದಿತು. ಯೆರೆಮೀಯನು ತಾನು ಆ ಕರೆಗೆ ಅಪಾತ್ರನೆಂಬುದನ್ನು ಅರಿತನು. "ಅಯ್ಯೋ, ಕರ್ತನಾದ ಯೆಹೋವನೇ, ನಾನು ಮಾತು ಬಲ್ಲವನಲ್ಲ, ಬಾಲಕನು" ಎಂದು ಹೇಳಿದನು. ಆಗ ಯೆಹೋವನು "ಬಾಲಕನೆನ್ನಬೇಡ, ಯಾರ ಬಳಿಗೆ ನಿನ್ನನ್ನು ಕಳುಹಿಸುತ್ತೇನೋ ಅವರೆಲ್ಲರ ಬಳಿಗೆ ನೀನು ಹೋಗೇ ಹೋಗುವಿ; ನಾನು ಆಜ್ಞಾಪಿಸಿದ್ದನ್ನೆಲ್ಲಾ ನುಡಿದೇ ನುಡಿಯುವಿ. ಅವರಿಗೆ ಅಂಜಬೇಡ" ಅಂದನು (ಯೆರೆ.1:6–8).

ಕರ್ತನ ಆರಿಸುವಿಕೆ ಹಾಗೂ ಕರೆ ಬಹಳ ಆಶ್ಚರ್ಯವಾದದ್ದು. ಕೆಲವರನ್ನು ಪ್ರಪಂಚದ ಸೃಷ್ಟಿಗೆ ಮೊದಲೇ ಆರಿಸಿಕೊಳ್ಳುವನು (ಎಫೆ. 1:4). ಕೆಲವರನ್ನು ತಾಯಿಯ ಗರ್ಭದಲ್ಲಿಯೇ ಆರಿಸಿಕೊಳ್ಳುವನು (ಗಲಾ. 1:15). ಕೆಲವರನ್ನು ಉಪದ್ರವಗಳ ಗುಹೆಯಲ್ಲಿ ಆರಿಸಿಕೊಳ್ಳುವನು. ಒಂದು ಆಸ್ಪತ್ರೆಯಲ್ಲಿ ಒಂಭತ್ತು ವರ್ಷದ ಬಾಲಕನೊಬ್ಬನು ಕ್ಯಾನ್ಸರ್ ವ್ಯಾಧಿಯಿಂದ ಬಳಲುತ್ತಿದ್ದನು. ಆದರೂ ಸಂತೋಷದಿಂದ ಕರ್ತನನ್ನು ಹಾಡಿ ಸ್ತುತಿಸುತ್ತಿದ್ದನು. ಅಲ್ಲಿಗೆ ಬರುವವರೆಲ್ಲರೊಂದಿಗೆ ಯೇಸುಕ್ರಿಸ್ತನನ್ನು ಕುರಿತು ಚೆನ್ನಾಗಿ ಮಾತನಾಡುತ್ತಿದ್ದನು. ಸಾಕ್ಷಿಕೊಡುತ್ತಿದ್ದನು. ಅವನ ಜನ್ಮದಿನ ಬಂತು. ಅಂದು ಚಿಕಿತ್ಸೆ ಕೊಡಲು ಬಂದ ವೈದ್ಯರನ್ನು ನೋಡಿ–ಅಯ್ಯಾ, ಇಂದು ನನ್ನ ಒಂಭತ್ತನೇ ಹುಟ್ಟಿದ ದಿನ. ಒಂಭತ್ತು ಜನರನ್ನು ದೇವರ ಬಳಿಗೆ ನಡೆಸಬೇಕೆಂದು ಹರಕೆಯೊಂದಿಗೆ ಪ್ರಾರ್ಥಿಸಿದೆನು. ಬೆಳಗಿನಿಂದ ಎಂಟು ಜನರನ್ನು ಕರ್ತನ ಬಳಿಗೆ ನಡೆಸಿದೆನು. ಇಂದು ನೀವು ನಿಮ್ಮ ಆತ್ಮವನ್ನು ಯೇಸುಕ್ರಿಸ್ತನಿಗೆ ಒಪ್ಪಿಸಿಕೊಟ್ಟರೆ, ನಾನು ಸಂತೋಷದಿಂದ ಸಾಯುವೆನು. ನೀವು ಪರಲೋಕಕ್ಕೆ ಬಂದು ನನ್ನನ್ನು ನೋಡಬಹುದು ಎಂದು ಹೇಳಿದನು. ಆ ವೈದ್ಯರು ಅವನ ಮಾತಿಗೆ ಬಿಕ್ಕಿ ಬಿಕ್ಕಿ ಅತ್ತರು. ಆ ಹಾಸಿಗೆಯ ಬಳಿಯೇ ಮೊಣಕಾಲೂರಿ "ನನ್ನನ್ನು ನಾನು ಒಪ್ಪಿಸಿಕೊಡುತ್ತೇನೆ" ಎಂದು ಹೇಳಿದರು. ಅನೇಕರು ಚಿಕ್ಕ ಪ್ರಾಯದಲ್ಲೇ ತಮ್ಮನ್ನು ಕರ್ತನಿಗೆ ಒಪ್ಪಿಸಿಕೊಟ್ಟು ಆತನ ಸೇವೆ ಮಾಡಿರುವರು.

ದೇವಮಕ್ಕಳೇ, ನಿಮ್ಮ ಮಕ್ಕಳನ್ನು ಕರ್ತನಿಗೆಂದು ಒಪ್ಪಿಸಿಕೊಡಿರಿ. ಕರ್ತನು ನಿಮ್ಮನ್ನು ಕರೆಯುವ ಕರೆಯನ್ನು, ಆರಿಸಿಕೊಳ್ಳುವಿಕೆಯನ್ನು ಅರಿತುಕೊಂಡು ಅದನ್ನು ನಿಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಿರಿ.

*ನೆನಪಿಗೆ : ಯೆಹೋವನು ನಿಮ್ಮನ್ನು ಪ್ರೀತಿಸಿ, ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ನಿಮ್ಮನ್ನು ಬಿಡುಗಡೆ ಮಾಡಿದನು (ಧರ್ಮೋ. 7:8).*



ಅಕ್ಟೋಬರ್ 24

## ಮೋಶೆಯ ಕರೆ!

ಬೆಳಿಗ್ಗೆ : ಯೆರೆಮೀಯ 3,4,5
ಸಂಜೆ : 1 ತಿಮೊ. 4

ನನ್ನ ಜನರಾಗಿರುವ ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಹೊರಗೆ ಬರಮಾಡುವದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ ಬಾ ಅಂದನು (ವಿಮೋ. 3:10).

ಮುಳ್ಳಿನ ಪೊದೆಯಲ್ಲಿ ಉರಿಯುತ್ತಿದ್ದ ಅಗ್ನಿಯಿಂದ ಮೋಶೆಗೆ ಸೇವೆಯ ಕರೆ ಬಂದಿತು. ಜವಾಬ್ದಾರಿಯೂ, ಕರ್ತವ್ಯವೂ ಬಂದಿತು. ಮುಳ್ಳಿನ ಪೊದೆಯ ಮಧ್ಯದಿಂದ ಕರ್ತನು ಮೋಶೆಯನ್ನು ಹೆಸರು ಹಿಡಿದು ಕರೆದನು. ಮಾತ್ರವಲ್ಲ ಸೇವೆಗಾಗಿ ಕರೆಕೊಟ್ಟನು. ಮುಳ್ಳಿನ ಪೊದೆ ಹತ್ತಿ ಉರಿಯುತ್ತಿದ್ದರೂ, ಅದು ಸುಟ್ಟು ಹೋಗದೆ ಇರುವದನ್ನು ಕಂಡ ಮೋಶೆ ಆಶ್ಚರ್ಯದಿಂದ ಪೊದೆಯ ಹತ್ತಿರ ನೋಡಲು ಹೋದಾಗ, ದೇವರು ಆ ಪೊದೆಯೊಳಗಿಂದ "ಮೋಶೆಯೇ, ಮೋಶೆಯೇ ಎಂದು ಕರೆದನು. ಅದಕ್ಕವನು ಇಗೋ ಇದ್ದೇನೆ ಅಂದನು" (ವಿಮೋ. 3:4).

ಸಮುವೇಲನನ್ನು ಅವನ ಬಾಲ್ಯದಲ್ಲಿಯೇ ಕರ್ತನು ಹೆಸರು ಹಿಡಿದು ಕರೆದನು. ಬಹುದೊಡ್ಡ ಪ್ರವಾದಿಯನ್ನಾಗಿ ಮಾಡಿದನು. ಆದರೆ ಮೋಶೆಯನ್ನು ಅವನ ಎಂಭತ್ತನೇ ವರ್ಷದಲ್ಲಿ ಕರೆದನು. ದೇವರಿಗೆ ವಯಸ್ಸಿನ ವ್ಯತ್ಯಾಸ ದೊಡ್ಡದಲ್ಲ, ಆತನು ಯಾರನ್ನು ಬೇಕಾದರೂ ಆರಿಸಿಕೊಳ್ಳುವನು. ನಾನು ಎಲ್ಲರ ಮೇಲೆ ನನ್ನ ಆತ್ಮವನ್ನು ಸುರಿಸುವೆನು. ಯೌವನಸ್ಥರು ದರ್ಶನಗಳನ್ನು ಕಾಣುವಂತೆ ವಯೋವೃದ್ಧರು ಸ್ವಪ್ನಗಳನ್ನು ಕಾಣುವಂತೆ ಕರೆಯುವೆನು ಎಂದು ಹೇಳಿರುವನಲ್ಲವೇ? ಕರ್ತನ ಅಗ್ನಿ ನಿಮ್ಮನ್ನು ಸೇವೆಗೆ ಯೋಗ್ಯರನ್ನಾಗಿ ಮಾರ್ಪಡಿಸುವದು. ಮೋಶೆಯ ಮೇಲೆ ಕರ್ತನ ಅಗ್ನಿ ಇದ್ದದರಿಂದ ಫರೋಹನನಿಂದಲೂ ಅವನ ಮಂತ್ರವಾದಿಗಳಿಂದಲೂ ಮೋಶೆಯನ್ನು ಜಯಿಸಲಾಗಲಿಲ್ಲ. ಹೌದು, ನಿಮ್ಮನ್ನು ಕರೆದಾತನು ನಂಬಿಗಸ್ತನು. ಒಬ್ಬನೂ ಎದುರಿಸಿ ನಿಲ್ಲಲಾಗದ ವಾಕ್ಚಾತುರ್ಯದಿಂದಲೂ ಬಲದಿಂದಲೂ ನಿಮ್ಮನ್ನು ತುಂಬಿಸುವನು. ಯಾಕೋಬಿಗೆ ವಿರೋಧವಾಗಿ ಮಂತ್ರತಂತ್ರಗಳಿಲ್ಲ, ಇಸ್ರಾಯೇಲಿಗೆ ವಿರೋಧವಾಗಿ ಕಣಿ ಹೇಳುವವರಿಲ್ಲ (ಅರಣ್ಯ. 23:23). ಕರ್ತನ ಅಗ್ನಿ ನಿಮ್ಮ ಮೇಲಿರುವದರಿಂದ ಪಾತಾಳದ ಶಕ್ತಿಗಳು ನಿಮ್ಮನ್ನು ಜಯಿಸಲಾರವು. ಆದ್ದರಿಂದ ಎಂಥಹ ಪರಿಸ್ಥಿತಿಯಲ್ಲಿಯೂ ನೀವು ಕರ್ತನಿಗೆಂದು ಸೇವೆ ಮಾಡಲು ತೀರ್ಮಾನಿಸಿರಿ. ದೇವರು ನಿಮಗೆ ಕೊಟ್ಟ ತಲಾಂತುಗಳನ್ನು ದೇವರ ನಾಮ ಮಹಿಮೆಗಾಗಿ ಉಪಯೋಗಿಸಿ.

ದೇವಮಕ್ಕಳೇ, ನಿಮ್ಮನ್ನು ಪರಲೋಕದ ಅಗ್ನಿಯಿಂದ ತುಂಬಿಸಿಕೊಳ್ಳಿರಿ. ನೀವು ಎಲ್ಲೆಲ್ಲಿಯೂ ಹತ್ತಿ ಉರಿಯುವ ಅಗ್ನಿ ಜ್ವಾಲೆಗಳೆಂಬುದನ್ನು ಮರೆಯದಿರಿ (ಇಬ್ರಿ. 1:7). ಕರ್ತನು ನಿಮ್ಮನ್ನು ಪಾಪವು ತಾಕದ ಅಗ್ನಿಯಾಗಿ, ಶೋಧನೆ ಜಯಿಸದ ಅಗ್ನಿಯಾಗಿ ಉಪಯೋಗಿಸುವನು.

*ನೆನಪಿಗೆ : ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ (ಯೆಶಾ. 60:1).*

ಅಕ್ಟೋಬರ್
25

## ಗಿದ್ಯೋನನ ಕರೆ!

ಬೆಳಿಗ್ಗೆ : ಯೆರೆಮೀಯ 6,7,8
ಸಂಜೆ : 1 ತಿಮೊ. 5

ಯೆಹೋವನ ದೂತನು ಗಿದ್ಯೋನನಿಗೆ ಪ್ರತ್ಯಕ್ಷವಾಗಿ ಅವನಿಗೆ–ಪರಾಕ್ರಮಶಾಲಿಯೇ, ಯೆಹೋವನು ನಿನ್ನ ಸಂಗಡ ಇದ್ದಾನೆ ಅಂದನು (ನ್ಯಾಯ. 6:12).

ಗಿದ್ಯೋನನನ್ನು ಯೆಹೋವನ ದೂತನು ಪರಾಕ್ರಮಶಾಲಿ ಎಂದು ಕರೆಯುವದನ್ನು ನೋಡುತ್ತೇವೆ. ಗಿದ್ಯೋನನು ಕರೆಯಲ್ಪಟ್ಟವನು, ಆರಿಸಿಕೊಳ್ಳಲ್ಪಟ್ಟವನು. ಗಿದ್ಯೋನನಿಗೆ ಯೆರುಬ್ಬಾಳನೆಂದೂ ಹೆಸರುಂಟು (ನ್ಯಾಯ. 6:32). ಮನಸ್ಸೆ ಕುಲದಲ್ಲಿ ಇವನ ಮನೆಯು ಕನಿಷ್ಠವಾದದ್ದಾಗಿತ್ತು. ಇವನ ಕಾಲದಲ್ಲಿ ಇಸ್ರಾಯೇಲ್ಯರು, ಬಾಳ್ ದೇವತೆಯನ್ನು ಆರಾಧಿಸುತ್ತಿದ್ದದರಿಂದ ಕರ್ತನು ಅವರನ್ನು ಮಿದ್ಯಾನ್ಯರ ಕೈಗಳಿಗೆ ಒಪ್ಪಿಸಿಕೊಟ್ಟನು.

ಗಿದ್ಯೋನನು ಮೊದಲು ಒಬ್ಬ ಹೇಡಿಯಂತೆ ಕೀಳರಿಮೆಯುಳ್ಳವನಂತಿರುವದನ್ನು ನೋಡುತ್ತೇವೆ. ಮಿದ್ಯಾನ್ಯರಿಗೆ ಗೊತ್ತಾಗದ ಹಾಗೆ ದ್ರಾಕ್ಷೆಯ ಆಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು. ಆದರೆ ಯೆಹೋವನ ದೂತನು ನಿರೀಕ್ಷಿಸದ ರೀತಿಯಲ್ಲಿ ಗಿದ್ಯೋನನನ್ನು ಸಂಧಿಸಿ "ಪರಾಕ್ರಮಶಾಲಿಯೇ" ಎಂದು ಕರೆದನು. ಕರ್ತನು ಹೇಡಿಯನ್ನು ಶೂರನನ್ನಾಗಿ ಮಾರ್ಪಡಿಸುವಾತನು. ಪಾಪಿಯನ್ನು ನೀತಿವಂತನನ್ನಾಗಿಸುವವನು. ಇಸ್ರಾಯೇಲ್ಯರಲ್ಲಿ ಮನಸ್ಸೆ ಚಿಕ್ಕ ಕುಲವೆಂದು ಎಣಿಸಿದ್ದ ಗಿದ್ಯೋನನನ್ನು ಕರ್ತನು ಆರಿಸಿಕೊಂಡದ್ದು ಆಶ್ಚರ್ಯವಲ್ಲವಾ! ಕರ್ತನು ನಿಮ್ಮನ್ನು ಮನುಷ್ಯರು ನೋಡುವ ರೀತಿಯಲ್ಲಿ ನೋಡುವದಿಲ್ಲ. ಆತನ ಕೃಪೆ ಹಾಗೂ ಕರುಣೆ, ನಿಮ್ಮನ್ನು ದೊಡ್ಡ ಕಾರ್ಯಗಳನ್ನು ಮಾಡುವವರಂತೆ ಮಾರ್ಪಡಿಸುವದು. ಒಬ್ಬ ದಾಸಿಯ ಮುಂದೆ ಕರ್ತನನ್ನು ಅಲ್ಲಗಳೆದು ಶಪಿಸಿದ ಪೇತ್ರನನ್ನು ದೊಡ್ಡ ಅಪೊಸ್ತಲನನ್ನಾಗಿ ಮಾರ್ಪಡಿಸಲು ಆತನು ಶಕ್ತನಾಗಿದ್ದನು. ಮೊಲಗಳಂತೆ ಹೇಡಿಗಳಾಗಿದ್ದ ಶಿಷ್ಯರನ್ನು ಬೇಟೆ ನಾಯಿಗಳಂತೆ ಧೀರರಾದ ಶಿಷ್ಯರನ್ನಾಗಿ ಮಾರ್ಪಡಿಸಿದನು. ಆತನು ಆರಿಹೋಗುತ್ತಿರುವ ಬತ್ತಿಯನ್ನು ಪ್ರಕಾಶಿಸುವಂತೆ ಮಾಡುವ ದೇವರು, ಜೋಲುಬಿದ್ದ ಮೊಣಕಾಲುಗಳನ್ನು ಬಲಪಡಿಸುವಾತನು. ನಿಶ್ಚಯವಾಗಿ ನಿಮ್ಮನ್ನು ಆತನು ಅದ್ಭುತವಾಗಿ ಮಾರ್ಪಡಿಸುವನು. ತಾನು ಕರ್ತನಿಂದ ಕರೆಯಲ್ಪಟ್ಟವನು ಎಂಬ ಅರಿವು ಗಿದ್ಯೋನ್ಯನನ್ನು ಧೈರ್ಯಪಡಿಸಿತು. ತನ್ನ ತಂದೆಯು ಆರಾಧಿಸುತ್ತಿದ್ದ ವಿಗ್ರಹವನ್ನು ಕಿತ್ತೆಸೆದನು. ನಂತರ ಮಿದ್ಯಾನ್ಯರನ್ನು ಹೊಡೆದೋಡಿಸಲು ಕರ್ತನಿಗಾಗಿ ವೈರಾಗ್ಯಗೊಂಡು ಯುದ್ಧದಲ್ಲಿ ಜಯಗಳಿಸಿದನು.

ದೇವಮಕ್ಕಳೇ, ನೀವು ಕರ್ತನಿಗೆ ವಿಧೇಯರಾಗುವಾಗ ನಿಮ್ಮ ಜೀವಿತದಲ್ಲಿ ಆಶ್ಚರ್ಯಕರವಾದ ತಿರುವು ಉಂಟಾಗುವಂತೆ ಮಾಡುವನು. ಅತಿಶಯವಾದ ಕಾರ್ಯಗಳನ್ನು ಮಾಡುವನು. ನೀವು ಆತ್ಮೀಕವಾಗಿ ಬಲಶಾಲಿಗಳಾಗಿ ಮಾರ್ಪಡುವಿರಿ. ಆದ್ದರಿಂದ ಕರ್ತನಿಗೆ ಬೇಡದ ಸಂಗತಿಗಳನ್ನು ನಿಮ್ಮಿಂದ ದೂರಮಾಡಿರಿ.

*ನೆನಪಿಗೆ : ಮಹತ್ಕಾರ್ಯಗಳನ್ನು ನಡಿಸುವದಕ್ಕೆ ಆತನೊಬ್ಬನೇ ಶಕ್ತನು. ಆತನ ಕೃಪೆಯು ಶಾಶ್ವತವಾದದ್ದು (ಕೀರ್ತ. 136:4).*



ಅಕ್ಟೋಬರ್
26

## ದೇವರ ಕರೆ!

ಬೆಳಿಗ್ಗೆ : ಯೆರೆಮೀಯ 9,10,11
ಸಂಜೆ : 1 ತಿಮೋಥೆ. 6

ಎಲೈ ಕಷ್ಟಪಡುವವರೇ ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ. ನಾನು ನಿಮಗೆ ವಿಶ್ರಾಂತಿ ಕೊಡುವೆನು (ಮತ್ತಾ. 11:28).

ಪ್ರೀತಿಯ ಕರೆಗಳಿಂದ ತುಂಬಿರುವ ಪುಸ್ತಕವೇ ಸತ್ಯವೇದ. ಕನಿಕರ ತುಂಬಿದ ಕರ್ತನು ಹಲವು ವಿಧಗಳಲ್ಲಿ ಮನುಷ್ಯನನ್ನು ತನ್ನ ಅನ್ಯೋನ್ಯತೆಗೆ ಕರೆಯುತ್ತಲೇ ಇರುವನು. ಆತನ ಮಕ್ಕಳಾಗಿರುವದಕ್ಕೆ ಕರೆಯುತ್ತಾನೆ. ಆತನ ಸ್ನೇಹಿತರಾಗಿರುವಂತೆ ಕರೆಯುತ್ತಾನೆ. ಆತನೊಂದಿಗೆ ಅನ್ಯೋನ್ಯತೆ ಪಡೆಯುವಂತೆ ಕರೆಯುತ್ತಾನೆ. ಜ್ಞಾನಿಗಳನ್ನು ಅವಮಾನಪಡಿಸುವಂತೆ ಜ್ಞಾನಹೀನರನ್ನು ಆರಿಸಿಕೊಂಡು ಕರೆಯುತ್ತಾನೆ. ಆತನ ಕರೆ, ಆರಿಸಿಕೊಳ್ಳುವಿಕೆ ಆಶ್ಚರ್ಯಕರವಾದದ್ದು.

ಯೇಸುಕ್ರಿಸ್ತನು ಮಹಿಮೆಯ ರಾಜನಾಗಿದ್ದರೂ, ಆತನ ಅಂತರ್ಯದಲ್ಲಿ ಪ್ರೀತಿಗಾಗಿ ಹಂಬಲಿಸುತ್ತಲೇ ಇದ್ದನು. ಮೀನು ಹಿಡಿಯುವ ಸಾಧಾರಣ ಮನುಷ್ಯನಾದ ಪೇತ್ರನ ಬಳಿ ಬಂದು, ಸೀಮೋನನೇ, ನೀನು ನನ್ನನ್ನು ಪ್ರೀತಿಸುವೆಯಾ? ಎಂದು ಕೇಳಿದನು. ಅದಕ್ಕೆ ಪೇತ್ರನು "ಹೌದು, ಸ್ವಾಮಿ, ನಿನ್ನನ್ನು ಪ್ರೀತಿಸುವೆನು ಎಂಬುದನ್ನು ತಿಳಿದಿರುವಿ" ಅಂದನು. ಎಫೆಸ ಪಟ್ಟಣದ ಸಭೆಯು ಕ್ರಿಸ್ತನ ಪ್ರೀತಿಯಲ್ಲಿ ಹಿಂಜಾರಿದಾಗ ಮೊದಲಿದ್ದ ಪ್ರೀತಿಯನ್ನು ನೀನು ತೊರೆದು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ ಎಂದು ಕರ್ತನು ಹೇಳುತ್ತಾನೆ (ಪ್ರಕ. 2:4). ಹೌದು ದೇವರು ತಾನು ಕರೆದವರು, ಆರಿಸಿಕೊಂಡವರು ತನ್ನ ಪ್ರೀತಿಯಲ್ಲಿ ಬಿದ್ದುಹೋದಾಗ ಹಿಂಜಾರಿದಾಗ ಎಷ್ಟು ಮಾತ್ರವೂ ಸಹಿಸಲಾರನು. ಅದಕ್ಕಾಗಿ ಆತನ ಅಂತರ್ಯವು ಬಹಳವಾಗಿ ವೇದನೆಗೆ ಒಳಗಾಗುವದು. ಕರ್ತನ ಕರೆ, ವಿವಿಧ ರೀತಿಯದು. ಕೆಲವರನ್ನು ರಕ್ಷಣೆ ಹೊಂದುವಂತೆ ಕರೆಯುತ್ತಾನೆ. ಕೆಲವರನ್ನು ಅಭಿಷೇಕವನ್ನು ಹೊಂದಿಕೊಳ್ಳಲು ಕರೆಯುತ್ತಾನೆ. ಕೆಲವರನ್ನು ಆತ್ಮನ ವರಗಳನ್ನು ಪಡೆದುಕೊಳ್ಳುವಂತೆ ಕರೆಯುತ್ತಾನೆ. ಆದರೆ ನಮ್ಮೆಲ್ಲರನ್ನೂ ಆತನಲ್ಲಿ ಪ್ರೀತಿ ತೋರಿಸುವಂತೆ ಕರೆಯುತ್ತಾನೆ. ಆದ್ದರಿಂದಲೇ ನಿಮ್ಮನ್ನು ಹೆಸರಿಡಿದು ಕರೆಯುತ್ತಾನೆ.

ದೇವಮಕ್ಕಳೇ, ಇಂದು ನಿಮ್ಮನ್ನು ಕರೆಯುತ್ತಿರುವ ಉದ್ದೇಶವನ್ನು ಅರಿತಿರುವಿರಾ? ನಿಮ್ಮನ್ನು ಆರಿಸಿಕೊಂಡಿರುವ ಉದ್ದೇಶವನ್ನು ತಿಳಿದಿರುವಿರಾ? ಕರ್ತನ ಬಳಿ ಬಂದು ಆತನ ಕರೆಯುವಿಕೆಯನ್ನೂ ಆರಿಸಿಕೊಳ್ಳುವಿಕೆಯನ್ನೂ ದೃಢಪಡಿಸಿಕೊಳ್ಳಿರಿ. ಆತನಿಗಾಗಿ ಮಹತ್ಕಾರ್ಯಗಳನ್ನು ಮಾಡಲು ನಿಮ್ಮನ್ನು ಒಪ್ಪಿಸಿಕೊಡಿರಿ.

*ನೆನಪಿಗೆ : ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲು ತೆರೆದರೆ ಒಳಗೆ ಬಂದು ನಾನು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು (ಪ್ರಕ. 3:20).*

| ಅಕ್ಟೋಬರ್ 27 | ಯೋಹಾನನಿಗೆ ಕರೆ! | ಬೆಳಿಗ್ಗೆ : ಯೆರೆಮೀಯ 12,13,14<br>ಸಂಜೆ : 2 ತಿಮೊ. 1 |
|---|---|---|

"ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪಕಾಲ ವಿನೋದಗೊಳ್ಳುವದಕ್ಕೆ ಮನಸ್ಸು ಮಾಡಿದಿರಿ" (ಯೋಹಾ. 5:35).

ದೇವರಿಗಾಗಿ ಎದ್ದು ಪ್ರಕಾಶಿಸುವ ಜನರ ಒಂದು ಗುಂಪು ಇರುವದು. ಅದೇ ವೇಳೆಯಲ್ಲಿ ಆ ಪ್ರಕಾಶದಲ್ಲಿ ಆನಂದಿಸುವ ಇನ್ನೊಂದು ಗುಂಪಿನವರು ಇರುವರು. ಕರ್ತನ ಹೆಸರಿನಲ್ಲಿ ಅದ್ಭುತಗಳನ್ನು ಮಾಡುವ ಒಂದು ಗುಂಪಿನವರು ಇರುವರು. ಅದೇ ವೇಳೆಯಲ್ಲಿ ಅದ್ಭುತಗಳನ್ನು ಪಡೆದುಕೊಳ್ಳುವ ಇನ್ನೊಂದು ಗುಂಪಿನವರು ಇರುವರು. ಆದರೆ ಕೆಲವರು ಅದ್ಭುತಗಳನ್ನು ಮಾಡುವವರಾಗಿಯೂ ಇರದೆ, ಅದ್ಭುತಗಳನ್ನು ಪಡೆಯುವವರಾಗಿಯೂ ಇರದೆ, ಬರೀ ಪ್ರೇಕ್ಷಕರಾಗಿ ನಿಂತು ಪರಿತಾಪಕರವಾಗಿ ಸಾಗಿಹೋಗುವರು.

ಸ್ನಾನಿಕನಾದ ಯೋಹಾನನನ್ನು ಕುರಿತು ಯೇಸುಕ್ರಿಸ್ತನು ಸಾಕ್ಷಿ ಕೊಟ್ಟು "ಅವನು ಉರಿಯುವ ದೀಪದಂತೆ ಪ್ರಕಾಶಿಸಿದನು" ಎಂದು ಹೇಳುತ್ತಾನೆ. ಹೌದು, ಸ್ನಾನಿಕನಾದ ಯೋಹಾನನು ತನ್ನ ಕರೆಯಲ್ಲಿ ದೃಢವಾಗಿ ಇದ್ದದ್ದರಿಂದ ಆತನ ಬಳಿಗೆ ಬಂದವರೆಲ್ಲರೂ ಅಳುತ್ತಾ "ನಾವು ಏನು ಮಾಡಬೇಕು? ನಮ್ಮ ಪಾಪಗಳು ನೀಗಿಸಲ್ಪಡಲು ಏನು ಮಾಡಬೇಕು? ಎಂದು ಕೇಳಿದರು. ಅವರೆಲ್ಲರ ಆಂತರ್ಯಗಳು ಅರಿಯುವಂತೆ ಕರ್ತನು ಅವನನ್ನು ಬಲವಾಗಿ ಉಪಯೋಗಿಸಿದನು. ಯೋಹಾನನ ಕರೆ ಏನು? ಮನಪರಿವರ್ತನೆಯಾಗುವಂತೆ ದೀಕ್ಷಾಸ್ನಾನ ಕೊಡಬೇಕು. ಕ್ರಿಸ್ತನ ಬರುವಿಕೆಗಾಗಿ ಮಾರ್ಗವನ್ನು ಸಿದ್ಧಪಡಿಸಬೇಕು. ಆತನು ಅದ್ಭುತಗಳನ್ನು ಮಾಡಿದ್ದಾಗಿಯೋ, ವ್ಯಾಧಿಗಳನ್ನು ಗುಣಪಡಿಸಿದ್ದಾಗಿಯೋ ಸತ್ಯವೇದದಲ್ಲಿ ಎಲ್ಲೂ ಬರೆಯಲ್ಪಟ್ಟಿಲ್ಲ. ಅರಣ್ಯದಲ್ಲಿ ಮಿಡತೆಗಳನ್ನೂ, ಜೇನನ್ನು ಸೇವಿಸುತ್ತಾ ಕರ್ತನ ಚಿತ್ತಕ್ಕೆ ತನ್ನನ್ನು ಒಳಪಡಿಸಿಕೊಂಡನು. ಸ್ನಾನಿಕನಾದ ಯೋಹಾನನ ದಿನಗಳಿಗಿಂತಲೂ ಈ ದಿನಗಳಲ್ಲಿ ಅಧಿಕವಾದ ಕಾರಿರುಳು ದೇಶವನ್ನು ಆಕ್ರಮಿಸಿಕೊಂಡಿರುವದು. ಈ ಕಾಲದಲ್ಲಿ ಕರ್ತನಿಗಾಗಿ ಎದ್ದು ಪ್ರಕಾಶಿಸುವದು ಎಷ್ಟು ಅವಶ್ಯ.

ದೇವಮಕ್ಕಳೇ, ನೀವು ಕರ್ತನಿಗಾಗಿ ಎದ್ದು ಪ್ರಕಾಶಿಸಬೇಕಾಗಿ ನಿಮ್ಮ ಕರೆಯನ್ನೂ, ಆರಿಸಿಕೊಳ್ಳುವಿಕೆಯನ್ನೂ, ದೃಢಪಡಿಸಿಕೊಂಡು ಕ್ರಿಸ್ತನ ಕಡೆಗೆ ನಿಮ್ಮ ಕಣ್ಣುಗಳನ್ನು ಎತ್ತಿರಿ. ಆತನು ಯಾವ ಮನುಷ್ಯನನ್ನಾದರೂ ಪ್ರಕಾಶಿಸುವಂತೆ ಮಾಡುವನು. ತನ್ನ ಸೇವೆಯಲ್ಲಿ ಉಪಯೋಗಿಸಿಕೊಳ್ಳುವನು.

*ನೆನಪಿಗೆ : ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು... ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ (ಎಫೆ. 4:1–3).*



| ಅಕ್ಟೋಬರ್ 28 | ಬಾರ್ತಿಮಾಯನಿಗೆ ಕರೆ! | ಬೆಳಿಗ್ಗೆ :ಯೆರೆಮೀಯ 15,16,17<br>ಸಂಜೆ : 2 ತಿಮೊ. 2 |
|---|---|---|

"ಧೈರ್ಯವಿರಲಿ, ಏಳು, ನಿನ್ನನ್ನು ಕರೆಯುತ್ತಾನೆ ಅಂದರು" (ಮಾರ್ಕ. 10:49).

ಬಾರ್ತಿಮಾಯನನ್ನು ಯೇಸುವಿನ ಬಳಿಗೆ ಕರೆದುಕೊಂಡು ಹೋಗಲು ಬಂದವರು ಮೂರು ಮುಖ್ಯವಾದ ಮಾತುಗಳನ್ನು ಹೇಳಿದರು. ಮೊದಲನೆಯದು, 'ಧೈರ್ಯಗೊಳ್ಳು', ಎರಡನೆಯದು 'ಎದ್ದೇಳು', ಮೂರನೆಯದು 'ನಿನ್ನನ್ನು ಕರೆಯುತ್ತಾನೆ'. ಹಾಗೆ ಹೇಳುವದನ್ನು ಕೇಳಿದೊಡನೆಯೇ, ಅವನು ತನ್ನ ಹೊದಿಕೆಯನ್ನು ತೆಗೆದುಹಾಕಿ ಎದ್ದು ಯೇಸುವಿನ ಬಳಿಗೆ ಬಂದನು.

ಕ್ರಿಸ್ತನು ಕೆಲವರನ್ನು ಗುಣ ಹೊಂದಲು ಕರೆಯುತ್ತಾನೆ, ಕೆಲವರನ್ನು ಶಾಪಗಳು ಮುರಿಯಲ್ಪಡಲು ಕರೆಯುತ್ತಾನೆ. ಕೆಲವರನ್ನು ರಕ್ಷಿಸಲ್ಪಡಲು ಕರೆಯುತ್ತಾನೆ. ಶಿಷ್ಯರನ್ನು ತನ್ನನ್ನು ಹಿಂಬಾಲಿಸುವಂತೆ ಕರೆದನು. ಪೇತ್ರನನ್ನು ಮನುಷ್ಯರನ್ನು  ಹಿಡಿಯುವಂತೆ ಕರೆದನು. ನಿಮ್ಮನ್ನು ಸಾಕ್ಷಿಯಾಗಿ ನಿಲ್ಲುವಂತೆ ಕರೆಯುವನು. ಒಬ್ಬನನ್ನು ಕ್ರಿಸ್ತನಿಗೆಂದು ಆದಾಯ ಪಡಿಸುವಾಗ, ಅವನು ಅಂಧಕಾರದಿಂದ ಆಶ್ಚರ್ಯಕರವಾದ ಬೆಳಕಿನೆಡೆಗೆ ಬರುವನು. ಅಂಥವರು ಆರಿಸಲ್ಪಟ್ಟ ಸಂತತಿಯೂ ರಾಜವಂಶಸ್ಥರಾದ ಯಾಜಕ ವರ್ಗದವರಾಗಿಯೂ, ಪರಿಶುದ್ಧ ಜನಾಂಗವಾಗಿಯೂ, ಆತನಿಗೆ ಸ್ವಂತ ಜನವಾಗಿಯೂ, ಕಾಣಲ್ಪಡುವರು (1 ಪೇತ್ರ. 2:9). ಅವರು ಪರಲೋಕ ರಾಜ್ಯವನ್ನು ಸದಾಕಾಲಕ್ಕೂ ಸ್ವಾಸ್ಥ್ಯಮಾಡಿಕೊಳ್ಳುವರು. ಆದ್ದರಿಂದ ಜನರನ್ನು ಜನಾಂಗವನ್ನೂ ಕರ್ತನ ಬಳಿಗೆ ನಡೆಸಿರಿ. ಯೇಸುಕ್ರಿಸ್ತನು ಶಿಷ್ಯರನ್ನು ಮುಖ್ಯವಾಗಿ ಮೂರು ಕಾರಣಗಳಿಗಾಗಿ ಕರೆದನು. ಮೊದಲನೆಯದು, ಶಿಷ್ಯರು ತನ್ನೊಂದಿಗೆ ಇರಬೇಕು, ಎರಡನೆಯದು, ಅವರು ದೇವರ ರಾಜ್ಯದ ಸುವಾರ್ತೆಯನ್ನು ಸಾರಬೇಕು, ಮೂರನೆಯದು, ವ್ಯಾಧಿಪೀಡಿತರನ್ನು ಸ್ವಸ್ಥಮಾಡಿ, ಜನರಿಗೆ ಉಪಕಾರ ಮಾಡಬೇಕು ಎಂಬುದೇ (ಮಾರ್ಕ. 3:14,15; ಮತ್ತಾ.10:7,8).

ದೇವಮಕ್ಕಳೇ, ನೀವು ಕರ್ತನೊಂದಿಗೆ ಇರುವಂತೆ ಕರೆಯಲ್ಪಟ್ಟಿರುವಿರಿ. ಆದ್ದರಿಂದ ನಿಮ್ಮ ಮೊದಲ ಕರ್ತವ್ಯ ಕರ್ತನ ಪಾದದಲ್ಲಿ ಕುಳಿತು, ಆತನನ್ನು ಸ್ತುತಿಸಿ, ಆರಾಧಿಸಿರಿ. ಆತನನ್ನು ಘನಪಡಿಸಿರಿ. ಎರಡನೆಯದಾಗಿ ನೀವು ಕರ್ತನ ಬಗ್ಗೆ ಜನರಿಗೆ ತಿಳಿಸಿ ಬೋಧನೆ ಮಾಡಿರಿ. ನಿಮ್ಮ ಸಾಕ್ಷಿಯನ್ನು ಹೇಳಿರಿ. ಮೂರನೆಯದಾಗಿ, ಕರ್ತನ ಹೆಸರಿನಿಂದ ಜನರಿಗೆ ಒಳ್ಳೆಯದನ್ನು ಮಾಡಿರಿ, ಉಪಕಾರ ಮಾಡಿರಿ. ಅಗತ್ಯತೆ ಉಳ್ಳವರ ನಡುವೆ ನಿಮ್ಮನ್ನು ಇಟ್ಟಿರುವನು. ಬಾರ್ತಿಮಾಯನಂತೆ ಶಾರೀರಿಕವಾಗಿ, ಆತ್ಮೀಕ ರೀತಿಯಲ್ಲಿ ಕೋಟ್ಯಾನುಕೋಟಿ ಜನರು ಅಂಧಕಾರದಲ್ಲಿದ್ದು ಬೆಳಕು ಎಲ್ಲಿದೆ ಎಂದು ಪರಿತಪಿಸುತ್ತಿರುವರು. ಹಾಗೆ ಮಾಡಲು ಪವಿತ್ರಾತ್ಮನ ಬಲವನ್ನು ಹೊಂದುವಂತೆ ಕರ್ತನು ನಿಮ್ಮನ್ನು ಆಶೀರ್ವದಿಸಲಿ.

*ನೆನಪಿಗೆ : ಪ್ರೀತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳಿರಿ. ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು, ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ (1 ಕೊರಿಂ. 14:1).*

ಅಕ್ಟೋಬರ್ 29

## ಜಕ್ಕಾಯನ ಕರೆ!

ಬೆಳಿಗ್ಗೆ : ಯೆರೆಮೀಯ 18,19
ಸಂಜೆ : 2 ತಿಮೊ. 3

"ಜಕ್ಕಾಯನೇ ತಟ್ಟನೆ ಇಳಿದು ಬಾ. ಇಂದು ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು" ಅಂದನು (ಲೂಕ. 19:5).

ಪರಲೋಕದಿಂದ ಭೂಮಿಗೆ ಇಳಿದು ಬಂದ ದೇವಕುಮಾರನಾದ ಯೇಸುಕ್ರಿಸ್ತನು ಜಕ್ಕಾಯನಿಗೆ ಒಂದು ವಿಶೇಷವಾದ ಕರೆಯನ್ನು ಕೊಟ್ಟನು. ಅದು ಕೃಪೆಯ ಕರೆ, ಪ್ರೀತಿಯ ಕರೆ ಮಾತ್ರವಲ್ಲ ನಿತ್ಯನಿರಂತರವಾದ ಕರೆ. ಈ ಜಕ್ಕಾಯನು ಯಾರು? ಅವನು ಒಬ್ಬ ಸುಂಕದವನು. ಅನ್ಯಾಯವಾಗಿ ಸುಂಕ ವಸೂಲಿ ಮಾಡುತ್ತಿದ್ದವನು. ಯೆರಿಕೊ ಮಾರ್ಗವಾಗಿ ಯೇಸುಕ್ರಿಸ್ತನು. ಬರುವನೆಂಬ ಸುದ್ದಿಯನ್ನು ಕೇಳಿದ ಜಕ್ಕಾಯನು ಆತನನ್ನು ಕಣ್ಣಾರೆ ನೋಡಬೇಕೆಂದು ಬಯಸಿದನು. ಅವನು ಕುಳ್ಳನಾಗಿದ್ದು ಜನರ ಗುಂಪು ಹೆಚ್ಚಾಗಿದ್ದದರಿಂದ ಒಂದು ಆಲದ ಮರದ ಮೇಲೆ ಹತ್ತಿ ಕುಳಿತನು.

ಜಕ್ಕಾಯನು ಕುಳಿತಿದ್ದ ಆಲದ ಮರದ ಬಳಿ ಯೇಸು ಬಂದಾಗ ಜಕ್ಕಾಯನನ್ನು ಪ್ರೀತಿಯಿಂದ ಕರೆದನು. ಅವನ ಮನೆಯಲ್ಲಿ ತಂಗಲು ನಿರ್ಧರಿಸಿದನು. ಅವನಿಗೆ ಸಿಕ್ಕಿದ ಕರೆ ಏನಾಗಿತ್ತು? ಅಬ್ರಹಾಮನ ಮಗನಾಗಿರುವವನೇ ಎಂದು ಹೇಳಿದನು. ಅವನನ್ನು ನೋಡಿ ಇವನೂ ಸಹ ಅಬ್ರಹಾಮನ ವಂಶೀಕನಲ್ಲವೇ? ಎಂದು ಹೇಳಿದನು (ಲೂಕ. 19:9). ಇಸಾಕನು ದೇವರ ವಾಗ್ದಾನದಂತೆ ಅಬ್ರಹಾಮನಲ್ಲಿ ಹುಟ್ಟಿದವನು ಹಾಗೆಯೇ ಯೇಸುಕ್ರಿಸ್ತನೂ ಅಬ್ರಹಾಮನ ವಂಶದವನು (ಮತ್ತಾ. 1:1). ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟವರೆಲ್ಲರೂ ಆತನ ಮೂಲಕ ಅಬ್ರಹಾಮನ ವಂಶೀಕರಾಗಿರುವರು. ಸ್ನಾನಿಕನಾದ ಯೋಹಾನನು ದೇವರು ಅಬ್ರಹಾಮನಿಗೆ ಕಲ್ಲುಗಳಿಂದಲೂ, ಮಕ್ಕಳನ್ನು ಹುಟ್ಟಿಸಬಲ್ಲನೆಂದು ಹೇಳುತ್ತಾನೆ (ಮತ್ತಾ. 3:9). ಜಕ್ಕಾಯನು ಕಲ್ಲಿನಂಥ ಕಠಿಣ ಹೃದಯವುಳ್ಳವನಾಗಿದ್ದು ನಿರ್ದಯವಾಗಿ ಜನರಿಂದ ಸುಂಕ ವಸೂಲಿ ಮಾಡುತ್ತಿದ್ದಿರಬಹುದು. ಆದರೆ ಕ್ರಿಸ್ತನಾದರೋ, ಅವನನ್ನು ಅಬ್ರಹಾಮನ ಕುಮಾರನನ್ನಾಗಿ ಕಂಡನು. ಆಕಾಶದ ನಕ್ಷತ್ರದಂತೆ ಅವನನ್ನು ಮಾರ್ಪಡಿಸಿದನು. ಅದುವೇ ಕೃಪೆ. ಅದು ನಮ್ಮ ಬುದ್ಧಿಗೆ ಮಿಂಚಿದ್ದಾಗಿದೆ.

ದೇವಮಕ್ಕಳೇ, ಇಂದು ಆ ಕೃಪೆ ನಿಮ್ಮನ್ನು ಕರೆಯುವದು. ಜಕ್ಕಾಯನ ಮನೆಯಲ್ಲಿ ತಂಗಿದಾತನು ನಿಮ್ಮ ಮನೆಯಲ್ಲೂ, ನಿಮ್ಮ ಆಂತರ್ಯದಲ್ಲೂ ತಂಗಲು ಬಯಸುತ್ತಾನೆ. ನಿಮ್ಮ ಕುಟುಂಬಕ್ಕೆ ಯಜಮಾನನಾಗಿರಲು ಬಯಸುತ್ತಾನೆ. ನಿಮ್ಮ ಹೃದಯದ ಬಾಗಿಲಿನ ಬಳಿ ನಿಂತು ತಟ್ಟುತ್ತಿರುವನು. ಆತನ ಸ್ವರಕ್ಕೆ ಕಿವಿಗೊಡುವಿರಾ? ನಿಮ್ಮ ಆಂತರ್ಯದೊಳಗೆ ಅಂಗೀಕರಿಸಿಕೊಳ್ಳುವಿರಾ? ಕ್ರಿಸ್ತನು ನಿಮ್ಮೊಳಗೆ, ನಿಮ್ಮ ಮನೆಯೊಳಗೆ ತಂಗುವಾಗ, ಅಲ್ಲಿ ಪಾಪಕ್ಕಾಗಲಿ, ಅಕ್ರಮಗಳಿಗಾಗಲಿ ಸ್ಥಳವಿಲ್ಲ.

*ನೆನಪಿಗೆ : ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು, ಕೇಳಿ ಬಾಗಿಲನ್ನು ತೆರೆದರೆ, ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು (ಪ್ರಕ. 3:20).*



ಅಕ್ಟೋಬರ್ 30

## ಕರೆಯುವ ಯೇಸು!

ಬೆಳಿಗ್ಗೆ : ಯೆರೆಮೀಯ 20,21
ಸಂಜೆ : 2 ತಿಮೊ. 4

"ಗುರುವು ಬಂದಿದ್ದಾನೆ. ನಿನ್ನನ್ನು ಕರೆಯುತ್ತಾನೆ" (ಯೋಹಾ. 11:28).

ಬೆಥಾನ್ಯದಲ್ಲಿ ಒಂದು ಕುಟುಂಬ ಇತ್ತು. ಅಲ್ಲಿ ಮಾರ್ಥ ಮರಿಯಳೆಂಬ ಇಬ್ಬರು ಸಹೋದರಿಯರೂ, ಲಾಜ಼ರನೆಂಬ ಸಹೋದರನೂ ಇದ್ದರು. ಆ ಕುಟುಂಬದವರು ಯೇಸುಕ್ರಿಸ್ತನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಆತನು ಆ ಊರಿಗೆ ಬಂದಾಗಲೆಲ್ಲಾ ಅವರ ಮನೆಯಲ್ಲಿ ತಂಗುತ್ತಿದ್ದನು. ಅವರಿಗೆ ಬೋಧನೆ ಮಾಡುತ್ತಿದ್ದನು. ಮರಿಯಳಂತೂ ಆತನ ಪಾದಗಳ ಬಳಿ ಕುಳಿತು ಬಹಳ ಆಸಕ್ತಿಯಿಂದ ಆತನ ಬೋಧನೆಯನ್ನು ಆಲಿಸುತ್ತಿದ್ದಳು.

ಇದ್ದಕ್ಕಿದ್ದಂತೆ, ಆ ಕುಟುಂಬದಲ್ಲಿ ಒಂದು ಬಿರುಗಾಳಿ ಬೀಸಿತು. ಅವರ ತಮ್ಮ ಲಾಜ಼ರನು ವ್ಯಾಧಿಗೆ ತುತ್ತಾಗಿ ಸತ್ತುಹೋದನು. ಆ ಸಮಯದಲ್ಲಿ ಯೇಸುಕ್ರಿಸ್ತನು ಅಲ್ಲಿ ಇರಲಿಲ್ಲ. ಆತನು ಅಲ್ಲಿಗೆ ಬರಲಿಲ್ಲ. ನಾಲ್ಕು ದಿವಸಗಳಾಯಿತು. ಮಾರ್ಥಳು ಮರಿಯಳ ಬಳಿ ಬಂದು "ಗುರುವು ಬಂದಿದ್ದಾನೆ. ನಿನ್ನನ್ನು ಕರೆಯುತ್ತಾನೆ" (ಯೋಹಾ. 11:28) ಎಂದು ಹೇಳಿದಳು. ಆ ಮಾತುಗಳು ಅಳುತ್ತಿದ್ದ ಮರಿಯಳ ಕಿವಿಗಳಲ್ಲಿ ಜೇನಿನಂತೆ ಹೊಕ್ಕಿತು. ಯೇಸುಕ್ರಿಸ್ತನ ಮಾತುಗಳು ಕೃಪಾಭರಿತವಾದ ಮಾತುಗಳು. ಆದರಣೆ ನೀಡುವಂಥ ಮಾತುಗಳೆಂಬುದನ್ನು ಮರಿಯಳು ಅರಿತಿದ್ದಳು. ಆದರೆ ಯೇಸುಕ್ರಿಸ್ತನಾದರೋ ಲಾಜ಼ರನನ್ನು ಜೀವದಿಂದ ಎಬ್ಬಿಸಬೇಕೆಂಬ ಉದ್ದೇಶವುಳ್ಳವನಾಗಿದ್ದನು. ಅವರನ್ನು ಸಂತೈಸಲು ಮಾತ್ರ ಕ್ರಿಸ್ತನು ಅಲ್ಲಿಗೆ ಬರಲಿಲ್ಲ. ಲಾಜ಼ರನನ್ನು ಜೀವದಿಂದ ಎಬ್ಬಿಸುವದರಲ್ಲಿ ತೋರಿಬರುವ ತನ್ನ ಪ್ರೀತಿಯಲ್ಲಿ ಆ ಕುಟುಂಬವು ನೆಲೆಗೊಳ್ಳಬೇಕೆಂದು ಬಯಸಿದನು. ತನ್ನನ್ನು ಪ್ರೀತಿಸುವವರು ತನ್ನಲ್ಲಿ ನೆಲೆಯಾಗಿ ನಿಲ್ಲಬೇಕೆಂದು ಬಯಸುತ್ತಾನೆ. ಆತನಲ್ಲಿ ನೆಲೆಗೊಳ್ಳುವದು ಮಾತ್ರವಲ್ಲ, ಆತನಿಗಾಗಿ ಫಲಕೊಡುವವರಾಗಬೇಕೆಂದು ನಿರೀಕ್ಷಿಸುತ್ತಾನೆ. ತಂದೆಯನ್ನು ಮಹಿಮೆ ಪಡಿಸಬೇಕೆಂದು ಬಯಸುತ್ತಾನೆ. "ನೀವು ನನ್ನಲ್ಲಿಯೂ, ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು" (ಯೋಹಾ. 15:7,8) ಎಂದು ಹೇಳುತ್ತಾನೆ. ಇದುವೇ ಕ್ರಿಸ್ತನು ಕೊಡುವ ಕರೆಯಾಗಿದೆ.

ದೇವಮಕ್ಕಳೇ, ಕ್ರಿಸ್ತನನ್ನು ಪ್ರೀತಿಸುವದರ ಅರ್ಥ, ಆತನ ವಾಕ್ಯಗಳಲ್ಲಿ ನೆಲೆಗೊಂಡು, ಆತನಲ್ಲಿ ಕಲಿತುಕೊಂಡು, ಆತನಂತೆ ಜೀವಿಸಲು ಪ್ರಯತ್ನಿಸುವದರಲ್ಲಿ ಅಡಗಿದೆ. ಹಾಗೆ ಮಾಡಲು ಕರ್ತನು ನಿಮ್ಮನ್ನು ಆಶೀರ್ವದಿಸಲಿ.

*ನೆನಪಿಗೆ : ನನ್ನ ಹಿಂದೆ ಬನ್ನಿರಿ, ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು ಎಂದು ಹೇಳುತ್ತಲೇ ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು(ಮತ್ತಾ.4:19-20).*